సంపద



ಸಂವಾದ

ಸಾಹಿತ್ಯಿಕ, ಸಾಂಸ್ಕೃತಿಕ ಸಂಕಲನ

- ನಮ್ಮ ಸಾಹಿತ್ಯ, ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ
- ವಸ್ತುನಿಷ್ಟ ಸತ್ಯದ ಆವಿಷ್ಕಾರಕ್ಕೆ

ಸಂಪಾದಕರು :

ಡಿ. ಎಸ್. ನಾಗಭೂಷಣ

ರಾಘವೇಂದ್ರ ಪಾಟೀಲ

ಸ. ಉಷಾ

ಮುಖ ಪುಟದ ಚಿತ್ರ:
ಶಂಕರ ಪಾಟೀಲ

- ಆಜೀವ ಸದಸ್ಯತ್ವ ರೂ. **300-00**
- ವಾರ್ಷಿಕ ಚಂದಾ ರೂ. **30-00**

(ಅಂಚೆ ಮೂಲಕ ಚಂದಾ ಕಳುಹಿಸುವವರು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಆಜೀವ ಚಂದಾವನ್ನು ಒಂದು ವರ್ಷದಲ್ಲಿ ತಲಾ ನೂರು ರೂಪಾಯಿಗಳ ಮೂರು ಕಂತುಗಳಲ್ಲಿ ಕೊಡಬಹುದಾಗಿದೆ)

ಮುದ್ರಣ, ಪ್ರಕಾಶನ ಹಾಗೂ ಸಂಪಾದನೆ:
ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ಅಂಚೆ-577 531, ಚಿತ್ರದುರ್ಗ ಜಿಲ್ಲೆ
-ಇವರಿಗಾಗಿ.

ಮುದ್ರಕರು:
ನ್ಯಾಷನಲ್ ಪ್ರೆಸ್, ಹಾಸನ.

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೭

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ–೫೭೭ ೫೩೧

ಈ ಸಂಚಿಕೆಯ ಲೇಖಕರು:

- **ಹೇಮಾ ಪಟ್ಟಣಶೆಟ್ಟಿ,**
  'ಹೂಮನೆ', ಶ್ರೀದೇವಿ ನಗರ, ವಿದ್ಯಾಗಿರಿ, ಧಾರವಾಡ-580 004
- **ಜಿ. ಪಿ. ಬಸವರಾಜು,**
  ವರದಿಗಾರರು: 'ಪ್ರಜಾವಾಣಿ', ಮಿಲಾಗ್ರಿಸ್ ಕಟ್ಟಡ, ಹಂಪನಕಟ್ಟೆ,
  ಮಂಗಳೂರು-575 001
- **ಸವಿತಾ ನಾಗಭೂಷಣ,**
  ಪ್ರಧಾನ ಅಂಚೆ ಕಛೇರಿ, ಹಾಸನ-573 201
- **ಖುರ್‌ತುಲ್ಯೈನ್ ಹೈದರ್,**
  ಈ ವರ್ಷದ ಜ್ಞಾನಪೀಠ ಪ್ರಶಸ್ತಿ ಪಡೆದ ಉರ್ದು ಸಾಹಿತಿ
- **ಬಾನು ಮುಷ್ತಾಕ್,**
  ಪುರಸಭಾ ಸದಸ್ಯರು, 4348, ವಲ್ಲಭಾಯಿ ರಸ್ತೆ, ಹಾಸನ-573 201
- **ನಾರಾಯಣ ಸುರ್ವೆ** ಹಾಗೂ **ಕೇಶವ ಮೆಶ್ರಾಮ್,**
  ಖ್ಯಾತ ಮರಾಠಿ ಸಾಹಿತಿಗಳು
- **ರಾಘವೇಂದ್ರ ಪಾಟೀಲ,**
  ಜೀವಶಾಸ್ತ್ರ ಅಧ್ಯಾಪಕರು, ಕಿರಿಯ ಕಾಲೇಜು, ಮಲ್ಲಾಡಿಹಳ್ಳಿ-577 531
  ಚಿತ್ರದುರ್ಗ ಜಿಲ್ಲೆ
- **ಪ್ರಭುಸ್ವಾಮಿ ಮಠ,**
  ಕನ್ನಡ ಅಧ್ಯಾಪಕರು, ಲಾಲ್ ಬಹಾದುರ್ ಕಾಲೇಜು, ಸಾಗರ-577 401
  ಶಿವಮೊಗ್ಗ ಜಿಲ್ಲೆ
- **ಆನಂದಕಂದ** (ದಿವಂಗತ ಡಾ॥ ಬೆಟಗೇರಿ ಕೃಷ್ಣಶರ್ಮರು)
- **ಡಿ. ಎಸ್. ನಾಗಭೂಷಣ,**
  ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಹಾಸನ-573 201
- **ಸ. ಉಷಾ,**
  ಕನ್ನಡ ಅಧ್ಯಾಪಕರು, ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ-573 103
  ಹಾಸನ ಜಿಲ್ಲೆ

ಎರಡು ಕವಿತೆಗಳು

⊕ ಹೇಮಾ ಪಟ್ಟಣಶೆಟ್ಟಿ

1. ಹೊಸ ಹುಟ್ಟು

ಬಾನಿನಲ್ಲಿ ಕಾಳಕತ್ತಲೆ
ಯಲ್ಲಿ ಪುಟ್ಟ ಪುಟ್ಟ ತಾರೆಗಳು
ನಗುತ್ತವೆ ಕುಲುಕುಲು
ನನ್ನ ಮೈತುಂಬ ನನ್ನವರ
ನನ್ನ ಮಕ್ಕಳ ಕಚಗುಳಿ

ಪುಟ್ಟ ತಾರೆಗಳೆಂದರೆ
ನಾನು
ಪಟ್ಟ ಚಿಕ್ಕ ಚೊಕ್ಕ ನೋವ ಕಲೆಗಳು
ನನ್ನ ಕನಸ ಹೊದಿಕೆಗಳು
ಬಣ್ಣ ಬಣ್ಣಗಳ ಮಧುರ ಕುಣಿತಗಳು

ಚಿಕ್ಕೆಗಳು ನಭದಲ್ಲಿ
ಬಗೆ-ಬಗೆಯ ನಗೆಗಳು
ಮಗುವಿನಗಲ ಹಣೆ ಮೇಲೆ ತುಟಿ ಮೇಲೆ
ಕಣ್ಣುಗಳ ಮೇಲೆ
ನನ್ನ ತಾಯ್ತನದ ಜೀವೋನ್ಮೇಷಕ ವಿಸ್ತಾರದಲ್ಲಿ
ಹೀಗೆ ನಕ್ಕಿದ್ದನ್ನು
ಹೀಗೆ ನಲಿದದ್ದನ್ನು
ಕಂಡು ನಾನೀಗ ಸಂಕೋಚಗೊಂಡು
ತಾಯಿಯಿಂದ ಮಗುವಾಗುತ್ತಿದ್ದೇನೆ
ಮಗುವಿನಿಂದ ನಗು
ಗುರುತ್ವದಿಂದ ಲಘುತ್ವ ಹೊಂದಿ
ಬೆಳೆಯುತ್ತ ಇಳಿವು ಕಾಣುತ್ತಿದ್ದೇನೆ

ಇದು ಉಳಿವೆ ? ಅಥವಾ
ನಾ ಸಮೀಪಿಸುತ್ತಿರುವ ಅಜ್ಞಾತ ಮಹಿಮೆ.

ಇಲ್ಲ.
ನನಗೀಗ ತಡಕಾಟವಿಲ್ಲ ತೊಳಲಾಟವಿಲ್ಲ
ಹೊಯ್ದಾಟದ ನೆತ್ತಿಯೇರಿ ನರ್ತಿಸುವ ಸಮುದ್ರದ
ಒಡಲಲ್ಲೂ ಶಾಂತಿಯಿದೆ. ಗುಡುಗುಡಿಸುವ
ಮೋಡಗಳ ಹಾದಿಯಲ್ಲಿ ನಡೆದು ಬರುವ
ಸೂರ್ಯನ ಶಾಖಕ್ಕೂ ದೀಪ್ತಿಯಿರುತ್ತದೆ. ಇದೆ.
ಭೋರ್ಗರೆಯುವ ನದಿ ನದಗಳ ಕಿರುಚಾಟಕ್ಕೂ
ಹೊಂದಿಕೊಳ್ಳುವ ತೃಪ್ತ ಕಾಮನೆಯಿರುತ್ತದೆ.

ಈ ತಾರೆ ಈ ಮುಗು ಈ ನಗೆ
ಈ ನೀರು ನಭ ಬೆಂಕಿ
ನನ್ನ ಭೂಮಿಯ ಮೇಲೆ
ಹವೆಯಾಗಿ ಹೂವಾಗಿ ನಿತ್ಯ
ಸಂಚರಿಸತೊಡಗಿವೆ.

ಈಗ
ನಾ ನಿಸರ್ಗ
ದ ಹೊಚ್ಚ ಹೊಸ ಉದ್ಗಾರ.

2. ಗೊತ್ತಿಲ್ಲ

ಗೊತ್ತಿಲ್ಲ
ಮೊನ್ನೆ ಹುಣ್ಣಿಮೆ ರಾತ್ರಿ
ನನ್ನ ತೊಡೆದಿಂಬ ಮೇಲಿರಿಸಿ
ತನ್ನ ತಲೆ
ಬಹಳ ಹೊತ್ತಿನ ತನಕ ಅದು ಇದು
ಮಾತಾಡಿ ಆಡಿ ಹಾಡಿ ಕಾಡಿ
ನಿಶ್ಚಿಂತ ಒರಗಿದೀತನ
ರೆಪ್ಪೆಯುಗಳದ ಮೇಲೆ
ಅತ್ತೊಮ್ಮೆ ಇತ್ತೊಮ್ಮೆ

ನತ್ತು ಚಿಮುಕಿಸುತ
ನಕ್ಕವಳು ನಲಿದವಳು
ಯಾರು
ಗೊತ್ತಿಲ್ಲ ನನಗೆ.

ನನ್ನ ಕೈ ಹಿಡಿದು
ಬೆಟ್ಟದ ಮೆಟ್ಟಿಲೊಂದೊಂದೆ
ಏರಿ ನನ್ನ ಏರುದಾರಿಗಳನ್ನು
ಬಯಲ ಬಾಂದಳದಲ್ಲಿ
ಗಂಗೆಯಾಗಿಸಿದವಳು ಯಾ
ರು ಗೊತ್ತಿಲ್ಲ ನನಗೆ.

ಉಸಿರು ಉಸಿರಿನ ಕೂಡ
ತರುಣನಾಗುತ್ತಾನೆ
ದಣಿವು ಕಡಿಯುತ್ತಾನೆ
ಕೊನೆಗೆ
ಉಬ್ಬಿ ಮಲಗುತ್ತಾನೆ
ಇವನ ನರನರಗಳಲಿ ಆಗ
ಸುಖದ ಆಸವ ಹರಿಸಿದಾ ಸಖಿಯು
ಯಾರೆಂದು
ಕೇಳಿದರೆ ಹೇಳುತ್ತಾನೆ–
ಗೊತ್ತಿಲ್ಲ ನನಗೆ.

ನನಗೊಂದು ಹೆಸರುಂಟು. ಆದರೆ
ಇವನು ಕರೆದಿದ್ದಾನೆ:
ಬೆಳಕಂತೆ ಕತ್ತಲಲ್ಲಿ
ಸುಖವಂತೆ ದುಃಖದಲ್ಲಿ
ಉತ್ಸಾಹದರಗಿಣಿಯಂತೆ
ಇವನ ಮನಸ ಕಾಡಲ್ಲಿ
–ಹೀಗೆ ನೂರು ಹೆಸರಿಟ್ಟು
ಯಾಕೆ ಕರೆಯುತ್ತಾನೆ
ಗೊತ್ತಿಲ್ಲ ನನಗೆ.

ಇನ್ನೆರಡು ಕವಿತೆಗಳು

⊕ ಜಿ. ಪಿ. ಬಸವರಾಜು

1. ರೋಸಾ ಮೇಡಂ

ರೋಸಾ ಮೇಡಂ
ಗುಲಾಬಿಯ ಥರ
ದುಂಡು ದುಂಡಗೆ
ಕೆಂಪು ಕೆಂಪಗೆ.

ಉರಿವ ಧಗೆಯಲ್ಲಿ
ಬಿರಿವ ಎದೆಯಲ್ಲಿ
ಜಾರುವ ಸೀರೆಯಲ್ಲಿ
ಲಿಪ್‌ಸ್ಟಿಕ್ ರಂಗಿನಲ್ಲಿ

ನಡೆದು ಹೋಗುತ್ತಾರೆ
ರೋಸಾ ಮೇಡಂ
ಬೀದಿ ತುಂಬಿ
ಬೀದಿಗೆ ನಿಟ್ಟುಸಿರು ತುಂಬಿ.

ಆಟದ ಮೈದಾನದಲ್ಲಿ
ಮಕ್ಕಳ ನಗೆ ಕೇಕೆ
ಶಾಲೆಯ ತೋಟದಲ್ಲಿ
ಹೂ–ದುಂಬಿಗಳ ತೀರದ ಬಯಕೆ

೨

ಯಾರೋ ನೆಟ್ಟು ಹೋದ ನೆನಪು
ರೋಸಾ ಮೇಡಂ ಬಿಟ್ಟುಕೊಟ್ಟ ನೆನಪು
ಹುಡುಗರ ಕಿವಿ ಹಿಂಡುತ್ತಾರೆ ಮೇಡಂ
ಬೆನ್ನ ಮೇಲೆ ದಬದಬ ಬಾರಿಸುತ್ತಾರೆ.

ಹುಡುಗರ ಕಣ್ಣೀರಲ್ಲಿ ನೆನೆಯುತ್ತಾರೆ
ಜೋಗದ ದಬೆದಬೆಯಾಗುತ್ತಾರೆ ಮೋಡಂ
ಧಗಧಗಿಸುವ ನೆನಪು, ಧುಮ್ಮಿಕ್ಕುವ ನೀರು
ಎದೆಯಾಳಕ್ಕಿಳಿದ ಗುಂಡಿ; ನೆನಪಿನ ಕಿಂಡಿ.

ಹುಡುಗರು ಲೆಕ್ಕ ತೋರಿಸುತ್ತಾರೆ
ಮೋಡಂಗೆ ಲೆಕ್ಕ ಸಿಕ್ಕುವುದಿಲ್ಲ
ಕೂಡಿದ್ದೆಷ್ಟು ? ಕಳೆದದ್ದೆಷ್ಟು ?
ತಮ್ಮನ್ನೆ ಭಾಗಿಸಿಕೊಂಡದ್ದು ಎಷ್ಟು ?

ಚಿತ್ತಕ್ಕೆ ಕೈ ಚಾಚುವ ಹುಡುಗರು
ಶಿಕ್ಷೆ ಅನುಭವಿಸುವ ಮೋಡಂ
ಕ್ಲಾಸ್ ಲೆಟ್ ಆಫ್ ಮಾಡುತ್ತಾರೆ
ಹೃದಯಕ್ಕೂ ಅದನ್ನೇ ಹೇಳಿ.

2. ಮಾತಿನಲಿ ಮುಳುಗಿದ್ದಾರೆ ಎಲ್ಲ

ಕತ್ತಲ ಕೋಣೆಯಿಂದ ಹೊರಟ
ಸಣ್ಣ ಶ್ರುತಿ;
ಕೈಕಾಲು ಮೀಟುತ್ತ ಅಳುವ
ಎಳೆಗೂಸು;
ನಡುಮನೆಯು ದಾಟುವುದಿಲ್ಲ
ಧ್ವನಿ
ಹೊರಜಗುಲಿಯು ಮುಟ್ಟುವುದಿಲ್ಲ
ಅಳು;
ಹಿರಿಯರನು ತಟ್ಟುವುದಿಲ್ಲ
ಅಳು;
ಮಾತಿನಲಿ ಮುಳುಗಿದ್ದಾರೆ ಎಲ್ಲ–
ಅಂಗಳದಲ್ಲಿ.

ಆಕಾಶದಲ್ಲೊಂದು ಸಂಜೆಹಕ್ಕಿ
ಧ್ವನಿತೆಗೆದು ಹಾಡುತ್ತ
ಹಾಡುತ್ತ ಹೋಗುತ್ತದೆ;

ಬಾನಾಡಿ ಹಾಡು
ರೆಕ್ಕೆಗಳ ಜಾಡು
ಮೂಡುವುದಿಲ್ಲ ಮನದಲ್ಲಿ-

ಮಾತಿನಲಿ ಮುಳುಗಿದ್ದಾರೆ ಎಲ್ಲ.

ಕಣ್ಣು ಮುಚ್ಚುವ ಸೂರ್ಯ
ಬಣ್ಣ ಬಣ್ಣದ ಬಾನು
ಹಣಿಕಿ ಹಾಕುವ ಚುಕ್ಕಿ
ಬಿಕ್ಕುತ್ತ ಬಿದ್ದು ಹೋಗುವ
ಅಂಗಳದ ಹೂವು
ದಿಕ್ಕುದೆಸೆ ಇಲ್ಲವಾಗುತ್ತವೆ

ಮಾತಿನಲಿ ಮುಳುಗಿದ್ದಾರೆ ಎಲ್ಲ.

ಕತ್ತಲ ಕೋಣೆಯಲ್ಲಿ
ಕಣ್ಣು ಮಿಟುಕಿಸುತ್ತದೆ
ಮಗು,
ಚುಕ್ಕಿ
ಕಣ್ಣು ಮಿಟುಕಿಸಿದಂತೆ;

ಬತ್ತಲೆಯ ಬಯಲಲ್ಲಿ
ಕಣ್ಣು ಮಿಟುಕಿಸುತ್ತದೆ
ಚುಕ್ಕಿ,
ಮಗು ಕಣ್ಣು ಮಿಟುಕಿಸಿದಂತೆ.

ಚುಕ್ಕಿಯನ್ನು ಕಾಣದು
ಮಗು;
ಮಗುವನ್ನು ಕಾಣದು
ಚುಕ್ಕಿ.

ಮಾತಿನಲಿ ಮುಳುಗಿದ್ದಾರೆ ಎಲ್ಲ.

ಕಿರು ಪಣತೆ
ಬೆಳಗುವ ಹೊತ್ತು
ಬಾನಾಡಿ
ಹಾಡುವ ಹೊತ್ತು
ಚುಕ್ಕಿ
ಕಾಯುವ ಹೊತ್ತು
ಬಣ್ಣ ಬಳಿದ ಆಕಾಶ
ಥಕ ಥೈಯ್ಯ ಕುಣಿಯುವ ಹೊತ್ತು
ಕೂಸು ಕಂದಮ್ಮಗಳು
ಬಿಕ್ಕುವ ಹೊತ್ತು–

ಮಾತಿನಲಿ ಮುಳುಗಿದ್ದಾರೆ ಎಲ್ಲ.

ದಿ ನ ಚ ರಿ

⊕ ಸವಿತಾ ನಾಗಭೂಷಣ

ರಜದಲ್ಲೇನು ಮಾಡುವಿರಿ ಎಂದು ಕೇಳಿದರು ಟೀಚರು
ಊರಿಗೆ ಹೋಗುತ್ತೇವೆ ಎಂದರು ಒಬ್ಬಿಬ್ಬರು
ಊಟ, ಆಟ ಎಂದು ಪಿಸುಗುಟ್ಟಿ ನಕ್ಕರು ತುಂಟರು
ಒಬ್ಬರಿದ್ದಂತಿದ್ದರಲ್ಲವೆ ಇನ್ನೊಬ್ಬರು ?
ತಲೆಗೊಂದರಂತೆ ಮಾತು ಗದ್ದಲಿಸಿದರು
ಅದೇನು ಮಾಡುತ್ತಿರೊ ಮಾಡಿ ಅಂದರು ಟೀಚರು
ಮಾಡಿದ್ದನ್ನೆಲ್ಲಾ ದಿನವೂ ಬರೆದಿಡಿ ಅಂದರು
'ಇದ್ದದ್ದು ಇದ್ದ ಹಾಗೆಯೇ' ಎಂದೂ ಸೇರಿಸಿದರು.

ಹೀಗೆ ಊಟ ಆಟದ ಜೊತೆಗೆ
ದಿನಚರಿ ಬರೆಯುವುದೂ ಸೇರಿಕೊಂಡಿತು
ಆಡಿದ್ದು, ನೋಡಿದ್ದು, ಮಾಡಿದ್ದು
ಬರೆದಂತೆಲ್ಲ ಚುರುಮುರಿ ಉಂಡೆಯುದೆ ರುಚಿ ಕಂಡಿತು.

ರಜೆಯಲ್ಲೂ ಬರೆಯುವುದೆ ? ಎಂದು
ಅಜ್ಜಿ ಗೊಣಗುಟ್ಟಿದರು.
ನೆಪಕ್ಕೆ ಟೀಚರಿನ ಹೆಸರು
ಇವಳದೆ ಕಾರುಬಾರು ಎಂದು
ಅಮ್ಮ ಮೆಣಸು ಕುಟ್ಟಿದರು.
ನಾವೂ ಬರೆಯುತ್ತೇವೆ ಎಂದು
ತಮ್ಮಂದಿರು ಹಠಮಾಡಿದರು.

ಹೀಗೆ ಹೊಂಡದ ಮೀನುಗಳಿಗೆ ಮಂಡಕ್ಕಿ ಕೊಟ್ಟಿದ್ದು
ನಿಂಬೆಯ ಗಿಡದಲ್ಲಿದ್ದ ಹೊಟ್ಟೆ ಮರಿಯಾಗಿ
ಚಿಟ್ಟೆಯಾಗಿ ಹಾರಿದ್ದು
ಸೇವಂತಿಗೆ ದಾಸವಾಳಕ್ಕೆ ನೀರೆರೆದದ್ದು
ದಿನಚರಿಯಲ್ಲಿ ಸೇರಿತು.

ಜರಿಲಂಗಕ್ಕಾಗಿ ಅತ್ತು ಅಮ್ಮನ ಮೇಲೆ
ಮುನಿಸಿಕೊಂಡಿದ್ದು
ಅಪ್ಪ ತರುವ ಮಿಠಾಯಿಗಾಗಿ ರಾತ್ರಿಯೆಲ್ಲಾ
ಕಣ್ಣಿಗೆ ಎಣ್ಣೆ ಬಿಟ್ಟು ಕೂತದ್ದು
ದಿನಚರಿಯಲ್ಲಿ ಸೇರಿತು.

ಅಂಡಾ ಭಂಡಾ ಆಡಿ ಕುಂಟಾಬಿಲ್ಲೆ ಗೆದ್ದದ್ದು
ಒಟ್ಟು ಮಾಡಿದ ಬಳೆ ಚೂರುಗಳನ್ನ
ಗುಟ್ಟಾಗಿ ನಿಧಿಯಂತೆ ಅಡಗಿಸಿಟ್ಟಿದ್ದು
ದಿನಚರಿಯಲ್ಲಿ ಸೇರಿತು.

ಕೊಳಲೂದಿ ಅಜ್ಜಿಯ ಕಿವಿತೂತು ಮಾಡಿದ್ದು
ಮಣ್ಣಿಗೆ ನೀರು ಹಾಕಿ ಪಾಯಸವೆಂದು
ತಂಗಿಗೆ ನಂಬಿಸಿದ್ದು
ದಿನಚರಿಯಲ್ಲಿ ಸೇರಿತು.

ತೆಂಗಿನ ಗರಿಯ ವಾಚಿನ ಆಸೆಗೆ
ಪರಮವೈರಿಯೊಂದಿಗೂ ರಾಜಿಯಾದದ್ದು

'ನಿದ್ರಾ ಸುಂದರಿ' ಕಥೆಯೋದುತ್ತಾ
ಹಾಗೆಯೆ ನಿದ್ರೆ ಹೋದದ್ದು
ದಿನಚರಿಯಲ್ಲಿ ಸೇರಿತು.

ಕನಸಿನ ತುಂಬಾ ಪೆಪ್ಪರಮೆಂಟಿನ
ಮಳೆ ಸುರಿದದ್ದು
ನಿಜ ಜೀವನದಲ್ಲಿ ಪೈಗೆ ಪೈ ಕೂಡಿಟ್ಟರೂ
ಪೆಪ್ಪರಮೆಂಟು ಕೊಳ್ಳದೆ ಇದ್ದದ್ದು
ದಿನಚರಿಯಲ್ಲಿ ಸೇರಿತು.

೨

ಕಾದೂ ಕಾದೂ ಕೊನೆಗೂ
ಶಾಲೆ ಕದ ತೆರೆಯಿತು
ಅವೊತ್ತಿನ ಮಾತುಕತೆ ಕಿತ್ತಾಟ
ಕುಣಿತ ದಿನಚರಿ ಕುರಿತೆ ಆಗಿತ್ತು
ಕೊನೆಗೆ ಎಲ್ಲರೂ ಸೇರಿ
ಎಲ್ಲವನ್ನೂ ಓದಿದ್ದೂ ಆಯಿತು.

ನನಗೊ.... ನನ್ನ ಗೆಳತಿಯರ
ದಿನಚರಿಯೆ ಚೆನ್ನಾಗಿದೆ ಅನ್ನಿಸತೊಡಗಿತ್ತು.
ನನ್ನ ಬಳಿ ಇಲ್ಲದ್ದು ಅವರ ಬಳಿ
ಇದೆ ಎಂದೆನಿಸುತ್ತಿತ್ತು.
ಅವರ ಬಳಿ ಇದ್ದದ್ದೆಲ್ಲವೂ ನನಗೂ
ಬೇಕೆನಿಸುತ್ತಿತ್ತು.

ಅವರ ದಿನಚರಿಗಳಲ್ಲಿ
ಬಣ್ಣ, ಬೆರಗು, ಬೆಡಗು
ಎಲ್ಲವೂ ಇದೆ ಎಂದೆನಿಸುತ್ತಿತ್ತು.
ಆ ರಂಗು, ರಂಜನೆ, ರೋಮಾಂಚನ
ಹೊಟ್ಟೆ ಉರಿಸುತ್ತಿತ್ತು.
ಹುಲಿ, ಕರಡಿ, ಆನೆ ಕೊಕ್ಕರೆಗಳು
ರೈಲು ಬಂಡಿ, ಅರಮನೆ ಆಟಿಕೆಗಳು
ಕಣ್ಣಿಗೆ ಕಟ್ಟಿದಂತ್ತಿತ್ತು.

ಟೀಚರೇನೊ ಎಲ್ಲರಿಗೂ ಕೊಡುವಂತೆ
ನನಗೂ ಮಾರ್ಕು ಕೊಟ್ಟಿದ್ದರು
ಅಭಿಮಾನವೊ ? ಅವಮಾನವೊ ?
ಕಣ್ಣೀರು ತುಂಬಿ ತುಳುಕುತ್ತಿತ್ತು.

೩

ಆಮೇಲೇನೂ ದಿನಚರಿ ಬರೆಯಲು
ಯಾರ ಒತ್ತಾಯವೂ ಇರಲಿಲ್ಲ
ಬರೆಯುವುದೂ ನಿಲ್ಲಲಿಲ್ಲ
ಆದರೆ ಇದ್ದದ್ದು ಇದ್ದ ಹಾಗೆಯೆ ಅಲ್ಲ !

ಕಲ್ಪನೆಗೆ ಕುದುರೆ ರಥ ಕಟ್ಟಿದಷ್ಟೇ ಗೊತ್ತು
ರಥ ಓಡಿತು.
ಆಸೆಹಕ್ಕಿಗೆ ರೆಕ್ಕೆ ಮೂಡಿಸಿದಷ್ಟೇ ಗೊತ್ತು
ಹಕ್ಕಿ ದೂರ ದೂರ ಹಾರಿತು.

ಇವತ್ತಿಗೂ ರಥ ಓಡುತ್ತಲೇ ಇದೆ
ಕುದುರೆಗಳ ಕಾಲು ಸೋತಂತಿಲ್ಲ
ಇವತ್ತಿಗೂ ಹಕ್ಕಿ ಹಾರುತ್ತಲೇ ಇದೆ
ಕಿಂಚಿತ್ತೂ ಆಯಾಸಗೊಂಡಿಲ್ಲ.

ಇಷ್ಟು ದಿನಗಳಾದ ಮೇಲೆ
ಇಷ್ಟು ದೊಡ್ಡವಳಾದ ಮೇಲೆ
ಕಡಲಲ್ಲಿ ಗುಮ್ಮನಂತೆ ನಿಂತಿರುವ
ಭಾರಿ ಹಡಗನ್ನ ನೋಡಿದಾಗೆಲ್ಲ
ನೆನಪಿನ ತಂತಿಗಳು ಮಿಡಿದು
ನಾನು ಕೈಯಾರೆ ಮಾಡಿ ತೇಲಿಸಿದ
ಕಾಗದದ ದೋಣಿ ಕಣ್ಣೊಳಗೇ ನಿಲ್ಲುತ್ತೆ.

ಆ ಹರ್ಷ, ವಿಷಾದ, ಒಲುಮೆ
ಆಸೆ ಆಕಾಂಕ್ಷೆಯ ಕುಲುಮೆ
ಇಂದಿಗೂ ಬೆಚ್ಚಗೆ ಉರಿದಿದೆ.

ಕಥೆ

ಶಿಶಿರದ ಸದ್ದು

ಮೂಲ ಉರ್ದು: ಖುರ್ರಾತುಲ್ ಹೈದರ್

ಕನ್ನಡಕ್ಕೆ : ಬಾನು ಮುಷ್ತಾಕ್

[ಶ್ರೀಮತಿ ಖುರ್ರಾತುಲ್ ಹೈದರ್ ಈ ವರ್ಷದ ಜ್ಞಾನಪೀಠ ಪ್ರಶಸ್ತಿ ಪಡೆದ ಉರ್ದು ಲೇಖಕಿ. ಭಾರತದಲ್ಲಿ ಹುಟ್ಟಿ ಬೆಳೆದು ಸ್ವಾತಂತ್ರ್ಯಾನಂತರ ಪಾಕಿಸ್ತಾನಕ್ಕೆ ವಲಸೆ ಹೋಗಿ ಬದುಕಲು ಹವಣಿಸಿದ ಶ್ರೀಮತಿ ಹೈದರ್ ಹತಾಶರಾಗಿ ಈಗ ಮತ್ತೆ ಭಾರತಕ್ಕೆ ಹಿಂದಿರುಗಿ ಬಂದು ದೆಹಲಿಯಲ್ಲಿ ನೆಲೆಸಿದ್ದಾರೆ. 'ಶಿಶಿರದ ಸದ್ದು' ಕನ್ನಡಕ್ಕೆ ಬರುತ್ತಿರುವ ಅವರ ಮೊದಲ ಕಥೆ. ಆತ್ಮ ಕಥಾನಕದ ಧಾಟಿಯಲ್ಲಿ ಬರೆಯಲ್ಪಟ್ಟಿರುವ ಈ ಕಥೆಯಲ್ಲಿ ಭಾರತೀಯ ಉಪಖಂಡದಲ್ಲಿನ ಮೇಲ್ಮಧ್ಯಮ ವರ್ಗದ ಮುಸ್ಲಿಂ ಹೆಣ್ಣಿನ ತನ್ನ ಅಂತರಂಗ ಬಹಿರಂಗಗಳೆರಡನ್ನೂ ಒಂದು ಅರ್ಧಸಾಕ್ಷ್ಯ ಚಿತ್ರ(quasi documentary)ದ ರೀತಿಯಲ್ಲಿ ನಿಶ್ಶಬ್ದವಾಗಿ ಬಿಚ್ಚಿಡುವ ರೀತಿ ಕುತೂಹಲಕಾರಿಯಾಗಿದೆ. —ಸಂ.]

ಬೆಳಿಗ್ಗೆ ನಾನು ಬಾಗಿಲಲ್ಲಿ ನಿಂತು ತರಕಾರಿಯವನೊಡನೆ ಹೂಕೋಸಿನ ಬಗ್ಗೆ ಚೌಕಾಶಿ ಮಾಡುತ್ತಿದ್ದೆ. ಒಳಗೆ ಅಡಿಗೆ ಕೋಣೆಯಲ್ಲಿ ಅಕ್ಕಿ ಬೇಳೆಯನ್ನು ಬೇಯಲು ಹಾಕಿದ್ದೆ. ಆಳು ಸಾಮಾನು ತರಲು ಪೇಟೆಗೆ ಹೋಗಿದ್ದ. ಬಚ್ಚಲು ಮನೆಯಲ್ಲಿ ವಿಕಾರ್ ಸಾಹೇಬರು ವಾಷ್ ಬೇಸಿನ್ನಿನ ಮೇಲೆ ಜೋಡಿಸಿದ್ದ ಮುಸುಕು ಕನ್ನಡಿಯಲ್ಲಿ ನೋಡುತ್ತಾ ಶೇವ್ ಮಾಡಿಕೊಳ್ಳುತ್ತಿದ್ದರು. ನಾನು ತರಕಾರಿಯವನೊಡನೆ ಚೌಕಾಶಿ ಮಾಡುತ್ತಲೇ ರಾತ್ರಿಯ ಊಟಕ್ಕೆ ಏನು ಅಡಿಗೆ ಮಾಡಬೇಕೆಂದು ಆಲೋಚಿಸುತ್ತಿದ್ದೆ. ಅಷ್ಟರಲ್ಲೇ ಎದುರುಗಡೆ ಒಂದು ಕಾರು ಬಂದು ನಿಂತಿತು. ಒಬ್ಬ ಹೆಂಗಸು ಇಣಿಕಿ ನೋಡಿ ಕಾರಿನ ಬಾಗಿಲನ್ನು ತೆಗೆದು ಕೆಳಗಿಳಿದಳು. ನಾನು ದುಡ್ಡೆಣಿಸುತ್ತಿದ್ದುದರಿಂದ ಆಕೆಯನ್ನು ಗಮನಿಸಲಿಲ್ಲ. ಅವಳು ಒಂದ್ಹೆಜ್ಜೆ ಮುಂದಿಟ್ಟಾಗ ನಾನು ತಲೆಯೆತ್ತಿ ಅವಳನ್ನು ನೋಡಿದೆ.

"ಅರೆ !.... ನೀನು...." ಅವಳು ಕಕ್ಕಾಬಿಕ್ಕಿಯಾಗಿ ನುಡಿದಳು. ನಾನು ಅಲ್ಲೇ ಸ್ತಂಭಿತಳಾಗಿ ನಿಂತೆ. ಅವಳು ನನ್ನನ್ನು ಅನೇಕಾನೇಕ ವರ್ಷಗಳಿಂದ ಸತ್ತು ಹೋಗಿರು

ವವಳೆಂದು ಭಾವಿಸಿದ್ದಳೆಂದು ಕಾಣಿಸುತ್ತೆ-ಒಮ್ಮೆಲೇ ನನ್ನ ಭೂತ ಕಂಡವಳಂತಿದ್ದಳು. ಒಂದು ಕ್ಷಣದಲ್ಲಿ ಅವಳಲ್ಲಿ ಮೂಡಿದ ವಿಚಿತ್ರ ಭಯ ನನ್ನ ಕಣ್ಣೆದುರು ಕಟ್ಟಿದಂತಿದೆ. ನಾನು ಹೀಗೇಕೆ ಎಂದು ಯೋಚಿಸಿ ಯೋಚಿಸಿ ದಂಗಾಗಿದ್ದೇನೆ.

ಈ ಹೆಂಗಸು (ಅವಳ ಹೆಸರು ಕೊನೆಗೂ ನನಗೆ ಹೊಳೆಯಲೇ ಇಲ್ಲ ಮತ್ತು ಸಂಕೋಚದಿಂದ ನಾನು ಅವಳನ್ನು ಕೇಳಲೂ ಇಲ್ಲ) ನನ್ನೊಡನೆ ಕ್ವೀನ್ ಮೇರಿಯಲ್ಲಿ ಓದುತ್ತಿದ್ದಳು. ಇದೆಲ್ಲಾ ಇಪ್ಪತ್ತು ವರ್ಷಗಳ ಹಿಂದಿನ ಮಾತು. ನನಗೇನು ಆಗ ಹದಿನೇಳು ವರ್ಷ ಇರಬಹುದು. ನನ್ನ ಆರೋಗ್ಯ ಎಷ್ಟು ಚೆನ್ನಾಗಿತ್ತೆಂದರೆ, ನಾನು ವಯಸ್ಸಿಗಿಂತ ದೊಡ್ಡವಳಾಗಿ ಕಾಣುತ್ತಿದ್ದೆ ಮತ್ತು ನನ್ನ ಸೌಂದರ್ಯ ಎಲ್ಲರ ಕಣ್ಣು ಕುಕ್ಕುತ್ತಿತ್ತು. ದೆಹಲಿಯಲ್ಲಿ ಆಗಿದ್ದ ಸಂಪ್ರದಾಯವೆಂದರೆ, ಗಂಡಿನ ಕಡೆಯವರು ಶಾಲಾ ಕಾಲೇಜುಗಳನ್ನು ಸುತ್ತಿ ವಧುಗಳ ಆಯ್ಕೆ ಮಾಡುತ್ತಿದ್ದರು ಮತ್ತು ಇಷ್ಟವಾದ ಹುಡುಗಿಯ ಮನೆಗೆ ಕೋರಿಕೆ ಸಲ್ಲಿಸುತ್ತಿದ್ದರು. ಅದೇ ವೇಳೆಯಲ್ಲಿ ಶಾಲಾ ದಿನಾಚರಣೆಯ ಸಂದರ್ಭದಲ್ಲಿ ನನ್ನನ್ನು ನೋಡಿದ ಹುಡುಗನೊಬ್ಬನ ತಾಯಿ ಮತ್ತು ಚಿಕ್ಕಮ್ಮ ನನ್ನನ್ನು ಸೊಸೆಯನ್ನಾಗಿಸಿಕೊಳ್ಳುವ ಪಣ ತೊಟ್ಟಿದ್ದಾರೆಂದು ತಿಳಿದು ಬಂದಿತು. ಅವರು ನೂರ್‌ಜಹಾನ್ ರೋಡಿನಲ್ಲಿ ವಾಸವಾಗಿದ್ದರು ಮತ್ತು ಹುಡುಗ ರಿಜರ್ವ್ ಬ್ಯಾಂಕ್‌ನಲ್ಲಿ ನೂರೈವತ್ತು ರೂಪಾಯಿ ಸಂಬಳದ ಕೆಲಸಕ್ಕಿದ್ದ. ಹೀಗಾಗಿ ಅವರು ನಮ್ಮ ಮನೆಗೆ "ರುಕ" ಕಳಿಸಿದರು. ಆದರೆ ನನ್ನ ಅಮ್ಮಾಜಾನ್ ನನ್ನ ಬಗ್ಗೆ ಎತ್ತರದ ಕನಸುಗಳನ್ನು ಕಟ್ಟುತ್ತಿದ್ದರು. ನನ್ನ ತಂದೆತಾಯಿಗಳು ದೆಹಲಿಯಿಂದ ಹೊರಗೆ ಮೀರತ್‌ನಲ್ಲಿ ವಾಸವಾಗಿದ್ದರು. ಅವರು ಮದುವೆಯ ಪ್ರಸ್ತಾಪಕ್ಕೆ ನಾನಿನ್ನೂ ಚಿಕ್ಕವಳು ಎಂದು ಭಾವಿಸಿದ್ದರಿಂದ ಅವರ ಕೋರಿಕೆ ನಾಮಂಜೂರಾಯಿತು.

ಈ ಘಟನೆಯಾದ ಕೆಲದಿನಗಳವರೆಗೆ ಈಕೆ ನನ್ನೊಡನೆ ಕಾಲೇಜಿನಲ್ಲಿ ಓದುತ್ತಿದ್ದಳು. ಅವಳ ಮದುವೆಯಾದ್ದರಿಂದ ಕಾಲೇಜು ಬಿಟ್ಟಳು. ಇಷ್ಟು ವರ್ಷಗಳ ನಂತರ ಲಾಹೋರಿನ ಮಾಲ್ ರಸ್ತೆಯ ಹಿಂಬದಿಯ ಓಣಿಯಲ್ಲಿ ನಾವಿಬ್ಬರೂ ಸಂಧಿಸಿದೆವು.

'ಮೇಲೆ ಬಾ.... ಟೀ, ಕಾಫಿ ಕುಡಿ ಮತ್ತೆ ಆರಾಮವಾಗಿ ಕೂತು ಮಾತನಾಡೋಣ' ಎಂದು ನಾನು ಕರೆದೆ. ಆದರೆ ಅವಳು 'ನಾನು ಬಹಳ ಅರ್ಜೆಂಟಿನಲ್ಲಿ ಇದ್ದೇನೆ. ನನ್ನ ಗಂಡನ ಸಂಬಂಧೀಕರ ಮನೆಯನ್ನು ಹುಡುಕುತ್ತಾ ಇಲ್ಲಿಗೆ ಬಂದು ಬಿಟ್ಟಿದ್ದೇನೆ. ಇನ್‌ಶಾ ಅಲ್ಲಾಹ್ ಇನ್ನೊಮ್ಮೆ ಬರುತ್ತೇನೆ' ಎಂದವಳೇ ಅಲ್ಲೇ ನಿಂತು, ಹಿಂದಿನ ಸ್ನೇಹಿತೆಯರ ವಿಚಾರವನ್ನೆಲ್ಲಾ ಹೇಳತೊಡಗಿದಳು. ಸಲೀಮ ಇಂತಹ ಬ್ರಿಗೇಡಿಯರ್‌ನ ಹೆಂಡತಿಯಾಗಿದ್ದಾಳೆ; ನಾಲ್ಕು ಮಕ್ಕಳಿವೆ. ಫರ್ಖುಂದನ

ಗಂಡ ಫಾರಿನ್ ಸರ್ವಿಸ್‌ನಲ್ಲಿದ್ದಾನೆ; ಅವಳ ಹಿರಿಮಗಳು ಲಂಡನ್ನಿನಲ್ಲಿ ಓದುತ್ತಿದ್ದಾಳೆ. ರೇಹಾನ ಇಂತಹ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆಗಿದ್ದಾಳೆ. ಸಾದಿಯ ಅಮೇರಿಕದಿಂದ ಉದ್ದನೆಯ ಸಾಲುಗಟ್ಟಿದ ಡಿಗ್ರಿಗಳನ್ನು ಹೊತ್ತು ತಂದಿದ್ದಾಳೆ; ಕರಾಚಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದಾಳೆ. ಕಾಲೇಜಿನಲ್ಲಿದ್ದ ಹಿಂದೂಸ್ತಾನಿ ಗೆಳತಿಯರ ಬಗ್ಗೆಯೂ ಅವಳಲ್ಲಿ ಮಾಹಿತಿ ಇತ್ತು. ಪ್ರಭಾಳ ಗಂಡ ಇಂಡಿಯನ್ ನೇವಿಯಲ್ಲಿ ಕಮೋಡೋರ್ ಆಗಿದ್ದಾನೆ; ಅವಳು ಬಾಂಬೆಯಲ್ಲಿದ್ದಾಳೆ. ಸರಳ ಆಲ್‌ಇಂಡಿಯಾ ರೇಡಿಯೋದಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದಾಳೆ. ಲತಿಕಾ ದೊಡ್ಡ ಕಲಾವಿದೆಯಾಗಿದ್ದಾಳೆ ಮತ್ತು ನವದೆಹಲಿಯಲ್ಲಿ ಅವಳ ಸ್ಟುಡಿಯೊ ಇದೆ, ಇತ್ಯಾದಿ ಇತ್ಯಾದಿ.... ಅವಳು ಇದೆಲ್ಲಾ ಮಾತಾಡುತ್ತಿದ್ದಳು. ಆದರೆ ಅವಳ ಕಣ್ಣಿನೊಳಗೆ ಮಡುಗಟ್ಟಿದ್ದ ಭಯವನ್ನು ನಾನು ಮರೆಯಲಾಗಲಿಲ್ಲ.

ನಾನು, ಸಾದಿಯ, ರೇಹಾನ ಮೊದಲಾದವರೆಲ್ಲ ಕರಾಚಿಯಲ್ಲಿ ಸೇರಿದಾಗಲೆಲ್ಲಾ ನಿನ್ನನ್ನು ಜ್ಞಾಪಿಸಿಕೊಳ್ಳುತ್ತೇವೆ".

"ನಿಜವಾಗಿಯೂ ?" ನಾನೊಂದು ಶುಷ್ಕ ನಗೆಯ ಮರೆಯಲ್ಲಿ ಕೇಳಿದೆ. ಯಾವ ಶಬ್ದಗಳಲ್ಲಿ ಅವರು ನನ್ನನ್ನು ನೆನೆಸುವರೆಂಬುದು ನನಗೆ ತಿಳಿದಿದೆ. ಅರೆ! ಇವರು ನಿನ್ನ ಗೆಳತಿಯರೇ ?

ಹೆಂಗಸರು ಒಬ್ಬರಿಗೊಬ್ಬರು ಶಾಕಿನಿ ಡಾಕಿನಿಯರಾಗಿರುತ್ತಾರೆ. ಮಂಥರೆಯಾಗಿರುತ್ತಾರೆ. ಕುಂಟಣಿಗಳಾಗಿರುತ್ತಾರೆ. ನಾನು ಇಲ್ಲಿ ಅರೆಕತ್ತಲ ನಿರ್ಜನ ಓಣಿಯ ಭೂತ ಬಂಗಲೆಯಂತಹ ಮನೆಯ ಜೀರ್ಣವಾದ ಮೆಟ್ಟಿಲುಗಳ ಮೇಲೆ ಏನು ಮಾಡುತ್ತಿದ್ದೇನೆ ಎಂಬುದನ್ನೂ ಅವಳು ಕೇಳಲಿಲ್ಲ. ಅವಳಿಗೆ ತಿಳಿದಿತ್ತು.

ಮಹಿಳೆಯರ ಇಂಟೆಲಿಜೆನ್ಸ್ ಸರ್ವೀಸ್‌ನೆದುರಿಗಂತೂ ಇಂಟರ್‌ಪೋಲ್ ಕೂಡ ನಾಚಿಕೊಳ್ಳಬೇಕು. ಅಂತಹುದರಲ್ಲಿ ನನ್ನ ವಿಷಯವಂತೂ ಜಗಜ್ಜಾಹೀರಾದುದು. ನಾನೊಬ್ಬ ಪ್ರಸ್ತಾಪಕ್ಕೆ ತಕ್ಕ ವ್ಯಕ್ತಿಯಲ್ಲ. ಸದ್ಯಕ್ಕೆ ನಾನು ಅನಾಮಿಕಳಾಗಿದ್ದೇನೆ. ಯಾರಿಗೂ ನನ್ನ ಪರಿವೆ ಇಲ್ಲ. ಅಷ್ಟೇ ಏಕೆ.... ನನಗೂ ನನ್ನ ಪರಿವೆ ಇಲ್ಲ.

ನಾನು ತನ್‌ವೀರ್ ಫಾತಿಮ. ನನ್ನ ಅಬ್ಬಾ ಮೀರತ್‌ನಲ್ಲಿ ವಾಸವಾಗಿದ್ದ ಜಮೀನ್ದಾರರಾಗಿದ್ದರು. ನಮ್ಮಲ್ಲಿ ಬಹಳ ಬಿಗಿಯಾದ ಪರ್ದ ವ್ಯವಸ್ಥೆ ಇತ್ತು. ಸ್ವತಃ ನಾನೇ ನನ್ನ ಚಿಕ್ಕಪ್ಪ, ಸೋದರತ್ತೆ, ಸೋದರಮಾವನ ಮಕ್ಕಳೆದುರು ಪರ್ದ ದಲ್ಲಿರುತ್ತಿದ್ದೆ. ನಾನು ಅತ್ಯಂತ ಅಕ್ಕರೆಯ ಅಚ್ಚುಮೆಚ್ಚಿನ ಮಗಳಾಗಿದ್ದೆ. ನಾನು ಶಾಲೆಯಲ್ಲಿ ಅನೇಕ ಸ್ಕಾಲರ್‌ಶಿಪ್‌ಗಳನ್ನು ಪಡೆದೆನಾದ್ದರಿಂದ ಮೆಟ್ರಿಕ್ ಸಲುವಾಗಿ

ವಿಶೇಷವಾಗಿ ಕ್ವೀನ್ ಮೇರಿ ಶಾಲೆಯಲ್ಲಿ ನನ್ನನ್ನು ಸೇರಿಸಲಾಯಿತು. ಇಂಟರ್ ಓದಿನ ಸಲುವಾಗಿ ಅಲೀಗಢಕ್ಕೆ ನನ್ನನ್ನು ಕಳಿಸಲಾಯಿತು. ಅಲೀಗಢ್‌ದ ಗರ್ಲ್ಸ್ ಕಾಲೇಜಿನ ಅವಧಿಯು ನನ್ನ ಬದುಕಿನ ಅತ್ಯುತ್ತಮ ಕಾಲವಾಗಿತ್ತು. ಎಂತಹ ಸ್ವಪ್ನ ಮಯ ವಾತಾವರಣವಾಗಿತ್ತದು ! ನಾನು ಭಾವನಾಮಯಿಯಲ್ಲ ; ಆದರೆ, ಈಗಲೂ ಆ ಕಾಲೇಜಿನ ಕಾರಿಡಾರ್, ಹುಲ್ಲಿನ ಎತ್ತರದ ಪೊದೆಗಳು, ಗಿಡ ಮರಗಳ ಮೇಲೆ ಬಾಗಿ ಬೀಳುತ್ತಿದ್ದ ಮಳೆ, ವಸ್ತು ಪ್ರದರ್ಶನದ ಮೈದಾನದಲ್ಲಿ ತುಂಬಿದ್ದ ಕಪ್ಪು ಬುರ್ಕಾಗಳು ... ಹಾಸ್ಟೆಲ್ಲಿನ ಇಕ್ಕಟ್ಟಾದ ಕೋಣೆಗಳಲ್ಲಿದ್ದ ಮನೆಯ ವಾತಾವರಣ ವೆಲ್ಲವೂ ನೆನಪಿಗೆ ಬಂದಾಗ ಕಣ್ಣು ಮಂಜಾಗುತ್ತದೆ.

ಎಂ.ಎಸ್ಸಿಗಾಗಿ ನಾನು ದೆಹಲಿಗೆ ಬಂದಾಗ ನನ್ನೊಡನೆ ಹಾಸ್ಟಲಿನಲ್ಲಿ ಮತ್ತೆ ಈ ಹುಡುಗಿಯರೆಲ್ಲಾ ಇದ್ದರು. ರೇಹಾನ, ಸಾದಿಯ, ಪ್ರಭ....ನನಗೆ ಹುಡುಗಿಯರು ಎಂದೂ ಇಷ್ಟವಾಗಲಿಲ್ಲ. ನಾನು ತುಂಬಾ ಅಹಂಕಾರಿಯಾಗಿದ್ದೆ. ಹೆಚ್ಚಿನ ಸೌಂದರ್ಯ ವಿದ್ದವರ ತಲೆ ತಿರುಗಲು ಹೆಚ್ಚು ವೇಳೆ ಏನೂ ಬೇಕಾಗುವುದಿಲ್ಲ. ನಾನಂತೂ ಲಕ್ಷ ದಲ್ಲೊಬ್ಬಳಾಗಿದ್ದೆ. ಗಾಜಿನಂತೆ ಬಿರಿಯುತ್ತಿದ್ದ ಬಣ್ಣ, ಕಂದು ಬಣ್ಣದ ಹೊಳಪಿನ ಕೇಶರಾಶಿ, ನಿಲುವು ಗತ್ತುಗಳಂತೂ ಕೇಳುವುದೇ ಬೇಡ. ಬನಾರಸಿನ ಸೀರೆ ಉಟ್ಟರೆ ಯಾವ ದೇಶದ ಮಹಾರಾಣಿ ಇವಳು ಎಂಬಂತಿದ್ದೆ.

ಅದು ಯುದ್ಧದ ಕಾಲವಾಗಿತ್ತು ಅಥವ ಯುದ್ಧ ಮುಗಿದ ವರ್ಷವಾಗಿತ್ತದು, ನನಗೆ ಅಷ್ಟೊಂದು ಖಚಿತವಾಗಿ ನೆನಪಿಗೆ ಬರುತ್ತಿಲ್ಲ. ಅಂತೂ ದೆಹಲಿಗೆ ವಸಂತದ ಆಗಮನವಾಗಿತ್ತು. ಕೋಟ್ಯಾಧೀಶ ವ್ಯಾಪಾರಿಗಳ ಮತ್ತು ಹಿಂದೂಸ್ತಾನದ ದೊಡ್ಡ ಅಧಿಕಾರಿಗಳ ಹೆಣ್ಣುಮಕ್ಕಳು-ಹಿಂದು, ಸಿಖ್, ಮುಸ್ಲಿಮರು ಉದ್ದನೆಯ ಕಾರು ಗಳಲ್ಲಿ ವೈವಿಧ್ಯಮಯ ಪಾರ್ಟಿಗಳು, ದಿನನಿತ್ಯದ ಕೂಟಗಳಲ್ಲಿ ಭಾಗವಹಿಸುತ್ತಿದ್ದರು. ಇಂದು ಇಂದ್ರಪ್ರಸ್ಥ ಕಾಲೇಜಿನಲ್ಲಿ ಡ್ರಾಮವಿದೆ, ನಾಳೆ ಮಿರಾಂಡ ಹೌಸ್‌ನಲ್ಲಿ, ನಾಡಿದ್ದು ಲೇಡಿ ಅರುಣ್ ಕಾಲೇಜಿನಲ್ಲಿ ಕನ್‌ಸರ್ಟ್ ಇದೆ. ಲೇಡಿ ಹಾರ್ಡಿಂಗ್ ಮತ್ತು ಸೆಂಟ್ ಸ್ಟೀಫನ್ಸ್ ಕಾಲೇಜು, ಚೆಮ್ಸ್‌ಫರ್ಡ್ ಕ್ಲಬ್, ರೋಷನ್‌ಆರಾ, ಇಂಪೀರಿಯಲ್, ಜಿಮ್‌ಖಾನ ... ಒಟ್ಟಿನಲ್ಲಿ ಎಲ್ಲೆಡೆ ಅರೇಬಿಯನ್ ನೈಟ್ಸ್‌ನ ರೋಮಾಂಚಕ ಅನುಭವಗಳು !

ಪ್ರಭ ಮತ್ತು ಸರಳಳೊಂದಿಗೆ ಒಂದು ದಿನ ನಾನು ಕೋಟ್ಯಾಧೀಶ್ವರ ಕಂಟ್ರ್ಯಾಕ್ಟರ್‌ರ ಮಗಳಾದ ದಿಲ್‌ಜಿತ್ ಕೌರ್‌ಳ ಮನೆಗೆ ಹೋದೆ. ಕಿಂಗ್ ಎಡ್ವರ್ಡ್ ರಸ್ತೆಯ ಅವಳ ಭವ್ಯ ಬಂಗಲೆಯಲ್ಲಿ ಗಾರ್ಡನ್ ಪಾರ್ಟಿಗಾಗಿ ಆಹ್ವಾನಿಸಲ್ಪಟ್ಟಿದ್ದೆ. ಅಲ್ಲಿ ನನ್ನ ಭೇಟಿ ಮೇಜರ್ ಖುಷ್ವಂತ್‌ಸಿಂಗ್‌ನೊಂದಿಗೆ ಆಯಿತು. ಅವನು

ಝೂನ್ಸಿಯ ಕಡೆಯ ಚೌಹಾಣ್ ರಾಜ್‌ಪೂತ್‌ನಾಗಿದ್ದ. ಆಜಾನುಬಾಹು; ಕಂದು ವರ್ಣದ ಭುಜಂಗ; ಉದ್ದನೆಯ ಮೊನಚಾದ ಮೇಲಕ್ಕೆ ತಿರುವಿದ್ದ ಮೀಸೆಗಳು; ಅತ್ಯಂತ ಸುಂದರ ಮತ್ತು ಹೊಳೆಯುವ ದಂತಪಂಕ್ತಿಗಳು–ನಕ್ಕರಂತೂ ಆಕರ್ಷಕನಾಗಿ ಕಂಡುಬರುತ್ತಿದ್ದ. ಕವಿ ಘಾಲಿಬ್‌ನ ಅಭಿಮಾನಿಯಾಗಿದ್ದ. ಪ್ರತಿ ಮಾತಿಗೊಂದು ಕವನವನ್ನುಸುರುತ್ತಿದ್ದ. ಮುಕ್ತವಾಗಿ ಸುಂದರವಾಗಿ ನಗುತ್ತಿದ್ದ ಮತ್ತು ಅತ್ಯಂತ ಸಭ್ಯತೆಯಿಂದ ಬಾಗಿ ಎಲ್ಲರೊಡನೆಯೂ ಮಾತನಾಡುತ್ತಿದ್ದ. ಮಾರನೆಯ ದಿನ ಸಿನೆಮಾ ನೋಡುವಂತೆ ನಮ್ಮನ್ನು ಆಹ್ವಾನಿಸಿದ. ಸರಳ, ಪ್ರಭ-ಅವರೆಲ್ಲಾ ತೀರಾ ಸಂಪ್ರದಾಯಸ್ತರಾದ್ದರಿಂದ ಹುಡುಗರೊಡನೆ ಹೊರಗೆಲ್ಲೂ ಹೋಗುತ್ತಿರಲಿಲ್ಲ. ಖುಷ್ವಂತ್‌ಸಿಂಗ್ ದಿಲ್‌ಜೀತ್‌ನ ಸಹೋದರನ ಸ್ನೇಹಿತನಾಗಿದ್ದ. ಅವನಿಗೇನು ಉತ್ತರಿಸಬೇಕೆಂದು ನಾನಿನ್ನೂ ಯೋಚಿಸುವಷ್ಟರಲ್ಲಿಯೇ ಸರಳ ಮೆಲ್ಲನೆ ನುಡಿದಳು "ಖುಷ್‌ವಂತ್‌ನೊಡನೆ ಸಿನೆಮಾಕ್ಕೆ ಖಂಡಿತ ಹೋಗಬೇಡ. ಸಾಕಷ್ಟು ಲೋಫರ್ ಹುಡುಗ....". ನಾನು ಸುಮ್ಮನಾದೆ.

ಆ ದಿನಗಳಲ್ಲಿ ನವದೆಹಲಿಯ ಕೆಲವೊಂದು ಹುಡುಗಿಯರ ಕಥೆಗಳು ಬಹಳ ಚಲಾವಣೆಯಲ್ಲಿದ್ದವು. ನಾನು ಅವನ್ನು ಕೇಳಿದರೂ ಸಾಕು ಹೆದರುತ್ತಿದ್ದೆ. ಸಭ್ಯ ಮನೆತನದ ಹುಡುಗಿಯರು ಯಾವ ರೀತಿಯಲ್ಲಿ ಮನೆಯವರ ಕಣ್ಣಿಗೆ ಮಣ್ಣೆರಚಿ ಮಜಾ ಮಾಡುತ್ತಾರೆ....ಹಾಸ್ಟೆಲಿನಲ್ಲಿ ನಾವು ಆಗಾಗ್ಗೆ ಇಂತಹ ಹುಡುಗಿಯರ ಬಗ್ಗೆ ಹರಡುತ್ತಿದ್ದ ಊಹಾಪೋಹಗಳಿಗೆ ಕಿವಿಗೊಡುತ್ತಿದ್ದೆವು. ಅವರುಗಳು ಬಹು ವಿಚಿತ್ರ ಹಾಗೂ ವಿಲಕ್ಷಣ ವ್ಯಕ್ತಿತ್ವದವರಾಗಿ ನನ್ನ ಮುಂದೆ ಚಿತ್ರಿತರಾಗುತ್ತಿದ್ದರಾದರೂ ಕಣ್ಣಿಗೆ ನೋಡಲು ಮಾತ್ರ ನಮ್ಮಂತೆಯೇ ಕಂಡುಬರುತ್ತಿದ್ದರು.... ಸೀರೆ, ಸಲ್ವಾರ್ ಕಮೀಜ್ ತೊಟ್ಟು, ಶಿಷ್ಟತೆಯಿಂದಿದ್ದ ಈ ಸುಂದರಿಯರು ವಿದ್ಯಾವಂತರಾಗಿದ್ದರು. "ಜನ ಸುಮ್ಮನೆ ಅಪಪ್ರಚಾರ ಮಾಡುತ್ತಾರೆ" ಸಾದಿಯ ಯೋಚಿಸಿ ನಿಧಾನವಾಗಿ ನುಡಿಯುತ್ತಿದ್ದಳು. "ನಿಜ ಹೇಳಬೇಕೆಂದರೆ, ನಮ್ಮ ಸಮಾಜವು ವಿದ್ಯಾವಂತ ಯುವತಿಯರನ್ನು ಅರಿಯುವ ಸಾಮರ್ಥ್ಯವನ್ನೇ ಪಡೆದಿಲ್ಲ" ಸರಳ ಹೇಳುತ್ತಿದ್ದಳು. "ಆದರೂ ಹುಡುಗಿಯರು ಸಮತೋಲನದ ವಿವೇಚನೆಯನ್ನೇ ಕಳೆದುಕೊಂಡಿದ್ದಾರೆ" ರೇಹಾನ ಮೆಲ್ಲನೆ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಳು. ಅಂತೂ ಒಟ್ಟಿನಲ್ಲಿ ನಮ್ಮಂತೆ ಇರುವ, ನಮ್ಮೊಡನೆ ಇರುವ ಕೆಲವು ಹುಡುಗಿಯರು ಇಂತಹ ಭಯಾನಕ ಕೃತ್ಯಗಳಲ್ಲಿ ಹೇಗೆ ತೊಡಗುವರೆಂಬುದೇ ನಮ್ಮ ಅರಿವಿಗೆ ಮೀರಿದುದಾಗಿತ್ತು.

ಮಾರನೆಯ ಸಂಜೆ ನಾನು ಲ್ಯಾಬೊರೇಟರಿಗೆ ಹೋಗುತ್ತಿದ್ದೆ. ನಿಕಲ್‌ಸನ್ ಮೆಮೋರಿಯಲ್ ಬಳಿ ಉದ್ದನೆಯ ಕಾರು ಮೆಲ್ಲನೆ ನನ್ನ ಬಳಿ ಸಾರಿ ನಿಂತಿತು.

ಅದರೊಳಗಿಂದ ಖುಷ್ವಂತ್‌ಸಿಂಗ್ ಗೋಚರಿಸಿದ. ಅರೆಬಿಳಿಕಿನಲ್ಲಿ ಅವನ ಹೊಳಪು ಹಲ್ಲುಗಳು ಮಿನುಗಿದವು.

"ಓ ಹಜರತ್ ! ನಮ್ಮ ಅಪಾಯಿಂಟ್ ಮರೆತೇಬಿಟ್ಟಿರಲ್ಲ !" ಅವನೆಂದ.

"ಜೀ...." ನಾನು ಪೇಚಿಗೆ ಸಿಕ್ಕಿದ್ದೆ.

"ಹುಜೂರ್‌ವಾಲಾ.... ನಡೆಯಿರಿ ಸನ್ತೋಷದಿಂದ. ಇಂತಹ ಸಂಜೆಯನ್ನು ಲ್ಯಾಬೊರೇಟರಿಯಲ್ಲಿ ವ್ಯರ್ಥವಾಗಿ ಕಳೆಯುವುದಲ್ಲ....ಇಷ್ಟೊಂದು ಶ್ರಮವಹಿಸಿ ಏನು ಮಾಡಬೇಕಾಗಿದೆ?"

ನಾನು ಅಪ್ರಯತ್ನಕವಾಗಿ ಸುತ್ತ ನಾಲ್ಕು ಕಡೆ ಕಣ್ಣು ಹಾಯಿಸಿದೆ ಮತ್ತು ಕಾರಿನಲ್ಲಿ ಮುದುಡಿ ಕುಳಿತುಬಿಟ್ಟೆ. ನಾವು ಕನ್ನಾಟ್‌ಪ್ಲೇಸ್‌ಗೆ ಹೋಗಿ ಒಂದು ಇಂಗ್ಲಿಷ್ ಚಲನಚಿತ್ರವನ್ನು ನೋಡಿದೆವು. ಅದರ ಮಾರನೆಯ ದಿನ ಕೂಡ. ಅನಂತರ ಒಂದು ವಾರದವರೆಗೆ ನಾನು ಅವನೊಡನೆ ತುಂಬಾ ತುಂಬಾ ಸುತ್ತಾಟ ನಡೆಸಿದೆ. ಅವನು 'ಮೇಡೆಂಜ್ಸ್'ನಲ್ಲಿ ಉಳಿದಿದ್ದ. ಆ ವಾರದ ಕೊನೆಯಾಗುವುದರೊಳಗೆ ನಾನು ಮೇಜರ್ ಖುಷ್ವಂತ್‌ಸಿಂಗ್‌ನ ಪ್ರೇಯಸಿಯಾಗಿಬಿಟ್ಟಿದ್ದೆ.

ನಾನು ಸಾಹಿತ್ಯದ ವಿದ್ಯಾರ್ಥಿನಿಯಲ್ಲ. ನಾನು ಚೀನೀ, ಜಪಾನಿ, ರಷಿಯನ್, ಇಂಗ್ಲೀಷ್ ಅಥವ ಉರ್ದು ಕಾವ್ಯವನ್ನು ಅಭ್ಯಸಿಸಿಲ್ಲ. ಸಾಹಿತ್ಯಾವಲೋಕನವೆಂದರೆ ಸಮಯ ವ್ಯರ್ಥ ಎಂದು ನನ್ನ ಅನಿಸಿಕೆ. ಹದಿನೈದನೇ ವಯಸ್ಸಿನಿಂದಲೇ ವಿಜ್ಞಾನ ನನ್ನ ಹಾಸಿಗೆ ಹೊದಿಕೆಯಾಗಿದೆ. ಆದಿಭೌತಿಕ ಕಲ್ಪನೆಗಳೇನೇದರೆಂದು ನನಗೆ ತಿಳಿದಿಲ್ಲ. ಅನುಭಾವಿಕ ಸೆಳೆತವೆಂದರೆ ಏನು ಎಂಬುದು ನನಗೆ ತಿಳಿದಿಲ್ಲ. ಕಾವ್ಯ ಮತ್ತು ಫಿಲಾಸಫಿಗೆ ಆಗ ನನ್ನ ಬಳಿ ವೇಳೆ ಇರಲಿಲ್ಲ ಮತ್ತು ಈಗಲೂ ಇಲ್ಲ....ನಾನು ದೊಡ್ಡ ದೊಡ್ಡ, ಭಯಂಕರ, ಅಸ್ಪಷ್ಟ ಮತ್ತು ವಿಚಿತ್ರ ಶಬ್ದಗಳ ಬಳಕೆಯನ್ನು ಮಾಡುವುದಿಲ್ಲ....

ಅಂತೂ ಹದಿನೈದು ದಿನಗಳ ಒಳಗಾಗಿ ಈ ಪ್ರಸಂಗವು ಕಾಲೇಜಿನಲ್ಲಿ ಹೆಚ್ಚು ಕಮ್ಮಿ ಎಲ್ಲರಿಗೂ ಗೊತ್ತಾಗಿಬಿಟ್ಟಿತ್ತು. ಆದರೆ ನನ್ನಲ್ಲಿ ಮೊದಲಿನಿಂದಲೂ ವಿಶೇಷವಾದ ಆತ್ಮವಿಶ್ವಾಸವಿದ್ದಿತು. ನನಗೆ ಯಾರ ಪರಿವೆಯೂ ಇರಲಿಲ್ಲ. ಆರಂಭದಿಂದಲೂ ನಾನು ಬೇರೆಯವರೊಡನೆ ಹೆಚ್ಚು ಮಾತನಾಡುತ್ತಿರಲಿಲ್ಲ. ಸರಳ ಮತ್ತಿತರರ ಗುಂಪು ನನ್ನನ್ನು ಮಂಗಳ ಗ್ರಹದಿಂದ ಬಂದಳೇನೋ ಅಥವಾ ತಲೆಯ ಮೇಲೆ ಕೊಂಬುಗಳಿವೆಯೇನೋ ಎಂಬಂತೆ ನಿರುಕಿಸುತ್ತಿತ್ತು. ಡೈನಿಂಗ್ ಹಾಲ್‌ನಿಂದ ನಾನು ಹೊರ ಹೋದ ಕೂಡಲೇ ಗಂಟೆಗಟ್ಟಳೆ ನನ್ನ ಬಗ್ಗೆ ಚರ್ಚೆ ನಡೆಯುತ್ತಿತ್ತು.

ತಮ್ಮ ಇಂಟೆಲಿಜೆನ್ಸ್ ಸರ್ವಿಸ್ ಮೂಲಕ ನನ್ನ ಮತ್ತು ಖುಷ್‌ವಂತ್‌ನ ಪ್ರತಿಕ್ಷಣದ ಮಾಹಿತಿ ತರಿಸಿಕೊಳ್ಳುತ್ತಿದ್ದರು. ನಾವು ಸಂಜೆ ಎಲ್ಲಿ ಹೋದೆವು-ರಾತ್ರಿ ನವದೆಹಲಿಯ ಯಾವ ಬಾಲ್‌ರೂಮ್‌ನಲ್ಲಿ ಕುಣಿದೆವು (ಖುಷ್ವಂತ್ ಅದ್ಭುತವಾಗಿ ನರ್ತಿಸುತ್ತಿದ್ದ ಮತ್ತು ನನಗೂ ಕಲಿಸಿದ್ದ) ಖುಷ್ವಂತ್ ನನಗೆ ಯಾವ ಯಾವ ಉಡುಗೊರೆಗಳನ್ನು ಯಾವ ಯಾವ ಅಂಗಡಿಗಳಿಂದ ಖರೀದಿಸಿದ–ಇವೆಲ್ಲವೂ ಅವರಿಗೆ ತಲುಪುತ್ತಿತ್ತು.

ಖುಷ್ವಂತ್‌ಸಿಂಗ್ ನನಗೆ ತುಂಬಾ ಹೊಡೆಯುತ್ತಿದ್ದ ಮತ್ತು ಇಂದಿನವರೆಗೆ ಯಾವೊಬ್ಬ ಗಂಡಸೂ ಯಾವೊಬ್ಬ ಹೆಂಗಸನ್ನೂ ಪ್ರೀತಿಸದಷ್ಟು ಗಾಢವಾಗಿ ಪ್ರೀತಿಸುತ್ತಿದ್ದ. ಅನೇಕ ತಿಂಗಳು ಕಳೆದವು. ಎಂ.ಎಸ್ಸಿ., ಪ್ರೀವಿಯಸ್ ಪರೀಕ್ಷೆಗಳು ಸಮೀಪಿಸಿದವು. ನಾನು ವ್ಯಾಸಂಗದಲ್ಲಿ ಮುಳುಗಿದೆ. ಪರೀಕ್ಷೆ ಮುಗಿದನಂತರ ಅವನು ಹೇಳಿದ "ಜಾನೆಮನ್ ದಿಲ್‌ರುಬಾ....ನಡಿ ಯಾವುದಾದರೂ ಪ್ರಶಾಂತ ಬೆಟ್ಟಕ್ಕೆ ಹೋಗೋಣ ..." ನಾನು ಕೆಲವು ದಿನಗಳಿಗೆಂದು ಮೀರತ್ ಹೋಗಿ ಫೈನಲ್ ಪರೀಕ್ಷೆಗಾಗಿ ಈಗಿನಿಂದಲೇ ವ್ಯಾಸಂಗಕ್ಕೆ ತೊಡಗಬೇಕೆಂದು ಅಬ್ಬಾಜಾನ್‌ಗೆ ಹೇಳಿದೆ. (ನಾನು ಥರ್ಡ್ ಇಯರ್‌ನಲ್ಲಿದ್ದಾಗ ಅಮ್ಮಾಜಾನ್ ಮರಣ ಹೊಂದಿದ್ದರು) ಉತ್ತರ ಭಾರತದ ಹಿಲ್‌ಸ್ಟೇಷನ್‌ಗಳಲ್ಲಿ ಬಹಳ ಮಂದಿ ಪರಿಚಿತರು ಸಿಗುವ ಸಾಧ್ಯತೆ ಇದ್ದುದರಿಂದ ದೂರ ದಕ್ಷಿಣದಲ್ಲಿ ಊಟಿಗೆ ಹೋದೆವು. ಅಲ್ಲಿ ತಿಂಗಳು ತುಂಬುವವರೆಗೆ ಇದ್ದೆವು. ಖುಷ್ವಂತ್‌ನ ರಜೆ ಮುಗಿದದ್ದರಿಂದ ದೆಹಲಿಗೆ ಹಿಂದಿರುಗಿ ತಿಮಾರ್‌ಪುರದ ಒಂದು ಬಂಗಲೆಯಲ್ಲಿ ಉಳಿದೆವು.

ಕಾಲೇಜು ಆರಂಭವಾಗುವುದಕ್ಕೆ ಒಂದು ವಾರ ಮೊದಲು ಖುಷ್ವಂತ್ ಮತ್ತು ನನ್ನ ನಡುವೆ ದೊಡ್ಡ ಜಗಳವಾಯಿತು. ಅವನು ನನಗೆ ತುಂಬಾ ಹೊಡೆದ. ನನ್ನ ಮುಖದ ಮೇಲೆ ಗಾಯವಾಗುವಂತೆ ಹೊಡೆದ; ನನ್ನ ಮೈ ಮೇಲೆ ನೀಲಿ ಬಾಸುಂಡೆಗಳು ಮೂಡಿದವು. ಜಗಳಕ್ಕೆ ಮೂಲ ಕಾರಣ ಅವನ ಆ ದರಿದ್ರ ಕ್ರಿಶ್ಚಿಯನ್ ಸ್ನೇಹಿತೆಯಾಗಿದ್ದಳು. ಆ ಚಾರ್-ಸೌ-ಬೀಸ್ ಹುಡುಗಿ ಯುದ್ಧಕಾಲದಲ್ಲಿ ಸೇನೆಗೆಂದು ಭರ್ತಿಯಾಗಿದ್ದಳು ಮತ್ತು ಖುಷ್ವಂತ್‌ಗೆ ಬರ್ಮಾದಲ್ಲಿ ಭೆಟ್ಟಿಯಾಗಿದ್ದಳು. ಅವನು ಅವಳೊಂದಿಗೆ ನಿಶ್ಚಿತಾರ್ಥವನ್ನೂ ಮಾಡಿಕೊಂಡಿದ್ದ. ಅವನು ಹೇಗೆ ಅವಳೊಂದಿಗೆ ಮದುವೆಯ ವಾಗ್ದಾನವನ್ನು ಮಾಡಿದ್ದನೋ ನನಗಂತೂ ಅರ್ಥವಾಗುತ್ತಿಲ್ಲ. ಆದರೆ ನನ್ನೊಡನೆ ಸ್ನೇಹವಾದನಂತರ ಅವಳ ಉಂಗುರವನ್ನು ವಾಪಸು ಮಾಡುತ್ತೇನೆಂದು ಹಠ ಹಿಡಿದಿದ್ದ. ಅವಳಂತೂ ನನ್ನ ಬಗ್ಗೆ ವಿಷ ಕಕ್ಕುತ್ತಿದ್ದಾಳೆ.

ಆ ರಾತ್ರೆ ತಿಮಾರ್‌ಪುರದ ನಿರ್ಜನ ಬಂಗಲೆಯುಲ್ಲಿ ಅವನು ನನ್ನೆದುರು ಕೈ ಜೋಡಿಸಿ ತನ್ನೊಡನೆ ಮದುವೆಯಾಗುವಂತೆ ಬೇಡಿಕೊಂಡ. ಇಲ್ಲದಿದ್ದರೆ ತಾನು

ಸಾಯುವುದಾಗಿ ನುಡಿದ. "ಖಂಡಿತ ಇಲ್ಲ.... ಖಯಾಮತ್‌ವರೆಗೂ ಇಲ್ಲ...." ನಾನೆಂದೆ. ನಾನು ದೊಡ್ಡ ಮನೆತನದ ಸಯ್ಯದ್ ವಂಶದಾಕೆ. ಈ ಕಪ್ಪನೆಯ ತಂಬಾಕುವಿನ ಮೂಟೆ-ಹಿಂದೂ ಜಾಟ್‌ನೊಡನೆ ಮದುವೆಯಾಗಿ ನನ್ನ ವಂಶಕ್ಕೆ ಕಳಂಕ ಹಚ್ಚಲೇ ?

ನಾನಂತೂ ದೊಡ್ಡಮನೆತನದ, ಹಿರಿಯ ವಂಶದ ಕಣ್ಣಿನ ಬೆಳಕಾದ ಸುರ ಸುಂದರನ ಕನಸು ಕಾಣುತ್ತಿದ್ದೆ. ಸ್ವಲ್ಪ ತಡವಾದರೂ ಅವನು ಬಂದೇ ಬರುತ್ತಿದ್ದ. ನಮ್ಮ ಆರಸಿ ಮುಸ್ಹಫ್ ಆಗುತ್ತಿತ್ತು. ನನಗೆ ಸೆಹ್‌ರ ಕಟ್ಟುತ್ತಿದ್ದರು. ಜಲ್ವ ಆಗಿ ನಾನವನ ಮನೆ ಸೇರುತ್ತಿದ್ದೆ. ಮಿಂಚಿನ ಬಳ್ಳಿಗಳಂತಿರುವ ನಾದಿನಿಯರು ಹೊಸ್ತಿಲ ಬಳಿ ನನ್ನನ್ನು ನಿಲ್ಲಿಸಿ ಅವರಣ್ಣನಿಂದ 'ನೇಗ್' ಕೇಳುತ್ತಿದ್ದರು. ಮಿರಾಸಿನ್‌ಗಳು ಢೋಲಿನ ತಾಳದೊಂದಿಗೆ ಪ್ರೇಮಗೀತೆಯನ್ನು ಆಲಾಪಿಸುತ್ತಿದ್ದರು. ಏನೆಲ್ಲಾ ಆಗುವುದಿತ್ತು.... ಹಿಂದು-ಮುಸ್ಲಿಮ್ ಮದುವೆಗಳ ಅವಸ್ಥೆಯನ್ನು ನಾನೇನೂ ನೋಡಿಲ್ಲವೇ ? ಬಹಳಷ್ಟು ಜನ ಆಧುನಿಕತೆಯ ಸೋಗಿನಲ್ಲಿ ಅಥವ ಪ್ರೀತಿಯ ಅಮಲಿನಲ್ಲಿ ಹಿಂದೂಗಳೊಡನೆ ಮದುವೆಯಾಗಿ ವರ್ಷ ಕಳೆಯುವುದರೊಳಗೆ ಮಗುವನ್ನೂ ಕುತ್ತಿಗೆಗೆ ಕಟ್ಟಿಕೊಂಡು ಬೀದಿಯಲ್ಲಿ ಬೀಳಲಿಲ್ಲವೆ ? ಅತ್ತಲೂ ಇಲ್ಲ, ಇತ್ತಲೂ ಇಲ್ಲದಂಥ ಪರಿಸ್ಥಿತಿ ಯಾರಿಗೆ ಬೇಕಿದೆ ?

ನನ್ನ ನಿರಾಕರಣೆಯಿಂದ ಸಿಟ್ಟಿಗೆದ್ದ ಖುಷ್ವಂತ್ ಬೂಡ್ಸ್ ಕಾಲಲ್ಲಿ ಒದ್ದು ಹಣ್ಣು ಹಣ್ಣು ಮಾಡಿದ ಮತ್ತು ಮೂರನೆಯ ದಿನ ಆ ಕರಿಪಿಶಾಚಿ ಕ್ಯಾಥೆರಿನ್ ಧರ್ಮದಾಸ್‌ಳೊಂದಿಗೆ ಆಗ್ರಾಕ್ಕೆ ನಡೆದುಬಿಟ್ಟ. ಅಲ್ಲಿ ಆ ಸುಟ್ಟ ಮೋರೆಯವಳೊಡನೆ ಸಿವಿಲ್ ಮ್ಯಾರಿಯೇಜ್ ಮಾಡಿಕೊಂಡ.

ನಾನು ಎರಡನೆಯ ಟರ್ಮಿಗೆ ಹಾಸ್ಟೆಲ್ ತಲುಪಿದಾಗ ನನ್ನ ತಲೆ ಮತ್ತು ಮುಖದ ಮೇಲೆ ಬ್ಯಾಂಡೇಜ್ ಇತ್ತು. ಅಬ್ಬಾಜಾನ್‌ಗೆ ನಾನು, ಲ್ಯಾಬೊರೇಟರಿ ಪ್ರಯೋಗ ನಿರತಳಾಗಿದ್ದಾಗ ಸಿಡಿದ ಮಿಶ್ರಣದಿಂದ ಮುಖದ ಸ್ವಲ್ಪಭಾಗ ಸುಟ್ಟಿದೆ, ಈಗ ಚೆನ್ನಾಗಿದ್ದೇನೆ, ಏನೂ ಯೋಚಿಸಬೇಕಿಲ್ಲವೆಂದು ಪತ್ರ ಬರೆದೆ.

ಹುಡುಗಿಯರಿಗಂತೂ ಎಲ್ಲಾ ವಿಚಾರ ಮೊದಲೇ ತಿಳಿದುಹೋಗಿತ್ತು. ಸಜ್ಜನಿಕೆಯಿಂದ ಅವರ್ಯಾರೂ ನನ್ನ ಯೋಗಕ್ಷೇಮವನ್ನು ವಿಚಾರಿಸಲಿಲ್ಲ. ಇಷ್ಟು ದೊಡ್ಡ ಹಗರಣದನಂತರ ನನಗೆ ಹಾಸ್ಟೆಲಿನಲ್ಲಿ ಉಳಿಯಲು ಅವಕಾಶ ನಿರಾಕರಿಸುತ್ತಿದ್ದರು. ಆದರೆ, ಹಾಸ್ಟೆಲ್ಲಿನ ವಾರ್ಡನ್ ಖುಷ್ವಂತ್‌ನ ಸ್ನೇಹಿತೆಯಾಗಿದ್ದರಿಂದ ಎಲ್ಲವೂ ತಣ್ಣಗಾಯಿತು. ಅಷ್ಟಲ್ಲದೆ ಯಾರ ಬಳಿಯೂ ನನ್ನ ವಿರುದ್ಧದ ಸಾಕ್ಷ್ಯಾಧಾರವೂ ಇರಲಿಲ್ಲ.

ಕಾಲೇಜು ಹುಡುಗಿಯರ ಬಗ್ಗೆ ಜನ ಹೇಗೂ ಅಪಪ್ರಚಾರ ಮಾಡಲು ಸಿದ್ಧರಾಗಿಯೇ ಇರುತ್ತಾರಲ್ಲಾ....

ಅಂದಿನ ದೃಶ್ಯ ನನ್ನೆದುರು ಮಾಸದೆ ಉಳಿದಿದೆ. ಬೆಳಿಗ್ಗೆ ಹನ್ನೊಂದು ಘಂಟೆಯ ಸಮಯವಿರಬಹುದು. ರೈಲ್ವೆ ಸ್ಟೇಷನ್ನಿನಿಂದ ನಮ್ಮ ಹುಡುಗಿಯರ ಟಾಂಗಾಗಳು ಹೆಬ್ಬಾಗಿಲಿನಿಂದ ಒಳಬಂದು ಹಾಸ್ಟೆಲ್ಲಿನ ಮುಂಭಾಗದಲ್ಲಿ ತಂತಮ್ಮ ಸಾಮಾನುಗಳನ್ನಿಳಿಸುತ್ತಿದ್ದರು. ನಾನು ಟಾಂಗಾದಿಂದ ಇಳಿದಾಗ ಹೆಣದ ಮೋರೆಗೆ ಕಟ್ಟುವ "ಥಾಟ"ದಂತೆ ಕಟ್ಟಿದ್ದ ನನ್ನ ಬಿಳಿಚಿದ ಮೋರೆಗೆ ಕಟ್ಟಿದ ಬಟ್ಟೆಯನ್ನು ಕಂಡು ಸ್ತಬ್ಧರಾದರು. ನಾನು ನನ್ನ ಸಾಮಾನನ್ನು ಚೌಕೀದಾರನ ತಲೆಯ ಮೇಲಿಡಿಸಿ, ನನ್ನ ಕೋಣೆ ಸೇರಿಕೊಂಡೆ. ಮಧ್ಯಾಹ್ನ ಊಟದ ಮೇಜಿನ ಮೇಲೆ ನಾನು ಕೈಯಾನಿಸಿ ಕುಳಿತಾಗ, ಆ ಮಳ್ಳಿಯರು ನನ್ನೊಡನೆ ಲೋಕಾಭಿರಾಮವಾಗಿ ಮಾತ್ರ ಸಂಭಾಷಿಸಿದರು. ಇಷ್ಟರಿಂದಲೇ ಅವರುಗಳಿಗೆ ನನ್ನ ಗಾಯದ ಘಟನೆಯ ವಿವರ ತಿಳಿದು ಹೋಗಿದೆ ಎಂಬ ಅರಿವಾಯಿತು. ರಾತ್ರಿಯ ಊಟಕ್ಕೆ ನಾನಂತೂ ಡೈನಿಂಗ್ ಹಾಲ್ ಸೇರಲಿಲ್ಲ. ಆದರೆ ಆ ದುಷ್ಟ ಕೂಟದ ನಾಯಕಿಯೊಬ್ಬಳು ನಾನು "ನಿಂಫೋ ಮೇನಿಯಾಕ್" ಎಂದು ಘೋಷಿಸಿದ್ದು ಮಾತ್ರ ನನ್ನ ಪತ್ತೇದಾರಿ ದಳದ ಮೂಲಕ ನನಗೆ ತಿಳಿಯಿತು.

ಈ ರೀತಿಯ ಬಿರುದು ಬಾವಲಿಗಳು ಈಗ ನನಗೆ ಸರ್ವೇ ಸಾಮಾನ್ಯ ಎನ್ನಿಸಿ ಬಿಟ್ಟಿತ್ತು. ಒಂದು ಮೀನು ಇಡೀ ಜಲವನ್ನು ಕೊಚ್ಚೆಯನ್ನಾಗಿಸಿದೆ;ಆದ್ದರಿಂದಲೇ ಮಹಿಳೆಯರಿಗೆ ನೀಡುವ ಉನ್ನತ ಶಿಕ್ಷಣವು ಅಪಾಯಕಾರೀ ಮತ್ತು ಕುಪ್ರಸಿದ್ಧಿಗೆ ಕಾರಣವಾಗುವಂತಹದು ಇತ್ಯಾದಿ ಇತ್ಯಾದಿ.... ನಾನಂತೂ ಶೇಕಡ ನೂರರಷ್ಟು ಈ ಅಭಿಪ್ರಾಯಗಳೊಂದಿಗೆ ಸಹಮತ ಹೊಂದಿದ್ದೆ. ಒಳ್ಳೆಯ ಸುಸಂಸ್ಕೃತ, ಉನ್ನತ ವ್ಯಾಸಂಗ ಪಡೆದ ಚಂದದ ಹುಡುಗಿಯರು ಸ್ವಚ್ಛಂದ ಪ್ರವೃತ್ತಿಯವರಾಗಿ ಯಾಕಿರು ತ್ತಾರೆ ಎಂದು ನಾನೇ ಸ್ವತಃ ಯೋಚನೆ ಮಾಡಿದ್ದೇನೆ. ಒಂದು ಥಿಯರಿಯ ಪ್ರಕಾರ ಐ.ಕ್ಯು. ಕಡಿಮೆ ಇರುವ ಹುಡುಗಿಯರು ಸ್ವಚ್ಛಂದ ಪ್ರವೃತ್ತಿಯವರಾಗಿರುತ್ತಾರೆ; ಮಾನವ ಬುದ್ಧಿ ತಿಳಿದು ತಿಳಿದೂ ತನ್ನ ಸರ್ವನಾಶದೆಡೆ ನಡೆಯುವುದಿಲ್ಲ. ಆದರೆ ಕುಶಾಗ್ರಮತಿಯ ಹುಡುಗಿಯರೂ 'ಲೋಫರ್‌ತನ'ದಲ್ಲಿ ತೊಡಗಿದ್ದನ್ನು ನಾನೇ ಕಂಡಿದ್ದೇನೆ.... ಎರಡನೆಯ ಥಿಯರಿಯ ಪ್ರಕಾರ, ಮನರಂಜನೆ, ಸುತ್ತಾಟ, ದುಡ್ಡು ಕಾಸು ಬದುಕಿನ ಸುಖಲೋಲುಪತೆ ಬೆಲೆಬಾಳುವ ಉಡುಗೊರೆಗಳು, ಲೋಭ, ಪ್ರಣಯದ ಅನುಭವಗಳ ಅನ್ವೇಷಣೆ, ಅಡ್ವೆಂಚರ್‌ನ ಬಯಕೆ ಅಥವ ಬೇಸರ ಕಳೆಯಲು ಅಥವ ಪರ್ದದ ದಿಗ್ಭಂಧನದಿಂದ ಮುಕ್ತಿ ಮತ್ತು ಸ್ವತಂತ್ರ ವಾತಾವರಣ

ದಲ್ಲಿ ಕಾಲಿಟ್ಟು ಹಳೆಯ ಸಂಪ್ರದಾಯಗಳ ವಿರುದ್ಧ ಬಂಡಾಯ–ಇವೆಲ್ಲವೂ ಹುಡುಗಿಯರ ಸ್ವಚ್ಛಂದ ಬದುಕಿಗೆ ಕಾರಣ. ಖಂಡಿತವಾಗಿಯೂ ಇವೇ ಕಾರಣಗಳಿರಬೇಕು ಹೊರತು ಇನ್ನಾವ ಕಾರಣವಿರಲು ಸಾಧ್ಯ ?

ನಾನು ಫಸ್ಟ್ ಟರ್ಮ್ ಪರೀಕ್ಷೆಯನ್ನು ಮುಗಿಸಿದ್ದೆನೋ ಇಲ್ಲವೋ ಖುಷ್ವಂತ್ ಮತ್ತೆ ಬಂದಿಳಿದ. ಅವನು ನನಗೆ ಲ್ಯಾಬೊರೇಟರಿಗೆ ಫೋನ್ ಮಾಡಿ ನರೋಲದಲ್ಲಿ ಆರು ಘಂಟೆಗೆ ಸಿಗುವಂತೆ ಹೇಳಿದ. ಅವನು ಕ್ಯಾಥೆರೀನ್‌ಳನ್ನು ಅವಳ ತಂದೆ ತಾಯಿಯ ಬಳಿ ಬಿಟ್ಟು, ಸರ್ಕಾರೀ ಕೆಲಸದ ಮೇಲೆ ದೆಹಲಿಗೆ ಬಂದಿದ್ದ. ಈ ಸಾರಿ ನಾವು ವಿಮಾನದ ಮೂಲಕ ಒಂದು ವಾರಕ್ಕಾಗಿ ಬೊಂಬಾಯಿಗೆ ಹೋದೆವು.

ಅನಂತರ ಪ್ರತಿ ಎರಡು ಮೂರು ತಿಂಗಳಿಗೊಮ್ಮೆ ಅವನ ನನ್ನ ಭೇಟಿಯಾಗುತ್ತಿತ್ತು. ಹೀಗೆಯೇ ಒಂದು ವರ್ಷ ಕಳೆಯಿತು. ಈ ಬಾರಿ ಅವನು ದೆಹಲಿಗೆ ಬಂದಾಗ ನನ್ನನ್ನು ಕರೆತರಲು ಅವನ ಆಪ್ತ ಗೆಳೆಯನೊಬ್ಬನನ್ನು ಕಾರಿನಲ್ಲಿ ಕಳಿಸಿದ್ದ. ಖುಷ್ವಂತ್ ಲಕ್ನೋದಿಂದ ಲಾಹೋರ್‌ಗೆ ಹೋಗುವ ಹಾದಿಯಲ್ಲಿ ಪಾಲಮ್‌ನಲ್ಲಿ ನಾಲ್ಕಾರು ಗಂಟೆಯ ಕಾಲ ಉಳಿಯುವವನಿದ್ದ. ಅವನ ಈ ಗೆಳೆಯ ದೆಹಲಿಯ ಒಬ್ಬ ದೊಡ್ಡ ಮುಸ್ಲಿಮ್ ವ್ಯಾಪಾರಿಯ ಮಗನಾಗಿದ್ದ. ಅವನು ಹೆಂಡತಿ ಮಕ್ಕಳೊಂದಿಗನಾಗಿದ್ದ. ನಲವತ್ತರ ಸಮೀಪದಲ್ಲಿದ್ದ ಅವನು ತಾಳೆಮರದಂತಿದ್ದ. ಅತ್ಯಂತ ತಪ್ಪು ತಪ್ಪು ಇಂಗ್ಲೀಷ್ ಮಾತನಾಡುತ್ತಿದ್ದ. ಕಪ್ಪಗೆ ಒರಟೊರಟಾಗಿದ್ದು ಹಕ್ಕಿಪಿಕ್ಕಿಯವರಂತೆ ಕಾಣುತ್ತಿದ್ದ.

ಖುಷ್ವಂತ್ ಅಂದು ದೆಹಲಿಯಿಂದ ಹೋದವನು ಮತ್ತೆಂದೂ ಹಿಂದಿರುಗಲಿಲ್ಲ. ಏಕೆಂದರೆ ನಾನು ಈಗ ಆ ಫಾರೂಕ್‌ನ ಮಿಸ್ಟ್ರೆಸ್ ಆಗಿದ್ದೆ. ಫಾರೂಕ್‌ನೊಡನೆ ನನ್ನ ನಿಶ್ಚಿತಾರ್ಥವಾಗಿದೆಯೆಂಬಂತೆ ನಾನು ಅವನೊಡನೆ ದೆಹಲಿಯ ಶ್ರೀಮಂತ ಸಮಾಜದಲ್ಲಿ ದಾಖಲಾದೆ. ಮುಸ್ಲಿಮರಲ್ಲಂತೂ ನಾಲ್ಕು ಮದುವೆಗಳಾಗಬಹುದು. ಅಂತಹುದರಲ್ಲಿ ಇದೇನೂ ಧಾರ್ಮಿಕ ದೃಷ್ಟಿಯಿಂದ ಅಂತಹ ಕೆಟ್ಟದಾಗಿರಲಿಲ್ಲ. ಅವಿದ್ಯಾವಂತ ಮಧ್ಯ ವಯಸ್ಕ ಪರ್ದದೊಳಗಿನ ಬೂಬಮ್ಮನಂತಹ ಹೆಂಡತಿ ಅವನಿಗಿರುವಾಗ ನಾಲ್ಕಾರು ಜನರೊಡನೆ ಸಭ್ಯತೆಯಿಂದ ವ್ಯವಹರಿಸಬಲ್ಲ ವಿದ್ಯಾವಂತ ಹುಡುಗಿಯೊಡನೆ ಮದುವೆ ಮಾಡಿಕೊಳ್ಳಬೇಕೆನ್ನುವುದು ಶ್ರೀಮಂತ ವರ್ಗದಲ್ಲಿ ಸರಿಯೆನಿಸುತ್ತಿತ್ತು. ನಮ್ಮ ಮಧ್ಯಮವರ್ಗದ ಕಾನೂನೆಂದರೆ, ಇದು ಮಾಡಬೇಡ; ಅದು ಮಾಡಬೇಡ ಎಂದೆನ್ನುವುದು. ರಜೆಯಲ್ಲಿ ಫಾರೂಕ್ ನನ್ನನ್ನು ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದೊಯ್ದ. ಕಲ್ಕತ್ತ, ಲಕ್ನೋ, ಅಜ್ಮೇರ್ ... ನಾನು ಎಲ್ಲೆಲ್ಲಿ ಸುತ್ತಾಡಲಿಲ್ಲ !

ವಜ್ರ, ಮುತ್ತು-ರತ್ನಗಳ ಒಡವೆಗಳಿಂದ ನನ್ನನ್ನು ಹೇರಿಬಿಟ್ಟ. ಸಹಪಾಠಿಗಳೊಂದಿಗೆ ಟೂರ್ ಹೋಗುತ್ತಿದ್ದೇನೆ ಎಂದೊಮ್ಮೆ, ವೈಜ್ಞಾನಿಕ ಸಮ್ಮೇಳನಕ್ಕೆ ನನ್ನನ್ನು ಕರೆಯಲಾಗಿದೆ ಎಂದು ಮತ್ತೊಮ್ಮೆ ಅಬ್ಬಾಜಾನ್‌ಗೆ ಪತ್ರ ಬರೆದಿದ್ದ. ಅದರೊಟ್ಟಿಗೆ ವ್ಯಾಸಂಗದಲ್ಲಿ ಉತ್ತಮ ಮಟ್ಟವನ್ನು ಕಾದುಕೊಳ್ಳಬೇಕು ಎಂಬ ಗುರಿಯೂ ನನ್ನ ದಾಗಿತ್ತು. ಆದರೆ ಫೈನಲ್ ಪರೀಕ್ಷೆಯಲ್ಲಿ ನಾನು ಅತ್ಯಂತ ಕೆಟ್ಟದಾಗಿ ಉತ್ತರಿಸಿದೆ ಮತ್ತು ಪರೀಕ್ಷೆ ಮುಗಿದ ಕೂಡಲೇ ಮನೆಗೆ ಹೋದೆ.

ಆಗ ದೆಹಲಿಯಲ್ಲಿ ಗಡಿಬಿಡಿ ಆರಂಭವಾಯಿತು ಮತ್ತು ಕೋಮುಗಲಭೆಗಳ ಜ್ವಾಲೆ ದೇಶವನ್ನೇ ಸುಡಲಾರಂಭಿಸಿತ್ತು. ಫಾರೂಕ್ ಮೀರತ್‌ಗೆ ಪತ್ರ ಬರೆದು ನನಗೆ ಕೂಡಲೇ ಪಾಕಿಸ್ತಾನಕ್ಕೆ ಹೋಗುವಂತೆ ತಿಳಿಸಿದ. ನನಗಂತೂ ಮೊದಲಿನಿಂದ ಇದೇ ಇರಾದೆ ಇತ್ತು. ಅಬ್ಬಾಜಾನ್ ಕೂಡ ತುಂಬಾ ಗಾಬರಿಗೊಂಡಿದ್ದರು ಮತ್ತು ಸಭ್ಯ ಮುಸ್ಲಿಮ್ ಹುಡುಗಿಯರ ಮರ್ಯಾದೆಗೆ ಅಪಾಯವಿರುವ ಈ ಪರಿಸ್ಥಿತಿಯಲ್ಲಿ ನಾನು ಇಂಡಿಯಾದಲ್ಲಿ ಉಳಿಯಬಾರದೆಂಬುದೇ ಅವರದ್ದೂ ಅಭಿಪ್ರಾಯವಾಗಿತ್ತು.

ಪಾಕಿಸ್ತಾನ ನಮ್ಮದೇ ಆದ ಇಸ್ಲಾಮೀ ದೇಶವಾಗಿತ್ತು. ಅಬ್ಬಾಜಾನ್, ಆಸ್ತಿ ಮುಂತಾದುದರ ದೆಸೆಯಿಂದ ಕೂಡಲೇ ದೇಶ ಬಿಡುವಂತಿರಲಿಲ್ಲ. ತಮ್ಮಂದಿರು ಇಬ್ಬರೂ ಚಿಕ್ಕವರಾಗಿದ್ದರು ಮತ್ತು ಅಬ್ಬಾಜಾನ್ ಅಮ್ಮಾಜಾನ್ ಮರಣದನಂತರ ಅವರಿಬ್ಬರನ್ನೂ ಹೈದರಾಬಾದ್ ಡೆಕ್ಕನ್‌ಗೆ ಕಳಿಸಿದ್ದರು. ನನ್ನ ರಿಜಲ್ಟ್ ಬಂದಿತ್ತು. ನಾನು ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದೆ. ನನ್ನ ಹೃದಯ ಒಡೆಯಿತು. ಗಲಭೆಗಳು ಸ್ವಲ್ಪ ಶಾಂತವಾಗುತ್ತಿದ್ದಂತೆಯೇ ನಾನು ವಿಮಾನದ ಮೂಲಕ ಲಾಹೋರಿಗೆ ಬಂದೆ. ಫಾರೂಕ್ ನನ್ನೊಡನೆ ಬಂದ. ಅವನ ಉದ್ದಿಶ್ಯ ಪಾಕಿಸ್ತಾನದಲ್ಲಿ ಅವನ ವ್ಯವಹಾರವನ್ನು ವಿಸ್ತರಿಸಿ, ಲಾಹೋರ್‌ನ್ನು ಪ್ರಧಾನ ಕಛೇರಿಯನ್ನಾಗಿ ಮಾಡುವುದಿತ್ತು. ನನ್ನನ್ನು ಅದರ ಒಡತಿಯನ್ನಾಗಿ ಮಾಡಿ ಅಲ್ಲೇ ನನ್ನೊಡನೆ ಮದುವೆಮಾಡಿಕೊಳ್ಳಬೇಕೆಂದಿದ್ದ. ಅವನು ದೆಹಲಿ ಬಿಡಲು ಇಷ್ಟಪಡುತ್ತಿರಲಿಲ್ಲ. ಎರಡು ಮೂರು ತಿಂಗಳಿಗೊಮ್ಮೆ ಲಾಹೋರಿಗೆ ಭೇಟಿ ನೀಡುವುದು ಅವನ ಉದ್ದೇಶ ವಾಗಿತ್ತು. ಲಾಹೋರಿನಲ್ಲಂತೂ ವಿಪರೀತ ಗೊಂದಲವಿತ್ತು. ಫಾರೂಕ್‌ಗೆ ಇಲ್ಲಿ ಹೆಚ್ಚಿನ ಪರಿಚಯಸ್ಥರು ಯಾರೂ ಇರಲಿಲ್ಲ. ಒಂದಕ್ಕಿಂತ ಒಂದು ಸುಂದರ ಬಂಗಲೆ ಅಲಾಟ್ ಆಗುವ ಸಾಧ್ಯತೆ ಇದ್ದರೂ ಅವನು ಹೆಚ್ಚು ಕಷ್ಟಪಡದೆ ಸಂತ್ ನಗರದಲ್ಲಿ ಒಂದು ಪುಟ್ಟ ಮನೆಯನ್ನು ನನ್ನ ಹೆಸರಿಗೆ ಅಲಾಟ್ ಮಾಡಿಸಿ, ನನ್ನೊಂದಿಗಿರಲು ಅವನ ದೂರದ ಸಂಬಂಧಿಗಳ ಕುಟುಂಬವನ್ನೂ ಅಲ್ಲಿಗೆ ಸ್ಥಳಾಂತರಿಸಿದ. ಆ ಕುಟುಂಬವೂ ಭಾರತದಿಂದ ಬಂದು ನೆಲೆಯಿಲ್ಲದೆ ದಿಕ್ಕುಗಾಣದಂತಾಗಿತ್ತು.

ನನ್ನ ಬದುಕಿನ ಈ ತಿರುವಿನಲ್ಲಿ ನಾನು ತೀರಾ ಹತಾಶಳಾಗಿದ್ದೆ; ದಿಗ್ಭ್ರಮೆ ಗೊಂಡಿದ್ದೆ. ಅವಿಭಜಿತ ಹಿಂದೂಸ್ತಾನದ ಆ ಕುತೂಹಲ ತುಂಬಿದ ರಂಗುರಂಗಿನ ಬದುಕೆಲ್ಲಿ....47ರ ಲಾಹೋರಿನ ಆ ಇಕ್ಕಟ್ಟಿನ ಅರೆಗತ್ತಲ ಮನೆ ಎಲ್ಲಿ? ದೇಶಭ್ರಷ್ಟತೆ ... ಅಲ್ಲಾ ಹು ಅಕ್ಬರ್....ನಾನು ಎಂತೆಂತಹ ಹೃದಯ ವಿದ್ರಾವಕ ಕಾಲಗಳನ್ನು ನೋಡಿದ್ದೇನೆ ...

ನಾನು ಅತ್ಯಂತ ಶೂನ್ಯಮನಸ್ಕಳಾಗಿದ್ದರಿಂದ ಎಲ್ಲೂ ಉದ್ಯೋಗವನ್ನೂ ಅರಸಲಿಲ್ಲ. ಫಾರೂಕ್ ನನ್ನ ಹೆಸರಿನಲ್ಲಿ ಹತ್ತು ಸಾವಿರ ರೂ.ಗಳನ್ನು ಬ್ಯಾಂಕಿನಲ್ಲಿ ಜಮೆ ಮಾಡಿದ್ದರಿಂದ ಹಣಕಾಸಿನದೇನೂ ಹೆಚ್ಚಿಗೆ ತಾಪತ್ರಯವಾಗಲಿಲ್ಲ. (ಅವನು ಕೋಟ್ಯಾಧೀಶನಾಗಿದ್ದರೂ ಕೇವಲ ಹತ್ತು ಸಾವಿರ.... ಆದರೆ ಆಗ ಆ ವಿಷಯ ನನಗರ್ಥವಾಗಲಿಲ್ಲ ಮತ್ತು ಈಗಲೂ ಅರ್ಥವಾಗುತ್ತಿಲ್ಲ). ನಾನು ಬೆಳಗಿನಿಂದ ಸಂಜೆ ಯವರೆಗೂ ಮಂಚದ ಮೇಲೆ ಬಿದ್ದಿರುತ್ತಿದ್ದೆ ಮತ್ತು ಫಾರೂಕ್‌ನ ಚಿಕ್ಕಮ್ಮನೋ ಅಜ್ಜಿಯೋ ಯಾರೋ ನನ್ನ ಜೊತೆಗಿದ್ದ ಆ ಮುದುಕಮ್ಮನ ದೇಶಭ್ರಷ್ಟತೆಯ ಮತ್ತು ಆಕೆಯ ಹಿಂದಿನ ಸಂಪದ್ಭರಿತ ಬದುಕಿನ ಕಥೆಗಳನ್ನು ಕೇಳುತ್ತಾ ಎಲಡಿಕೆಯನ್ನು ಜಗಿಯುತ್ತಿದ್ದೆ. ಅದೂ ಬೇಸರವಾದಾಗ ಮೆಟ್ರಿಕ್‌ನಲ್ಲಿದ್ದ ಆಕೆಯ ಮಗಳಿಗೆ ಆಲ್ಜೀಬ್ರ, ಜ್ಯಾಮೆಟ್ರಿಯನ್ನು ಕಲಿಸುತ್ತಿದ್ದೆ. ಆಕೆಯ ಮಗ ಫಾರೂಕ್‌ನ ವ್ಯಾಪಾರದ ಮೇಲ್ವಿಚಾರಕನಾಗಿದ್ದ.

ಫಾರೂಕ್ ವರ್ಷದಲ್ಲಿ ಐದಾರು ಸಾರಿ ಲಾಹೋರ್‌ಗೆ ಭೇಟಿ ನೀಡುತ್ತಿದ್ದ. ಈಗ ಲಾಹೋರಿನ ಜನಜೀವನ ನಿಧಾನವಾಗಿ ಮಾಮೂಲಿನತ್ತ ಮರಳುತ್ತಿತ್ತು. ಅವನು ಬಂದಾಗ ಕೆಲದಿನ ನಾನು ಉಲ್ಲಸಿತಳಾಗಿರುತ್ತಿದ್ದೆ. ಆತನ ಚಿಕ್ಕಮ್ಮ ವಿಶೇಷ ಎಚ್ಚರಿಕೆಯಿಂದ ಅವನಿಗಾಗಿ ದೆಹಲಿಯ ವಿಶೇಷ ಭಕ್ಷ್ಯಗಳನ್ನು ತಯಾರಿಸುತ್ತಿದ್ದಳು. ನಾನು ಮಾಲ್ ರಸ್ತೆಯ ಹೇರ್ ಡ್ರೆಸ್ಸರ್ ಬಳಿ ನನ್ನ ತಲೆಗೂದಲನ್ನು ಸೆಟ್ ಮಾಡಿಸಲು ಹೋಗುತ್ತಿದ್ದೆ. ಸಂಜೆ ನಾವಿಬ್ಬರೂ ಜಿಮ್‌ಖಾನ ಕ್ಲಬ್‌ಗೆ ಹೋಗು ತ್ತಿದ್ದೆವು. ಅಲ್ಲಿನ ಒಂದು ಮೂಲೆಯ ಮೇಜಿನಲ್ಲಿ ಬಿಯರ್ ಗ್ಲಾಸನ್ನು ಹಿಡಿದು ಕೂರುತ್ತಿದ್ದ ಫಾರೂಕ್ ದೆಹಲಿಯ ಸಮಾಚಾರವನ್ನೆಲ್ಲಾ ನನಗೆ ತಿಳಿಸುತ್ತಿದ್ದ. ಆದರೆ ಅವನು ಮದುವೆಯ ಪ್ರಸ್ತಾಪವನ್ನೆಂದಿಗೂ ಮಾಡಲೇ ಇಲ್ಲ. ನಾನು ಕೂಡ ಆ ಮಾತನ್ನೆತ್ತಲಿಲ್ಲ. ನಾನಾಗ ಬದುಕಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡಿದ್ದೆ. ಅವನು ದೆಹಲಿಗೆ ಹಿಂದಿರುಗಿದ ನಂತರ ಹದಿನೈದು ದಿನಕ್ಕೊಮ್ಮೆ ನಾನು ಅವನ ವ್ಯವ ಹಾರದ ಬಗ್ಗೆ ಮತ್ತು ನನ್ನ ಯೋಗಕ್ಷೇಮದ ಬಗ್ಗೆ ಪತ್ರವೊಂದನ್ನು ರವಾನಿಸುತ್ತಿದ್ದೆ. ಜೊತೆಗೆ ಕನ್ನಾಟ್ ಪ್ಲೇಸ್ ಮತ್ತು ಚಾಂದ್‌ನಿ ಚೌಕದ ಇಂತಿಂತಹ ಅಂಗಡಿಯಿಂದ

ಇಂತಿಂತಹ ಸೀರೆಗಳನ್ನು ತೆಗೆದುಕೊಂಡು ಬರುವಂತೆ ಬರೆಯುತ್ತಿದ್ದೆ. ಯಾಕೆಂದರೆ ಪಾಕಿಸ್ತಾನದಲ್ಲಿ ಒಳ್ಳೆಯ ಸೀರೆಗಳು ಸಿಗುವುದೇ ವಿರಳವಾಗಿತ್ತು.

ಒಂದು ದಿನ ಮೀರತ್‌ನಿಂದ ಬಂದ ಚಚಾಮಿಯಾನ ಪತ್ರವು ಅಬ್ಬಾಜಾನ್ ಸಾವಿನ ಶೋಕವನ್ನು ಹೊತ್ತು ತಂದಿತು.

"ಯಾರಿರುವರಿಲ್ಲಿ
ಅಹಮದೆಮುರ್‌ಸಲ್ (ಪೈಗಂಬರ್)
ರೆ ಇಲ್ಲದಿರೆ ."

ನಾನು ಭಾವನಾಮಯಿಯಲ್ಲ. ಆದರೆ ನನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದ ಅವರ ಸಾವು ನನ್ನನ್ನು ತುಂಬಾ ಕಾಡಿಸಿತು. ಫಾರೂಕ್ ಬಹು ಪ್ರೀತಿಯಿಂದ ಕಾಳಜಿಯಿಂದ ಈ ಬಗ್ಗೆ ಬರೆದ ಪತ್ರಗಳು ತಲುಪಿದ ನಂತರ ಸ್ವಲ್ಪ ಸಮಾಧಾನವಾಯಿತು. ಅವನು ಬರೆದಿದ್ದ: 'ನಮಾಜ್ ಮಾಡು; ಬಹಳ ಕೆಟ್ಟ ಕಾಲವಿದು; ಪ್ರಪಂಚದ ಮೇಲೆ ಕೆಟ್ಟ ಕಾರ್ಮೋಡ ಕವಿದಿದೆ; ಸೂರ್ಯ ನೆತ್ತಿಯ ಮೇಲೆ ಒಂದೂವರೆ ಮೊಳದಲ್ಲಿ ಬಂದಿದ್ದಾನೆ. ಈ ಕ್ಷಣದ ಭರವಸೆ ಇಲ್ಲ'. ಎಲ್ಲಾ ವ್ಯವಹಾರಸ್ಥರಂತೆ ಅವನು ಕೂಡ ಅತ್ಯಂತ ಧರ್ಮಭೀರು ಮತ್ತು ಮೂಢನಂಬಿಕೆಯ ಆಗರವಾಗಿದ್ದ. ತಪ್ಪದಂತೆ ಅಜ್ಮೀರೆ ಷರೀಫ್‌ಗೆ ಹೋಗುತ್ತಿದ್ದ. ನುಜೂಮಿ, ಪಂಡಿತರು, ಪೀರ್ ಫಕೀರ್, ಒಳ್ಳೆ ಮತ್ತು ಕೆಟ್ಟ ಶಕುನ, ಕನಸುಗಳ ಫಲ ಇವೆಲ್ಲವುಗಳಲ್ಲೂ ವಿಶ್ವಾಸವನ್ನಿಟ್ಟಿದ್ದ. ಒಂದು ತಿಂಗಳಿನವರೆಗೆ ನಾನು ನಮಾಜ್ ಮಾಡಿದೆ. ಆದರೆ ಸಜ್‌ದ ಮಾಡಲು ನೆಲದ ಮೇಲೆ ಎರಡು ಕೈಯನ್ನೂರಿ ತಲೆಬಾಗುತ್ತಿದ್ದಾಗ ಪಕಪಕನೆ ನಗಬೇಕೆಂದೆನಿಸುತ್ತಿತ್ತು.

ಇಡೀ ಪಾಕಿಸ್ತಾನದಲ್ಲಿ ಆಗ ವಿಜ್ಞಾನದ ಮಹಿಳಾ ಲೆಕ್ಚರರ್‌ಗಳ ಬಹು ಬೇಡಿಕೆ ಇದ್ದಿತು. ಸ್ಥಳೀಯ ಕಾಲೇಜಿನವರು ನನಗೆ ತೀವ್ರ ಒತ್ತಾಯಿಸಿದ್ದರಿಂದ ನಾನು ವಿಜ್ಞಾನವನ್ನು ಬೋಧಿಸತೊಡಗಿದೆ. ಬೋಧಿಸುವುದೆಂದರೆ ನನಗೆ ದ್ವೇಷ. ಕೆಲ ಕಾಲದ ನಂತರ, ನನಗೆ ಪಂಜಾಬಿನ ಒಂದು ದೂರದ ಪ್ರದೇಶಕ್ಕೆ ಕರೆಸಿಕೊಂಡರು. ಅಲ್ಲಿ ನಾನು ಅನೇಕ ವರ್ಷಗಳವರೆಗೆ ಅಧ್ಯಾಪಕಿಯಾಗಿದ್ದೆ. ನನ್ನ ವಿದ್ಯಾರ್ಥಿನಿಯರು ಆಗಾಗ್ಯೆ ನನ್ನನ್ನು ಕೇಳುತ್ತಿದ್ದರು "ಹಾಯ್ ಅಲ್ಲಾಹ್ ! ಮಿಸ್ ತನ್‌ವೀರ್.... ನೀವು ಇಷ್ಟೊಂದು ಸುಂದರವಾಗಿದ್ದೀರಲ್ಲ.... ನಿಮ್ಮ ಆ ಕೋಟ್ಯಾಧಿಪತಿ ಮಂಗೇತರ್ ನೊಡನೆ ಮದುವೆಯನ್ನೇಕೆ ಮಾಡಿಕೊಳ್ಳುವುದಿಲ್ಲ ?"

ಆ ಪ್ರಶ್ನೆಗೆ ಸ್ವತಃ ನನ್ನ ಬಳಿಯೇ ಉತ್ತರವಿರಲಿಲ್ಲ. ಇದು ಹೊಸ ದೇಶ, ಹೊಸ ಜನರು, ಹೊಸ ಸಮಾಜ, ಇಲ್ಲಿ ಯಾರಿಗೂ ನನ್ನ ಭೂತಕಾಲದ ಅರಿವಿರಲಿಲ್ಲ.

ಯಾರಾದರೊಬ್ಬ ಸಭ್ಯ ಮನುಷ್ಯ ನನ್ನೊಡನೆ ಮದುವೆಯಾಗಲು ಸಿದ್ಧನಾಗುತ್ತಿದ್ದ. (ಆದರೆ ಸಭ್ಯ, ಸ್ಫುರದ್ರೂಪಿ, ಸರಳ ನಡೆನುಡಿಯ ಗಂಡಸರು ನನಗೆ ಇಷ್ಟವೇ ಆಗಲಿಲ್ಲ ... ನಾನೇನು ಮಾಡಲಿ ?) ದೆಹಲಿಯ ಕಥೆಗಳು ದೆಹಲಿಯಲ್ಲೇ ಉಳಿದವು.

ಈಗ ಫಾರೂಕ್‌ನ ಭೇಟಿಗಳು ವಿರಳವಾಗಲಾರಂಭಿಸಿದ್ದವು. ಹತ್ತಾರು ವರ್ಷಗಳ ವಿವಾಹಿತ ಜೋಡಿಯಂತೆ ನಾವು ಭೇಟಿಯಾಗುತ್ತಿದ್ದೆವು. ನಮ್ಮ ಬಳಿ ಹೊಸ ವಿಷಯಗಳೇ ಮುಗಿದು ಹೋಗಿದ್ದವು. ಫಾರೂಕ್‌ನ ಮಗಳ ಮದುವೆ ಇತ್ತೀಚೆಗೆ ದೆಹಲಿಯಲ್ಲಿ ವಿಜೃಂಭಣೆಯಿಂದ ನೆರವೇರಿತ್ತು. ಮಗ ಆಕ್ಸ್‌ಫರ್ಡ್‌ಗೆ ಹೋಗಿದ್ದ. ಅವನ ಹೆಂಡತಿ ಅಸ್ತಮಾ ರೋಗಿಯಾಗಿದ್ದಳು. ಫಾರೂಕ್ ಅವನ ವ್ಯವಹಾರದ ಶಾಖೆಗಳನ್ನು ಹೆಚ್ಚು ವಿಸ್ತರಿಸಿದ್ದ. ನೈನಿತಾಲ್‌ನಲ್ಲಿ ಹೊಸ ಬಂಗಲೆ ಕಟ್ಟಿಸುತ್ತಿದ್ದಾನೆ. ಫಾರೂಕ್ ತನ್ನ ಕುಟುಂಬದ ವಿಚಾರ, ವ್ಯವಹಾರದ ವಿಚಾರಗಳನ್ನು ದೀರ್ಘವಾಗಿ ನನಗೆ ಹೇಳುತ್ತಿದ್ದ. ನಾನು ಅವನಿಗಾಗಿ ಎಲೆಅಡಿಕೆಯನ್ನು ಮಡಚಿಕೊಡುತ್ತಿದ್ದೆ.

ಒಂದು ಸಾರೆ ನಾನು ಕಾಲೇಜಿನಿಂದ ರಜೆಯಲ್ಲಿ ಲಾಹೋರಿಗೆ ಬಂದಾಗ ಫಾರೂಕ್‌ನ ಹಳೆಯ ಸ್ನೇಹಿತ ಸಯ್ಯದ್ ವಿಖಾರ್ ಹುಸೇನ್‌ಖಾನ್‌ನೊಡನೆ ನನ್ನ ಭೇಟಿಯಾಯಿತು. ವಿಕಾಂಗಿ ವಿಖಾರ್ ಹುಸೇನ್ ಆಕರ್ಷಕವಾಗಿದ್ದರು. ಎತ್ತರದ ನಿಲುವು, ದಷ್ಟ ಪುಷ್ಟ ದೇಹ, ಕಾವಲಿಯಂತಹ ಕಪ್ಪು ಬಣ್ಣ. ಮೂವತ್ತೈದರ ಹರೆಯದ ವಿಖಾರ್ ಹುಸೇನ್‌ರನ್ನು ನಾನು ಮೊದಲು ದೆಹಲಿಯಲ್ಲೇ ನೋಡಿದ್ದೆ. ಅವರು ರಾಮ್‌ಪುರದ ಹೆಸರಾಂತ ಮನೆತನದ ಕಣ್ಮಣಿಯಾಗಿದ್ದವರು. ಮನೆಯಿಂದ ಓಡಿ ಸರ್ಕಸ್, ಕಾರ್ನಿವಾಲ್ ಮತ್ತು ನಾಟಕ ತಂಡಗಳೊಂದಿಗೆ ದೇಶ ವಿದೇಶವೆಲ್ಲಾ ಸುತ್ತಾಡಿ ಸಿಂಗಾಪುರ, ಹಾಂಗ್‌ಕಾಂಗ್, ಷಾಂಘೈಗಳಲ್ಲಿ ವಿದೇಶೀ ಮಹಿಳೆಯರೊಡನೆ ಅನೇಕ ಸಾರಿ ವಿವಾಹವಾಗಿದ್ದರು. ಅವರ ಸದ್ಯದ ಹೆಂಡತಿ ಒರಿಸ್ಸದ ಒಬ್ಬ ಮಾರವಾಡಿ ಮಹಾಜನನ ಮಗಳಾಗಿದ್ದಳು. ಅವಳನ್ನು ಕಲ್ಕತ್ತೆಯಿಂದ ಹಾರಿಸಿ ಕೊಂಡು ಬಂದಿದ್ದರು. ಸುಮಾರು ಹನ್ನೆರಡು ವರ್ಷ ಮೊದಲು ನಾನು ಆಕೆಯನ್ನು ದೆಹಲಿಯಲ್ಲಿ ಕಂಡಿದ್ದೆ. ಆಕೆ ಕಂದು ವರ್ಣದ ಹೆಂಗಸಾಗಿದ್ದಳು. ಮುಖದ ಮೇಲೆ ಯಾವಾಗಲೂ ವಿಚಿತ್ರಶೋಕದ ಕಳೆ ಇರುತ್ತಿತ್ತು. ಆದರೆ ಬಹಳ ಪತಿವ್ರತೆಯಾಗಿದ್ದ ಹೆಂಗಸೆಂದು ಅವಳ ಬಗ್ಗೆ ಕೇಳಿ ತಿಳಿದಿದ್ದೆ. ಗಂಡನ ಅತಿರೇಕಗಳಿಂದ ಬೇಸತ್ತು ಆಗಾಗ್ಯೆ ಮನೆಯಿಂದ ಓಡಿಬಿಡುತ್ತಿದ್ದಳು. ಕೆಲದಿನಗಳ ನಂತರ ತಾನಾಗಿಯೇ ವಾಪಸ್ಸು ಬರುತ್ತಿದ್ದಳು. ವಿಖಾರ್ ಹುಸೇನ್‌ಖಾನ್ ಸಾಹೇಬರು ಕನ್ನಾಟ್ ಸರ್ಕಸ್‌ನ ಒಂದು ಕಟ್ಟಡದ ಮೂರನೆ ಮಹಡಿಯಲ್ಲಿ ಇಂಗ್ಲಿಷ್ ನೃತ್ಯ ಕಲಿಸುವ ಶಾಲೆಯನ್ನು ತೆರೆದಿದ್ದರು. ಅವರು, ಅವರ ಪತ್ನಿ ಮತ್ತು ಇಬ್ಬರು ಆಂಗ್ಲೋ–ಇಂಡಿಯನ್

ಹುಡುಗಿಯರು ಅಲ್ಲಿನ ಸಿಬ್ಬಂದಿವರ್ಗವಾಗಿದ್ದರು. ಯುದ್ಧದ ದಿನಗಳಲ್ಲಿ ಆ ನೃತ್ಯ ಶಾಲೆ ನಿರ್ಜನವಾಯಿತು. ಭಾನುವಾರದಂದು ಬೆಳಿಗ್ಗೆ ಆ ನೃತ್ಯಶಾಲೆಯಲ್ಲಿ "ಜಾಮ್ ಸೆಷನ್" ಜರುಗುತ್ತಿತ್ತು. ಖುಷ್‌ವಂತ್ ಒಮ್ಮೆ ಅಲ್ಲಿಗೆ ನನ್ನನ್ನು ಕರೆದೊಯ್ದಿದ್ದ. ಖಾನ್‌ಸಾಹೇಬರ ಹೆಂಡತಿ ಆತನಿಗೆ ಆದರ್ಶ ಸತಿಯಂತಿದ್ದಳು. ಗಂಡ ಆಕೆಗೆ ಇಂತಹವಳೊಡನೆ ಸ್ನೇಹ ಗಳಿಸು ಎಂದು ಆದೇಶಿಸಿದರೆ, ಹಾಗೆಯೇ ಮಾಡಿ ಗಂಡನಿಗೆ ಆಕೆಯನ್ನು ತಂದೊಪ್ಪಿಸುತ್ತಿದ್ದಳು. ಒಮ್ಮೆ ನಮ್ಮ ಹಾಸ್ಟೆಲ್ಲಿಗೂ ಬಂದು ಕೆಲವು ಹುಡುಗಿಯರನ್ನು ಬಾರಖಂಬ ರಸ್ತೆಗೆ ಹೋಗಿ ಟೀ ಕುಡಿಯೋಣವೆಂದು ಪುಸಲಾಯಿಸಿದ್ದಳೂ ಕೂಡ.

ವಿಭಜನೆಯ ನಂತರ ವಿಖಾರ್ ಸಾಹೇಬರು ತಮ್ಮಲ್ಲಿದ್ದುದನ್ನೆಲ್ಲಾ ಕಳೆದುಕೊಂಡು ಲಾಹೋರ್ ತಲುಪಿದರು. ಮತ್ತು ಮಾಲ್ ರಸ್ತೆಯ ಓಣಿಯೊಂದರಲ್ಲಿ ಫ್ಲಾಟನ್ನು ಮಂಜೂರು ಮಾಡಿಸಿಕೊಂಡು ಅದರಲ್ಲಿ ತಮ್ಮ ಶಾಲೆಯನ್ನು ತೆರೆದಿದ್ದರು. ಮೊದಮೊದಲಲ್ಲಿ ವ್ಯವಹಾರವೇನೂ ಕುದುರಲಿಲ್ಲ. ಎಲ್ಲರ ಸಂಭ್ರಮ ಸತ್ತಿತ್ತು. ಕುಣಿಯುವ ಹಾಡುವ ಮನಸ್ಥಿತಿಯೇ ಯಾರಿಗೂ ಇರಲಿಲ್ಲ. ವಿಭಜನೆಯ ಮೊದಲು ಆ ಫ್ಲಾಟ್ ಆರ್ಯಸಮಾಜದವರ ಸಂಗೀತ ಶಾಲೆಯಾಗಿತ್ತು. ಮರದ ನೆಲಹಾಸಿನ ಹಾಲ್, ಪಕ್ಕದಲ್ಲಿ ಎರಡು ಚಿಕ್ಕಕೊಠಡಿಗಳು, ಬಚ್ಚಲು ಹಾಗೂ ಅಡಿಗೆ ಕೋಣೆ ಎದುರಿಗೆ ಮರದ ಬಾಲ್ಕನಿ ಮತ್ತು ಜೀರ್ಣಗೊಂಡ ಮೆಟ್ಟಿಲುಗಳು. 'ಹಿಂದ್ ಮಾತಾ ಸಂಗೀತ್ ಮಹಾವಿದ್ಯಾಲಯ' ಎನ್ನುವ ಬೋರ್ಡ್ ಈಗಲೂ ಬಾಲ್ಕನಿಯಿಂದ ಸೊಟ್ಟಗೆ ನೇತಾಡಿಕೊಂಡಿತ್ತು. ಅದನ್ನಿಳಿಸಿ 'ವಿಖಾರ್ಸ್ ಸ್ಕೂಲ್ ಆಫ್ ಬಾಲ್ ರೂಮ್ ಅಂಡ್ ಟೇಬ್ ಡಾನ್ಸಿಂಗ್'ನ ಬೋರ್ಡನ್ನು ಏರಿಸಲಾಯಿತು. ಅಮೆರಿಕನ್ ಚಲನಚಿತ್ರ ಪತ್ರಿಕೆಗಳಿಂದ ಕತ್ತರಿಸಿದ ಜೀನ್ ಕೆಲ್ಲಿ, ಫ್ರೆಡ್ ಆಸ್ಟರ್, ಫ್ರಾಂಕ್ ಸಿನಾತ್ರ, ಡೋರಿಸ್ ಡೇ ಮುಂತಾದವರ ವರ್ಣರಂಜಿತ ಚಿತ್ರಗಳನ್ನು ಹಾಲ್‌ನ ಹಳೆಯ ಗೋಡೆಗಳ ಮೇಲೆ ಅಂಟಿಸಲಾಯಿತು ; ನೃತ್ಯಶಾಲೆ ನಡೆಯತೊಡಗಿತು. ರೆಕಾರ್ಡ್‌ನ ಪುಟ್ಟ ದಾಸ್ತಾನನ್ನು ವಿಖಾರ್ ತಮ್ಮೊಡನೆ ದೆಹಲಿಯಿಂದ ತಂದಿದ್ದರು. ಗ್ರಾಮಾಫೋನ್ ಮತ್ತು ಹಳೆಯ ಪೀಠೋಪಕರಣಗಳನ್ನು ಫಾರೂಕ್‌ನಿಂದ ಸಾಲ ಪಡೆದು ಕೊಂಡುಕೊಂಡಿದ್ದರು, ಕಾಲೇಜಿನ ಹಗಲುಗನಸಿನ ರೋಮಿಯೋ ಮತ್ತು ಶ್ರೀಮಂತ ಸೊಸೈಟಿಯ ತಾಜಾ ಫ್ಯಾಷನಬಲ್ ಬೇಗಮ್‌ಗಳನ್ನು, ಅಲ್ಲಾಹ್ ಚೆನ್ನಾಗಿಟ್ಟಿರಲಿ–ಒಂದೆರಡು ವರ್ಷಗಳಲ್ಲಿ ವಿಖಾರ್ ಚೆನ್ನಾಗಿ ಸಂಪಾದಿಸತೊಡಗಿದರು. ಫಾರೂಕ್‌ನ ಸ್ನೇಹದಿಂದ ನನ್ನ ಮತ್ತು ಅವರ ಸಂಬಂಧ ಅತ್ತಿಗೆ ಮತ್ತು ಭಾವನ ರೀತಿಯದಾಗಿತ್ತು. ನನ್ನನ್ನು ವಿಚಾರಿಸಲು ಆಗಾಗ್ಯೆ ಅವರು ಪತ್ನಿಯೊಂದಿಗೆ ಜೊತೆ

ಬರುತ್ತಿದ್ದರು. ಆ ಬಡಪಾಯಿಯಂತೂ ನನ್ನೊಡನೆ ಓರಿಯ ಓರಗಿತ್ತಿಯಂತೆ ಬಹಳ ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದಳು. ಅವರಿಗೆ ಮಕ್ಕಳಿರಲಿಲ್ಲ. ಬಹಳ ದುಃಖಿತ, ಅನಾಕರ್ಷಕ ಮತ್ತು ಅನಾಸಕ್ತ ಜೋಡಿ ಅದಾಗಿತ್ತು.

ಕಾಲೇಜಿನಲ್ಲಿ ಹೊಸದಾಗಿ ಅಮೆರಿಕದಿಂದ ಹಿಂದಿರುಗಿದ ಪ್ರಿನ್ಸಿಪಾಲ್‌ಳೊಡನೆ ನನ್ನ ಜಗಳವಾಯಿತು. ಅವಳು ಸೇರಾದರೆ ನಾನು ಸವಾಸೇರು. ನಾನು ಸ್ವತಃ ಅಬುಲ್‌ಹಸನ್ ತಾನಾ ಶಾಹ್‌ಗಿಂತ ಏನು ಕಮ್ಮಿ ಇದ್ದೆ? ನಾನು ರಾಜೀನಾಮೆಯನ್ನು ಕಾಲೇಜು ಕಮಿಟಿಯ ಮುಖದ ಮೇಲೆ ಒಗೆದೆ ಮತ್ತು ಲಾಹೋರಿನ ಸಂತ್ ನಗರಕ್ಕೆ ವಾಪಸು ಬಂದೆ. ನಾನು ಟೀಚಿಂಗ್ ಮಾಡುತ್ತ ಬೋರಾಗತೊಡಗಿದ್ದೆ. ವಿದ್ಯಾರ್ಥಿ ವೇತನ ಪಡೆದು ಪಿ.ಹೆಚ್‌ಡಿ. ಮಾಡಲು ಹೊರಗೆ ಹೋಗಬಹುದಿತ್ತು. ಆದರೆ ನಾಳೆ ಎಂದು ದೂಡುತ್ತಾ ಬಂದೆ. ನಾಳೆ ಅಮೆರಿಕನ್ ಆಫೀಸಿಗೆ ಹೋಗುವೆ; ನಾಳೆ ಬ್ರಿಟಿಷ್ ಕೌನ್ಸಿಲ್‌ಗೆ ಭೇಟಿ ನೀಡುವೆ; ಹೌದು, ನಾಳೆ ಎಜುಕೇಷನ್ ಮಿನಿಸ್ಟ್ರಿಗೆ ವಿದ್ಯಾರ್ಥಿ ವೇತನದ ಅರ್ಜಿ ಕಳಿಸುವೆ....

ಸಮಯ ನಾಗಾಲೋಟದಿಂದ ಓಡಿತು. ಹೊರಗೆ ಹೋಗಿ ಮಾಡುವುದಾದರೂ ಏನು ? ಯಾವ ಕೋಟೆ ಗೆಲ್ಲುತ್ತೇನೆ, ಯಾವ ಕುಂಬಳಕಾಯಿಗೆ ಬಾಣ ಬಿಡುತ್ತೇನೆ, ನಾನು ಏನನ್ನು ನಿರೀಕ್ಷಿಸುತ್ತಿದ್ದೇನೆ ...ನನಗೆ ತಿಳಿದಿಲ್ಲ. ಈ ಮಧ್ಯೆ ವಿಖಾರ್ ಒಂದು ದಿನ ಗಾಬರಿಯಿಂದ ನನ್ನ ಬಳಿ ಬಂದರು. "ನಿಮ್ಮ ಅತ್ತಿಗೆಯ ತಲೆಯಲ್ಲಿ ಮತ್ತೆ ದೆವ್ವ ಕುಣಿಯಿತು, ಅವಳು ವೀಸಾ ಪಡೆದು ಭಾರತಕ್ಕೆ ಹೋದಳು, ಮತ್ತೆಂದೂ ಹಿಂದಿರುಗುವುದಿಲ್ಲ"ಎಂದು ತಮ್ಮ ಅಳಲನ್ನು ತೋಡಿಕೊಂಡರು.

"ಇದ್ದೆಂಗಾಯಿತು?" ನಾನು ಅನ್ಯಮನಸ್ಕಳಾಗಿ ಪ್ರಶ್ನಿಸಿ, ಸ್ಟವ್‌ಮೇಲೆ ಟೀಗಾಗಿ ನೀರಿಟ್ಟೆ. "ವಿಚಾರವೇನೆಂದರೆ, ನಾನು ಅವಳಿಗೆ ತಲಾಕ್ ಕೊಟ್ಟೆ. ಅವಳ ನಾಲಿಗೆ ಬಹಳ ಉದ್ದವಾಗಿತ್ತು. ಪ್ರತಿ ಗಳಿಗೆಯೂ ಕಿರಿಕಿರಿ....". ಅವರು ಎದುರಿಗೆ ಮಂಚದ ಮೇಲೆ, ಹೆಂಡತಿಯ ಬಗ್ಗೆ ಚಾಡಿ ಹೇಳುವ ಪತಿಯ ವಿಶೇಷ ಭಂಗಿಯಲ್ಲಿ ಕುಳಿತು ಆಕೆಯ ಬಗ್ಗೆ ದೂರಿನ ಸರಮಾಲೆಯನ್ನೇ ಹೆಣೆಯತೊಡಗಿದರು ಮತ್ತು ತನ್ನನ್ನು ತಾನೇ ನಿರಪರಾಧಿ ಹಾಗೂ ನ್ಯಾಯದ ಅಪರಾವತಾರ ಎಂದು ಬಣ್ಣಿಸತೊಡಗಿದರು.

ನಾನು ತೀವ್ರ ಅನಾಸಕ್ತಿಯಿಂದ ಈ ಕಥೆ ಕೇಳುತ್ತಿದ್ದೆ. ಜೀವನದ ಪ್ರತಿ ವಿಚಾರವೂ ಅಮುಖ್ಯ, ಅರ್ಥಹೀನ, ಅನಗತ್ಯವೆಂಬಂತೆ ಅನಿಸತೊಡಗಿತು. ಕೆಲ ಸಮಯದ ನಂತರ ನನ್ನ ಮನೆಗೆ ಅವರು ಬಂದು ಬಡಬಡಿಸತೊಡಗಿದರು "ನೌಕರರು

ನನ್ನ ಜೀವ ತಿನ್ನುತ್ತಿದ್ದಾರೆ. ನನ್ನ ಮನೆಯ ಪರಿಸ್ಥಿತಿಯನ್ನು ಸ್ವಲ್ಪ ಪರಿಮಾಡುವ ವ್ಯವಧಾನವೂ ನಿಮಗಿಲ್ಲವೇ ? ಶಾಲೆಯ ಕೆಲಸವನ್ನೂ ಮಾಡು, ಮನೆಯ ಕೆಲಸವನ್ನೂ ನೋಡು ಎಂದರೆ ಹೇಗೆ ?" ಅವರ ಮನೆಯ ನಿರ್ವಹಣೆ ನನ್ನ ಕರ್ತವ್ಯವೋ ಎಂಬಂತೆ ಅವರು ದೂಷಿಸಿದರು. ಕೆಲವು ದಿನಗಳ ನಂತರ, ನನ್ನ ಸಾಮಾನನ್ನು ಜೋಡಿಸಿಕೊಂಡು ನಾನು ವಿಖಾರ್ ಸಾಹೇಬರ ಕೋಣೆಗೆ ಬಂದು ಸೇರಿಕೊಂಡೆ ಮತ್ತು ನೃತ್ಯ ಕಲಿಸುವುದರಲ್ಲಿ ಅವರ ಸಹಾಯಕಳಾದೆ.

ನಾನು ಹೀಗೆ ಬಂದ ಒಂದು ತಿಂಗಳನಂತರ, ಒಂದು ಭಾನುವಾರದಂದು ವಿಖಾರ್ ಒಬ್ಬ ಮೌಲ್ವಿಯನ್ನು ಕರೆಸಿ, ಇಬ್ಬರು ಚಿಲ್ಲರೆ ವ್ಯಕ್ತಿಗಳನ್ನು ಸಾಕ್ಷಿಗಳನ್ನಾಗಿಸಿ ನನ್ನೊಡನೆ ನಿಖಾಹ್ ಮಾಡಿಕೊಂಡರು.

ಈಗ ನಾನು ಹಗಲೆಲ್ಲಾ ಬಿಡುವಿಲ್ಲದ ಕೆಲಸಗಳಲ್ಲಿ ತೊಡಗಿರುತ್ತಿದ್ದೆ. ನನ್ನ ಚೆಲುವು ಮತ್ತು ಆಕರ್ಷಣೆ ಗತಕಾಲದ ವೈಭವವಾಗಿದೆ. ನನಗೆ ಗಲಾಟೆ, ಜನ, ಪಾರ್ಟಿ, ಸಭೆ ಸಮಾರಂಭಗಳು ಇಷ್ಟವಿಲ್ಲ. ಆದರೆ ನನ್ನ ಮನೆಯಲ್ಲಿ ಪ್ರತಿಗಳಿಗೆಯೂ 'ಚ ಚ ಚ', 'ಕ್ಲಿಪ್ಸೊ' ಮತ್ತು 'ರಾಕ್-ಎನ್-ರೋಲ್'ನ ಧ್ವನಿ ಮೊಳಗುತ್ತಿರುತ್ತದೆ. ಅಂತೂ ಇದೇ ನನ್ನ ಮನೆಯಾಗಿದೆ.

ಈ ಗಳಿಗೆಯಲ್ಲಿ ನನಗೆ ಅನೇಕ ಕಾಲೇಜುಗಳಿಂದ ಕೆಮಿಸ್ಟ್ರಿ ಬೋಧಿಸಲು ಕರೆ ಬಂದಿದೆ. ಆದರೆ ಮನೆಗೆಲಸಗಳಿಂದ ಯಾರಿಗೆ ತಾನೇ ಪುರಸೊತ್ತು ದೊರಕುತ್ತೆ ? ನೌಕರರನ್ನಂತೂ ಇಂದಿಟ್ಟರೆ ನಾಳೆಗೇ ನಾಪತ್ತೆ. ನಾನು ಹೆಚ್ಚಿನದೇನನ್ನೂ ಎಂದಿಗೂ ಬಯಸಿರಲಿಲ್ಲ. ಸಾಧಾರಣವಾದೊಂದು ಬಂಗಲೆ, ಹೊರಗಡೆ ಓಡಾಡಲು ಅನುಕೂಲವಾಗುವಂತೆ ಒಂದು ಕಾರು, ನಾಲ್ಕಾರು ಸ್ನೇಹಿತರು ಬಂದರೆ ಕೂರಲು ಅನುಕೂಲವಾದಂತಹ ಆಶ್ರಯ–ಇಷ್ಟೇ ನಾನು ಬಯಸಿದ್ದು.

ಈ ಸಮಯದಲ್ಲಿ ನಮಗೆ ತಿಂಗಳಿಗೆ ಒಂದೂವರೆ ಸಾವಿರ ರೂ.ಗಳ ವರಮಾನವಿದೆ. ನಮ್ಮಿಬ್ಬರ ಅವಶ್ಯಕತೆಗಳಿಗಿಂತ ಹೆಚ್ಚಿನ ಸಂಪಾದನೆಯೇ ನಮಗಿದೆ. ಮನುಷ್ಯ ತನ್ನ ಅದೃಷ್ಟವನ್ನೊಪ್ಪಿಕೊಂಡರೆ, ಎಲ್ಲಾ ದುಃಖಗಳೂ ತನ್ನಿಂದ ತಾನೇ ಬಿಡುಗಡೆ ಹೊಂದುತ್ತವೆ. ಮದುವೆಯಾದನಂತರ ಹೆಂಗಸಿಗೆ ತಲೆಯ ಮೇಲೆ ಒಂದು ಸೂರು ದೊರಕಿದಂತಾಗುತ್ತದೆ. ಇಂದಿನ ಹುಡುಗಿಯರು ಯಾವ ವಾಹಿನಿಯಲ್ಲಿ ಹರಿದು ಹೋಗುತ್ತಿದ್ದಾರೆ ಹೇಗೆ ಕೈ ಮೀರಿ ಹೋಗುತ್ತಿದ್ದಾರೆ ಎಂದು ಯೋಚಿಸಿದಷ್ಟೂ ಆಶ್ಚರ್ಯವೆನಿಸುತ್ತಿದೆ.

ನಾನು ಯಾರೊಂದಿಗೂ ಎಂದಿಗೂ ಫ್ಲರ್ಟ್ ಕೂಡ ಮಾಡಲಿಲ್ಲ-ಖುಷ್‌ವಂತ್, ಫಾರೂಕ್ ಮತ್ತು ನನ್ನ ಗಂಡನಾದ ಈ ಕಪ್ಪು ಧಡೂತಿ ವ್ಯಕ್ತಿಯ ಹೊರತು. ನಾನು ಬ್ಲೂಸ್ಟಾಕಿಂಗ್ ಅಂತೂ ಅಲ್ಲ. ಆದರೆ ನಾನು ಯಾರಾಗಿದ್ದೆ, ಯಾರಾಗಿದ್ದೇನೆ ಎಂಬ ಅರಿವೂ ನನಗಿಲ್ಲ. ರೇಹಾನ, ಸಾದಿಯ, ಪ್ರಭ ಮತ್ತು ನನ್ನನ್ನು ಕಂಡ ಕೂಡಲೇ ಭಯದ ಪ್ರತಿರೂಪವಾದ ಈ 'ಹೆಂಗಸು' ಇವರುಗಳೆಲ್ಲಾ ನನಗಿಂತ ಹೆಚ್ಚು ಮತ್ತು ಆಳವಾಗಿ ನನ್ನನ್ನು ಅರ್ಥಮಾಡಿಕೊಂಡಿರಬಹುದು. ಈಗ ಖುಷ್‌ವಂತ್‌ನನ್ನು ನೆನೆದರೆ ಫಲವೇನು ? ಸಮಯ ಸರಿದುಹೋಯಿತು. ಈಗಾಗಲೇ ಅವನು ಬ್ರಿಗೇಡಿಯರ್ ಮೇಜರ್ ಜನರಲ್ ಆಗಿರಬಹುದು. ಅಸ್ಸಾಮ್‌ನ ಗಡಿ ಪ್ರದೇಶದಲ್ಲಿ ಚೀನೀಯರ ವಿರುದ್ಧ ಸಮರ ಸನ್ನದ್ಧನಾಗಿರಬಹುದು ಅಥವಾ ಹಿಂದೂಸ್ಥಾನದ ಹಸಿರು ಸೈನಿಕ ಛಾವಣಿಯ ಕೆಳಗೆ ಕುಳಿತು ಮೀಸೆಯ ಮೇಲೆ ಕೈಯಾಡಿಸುತ್ತಿರಬಹುದು ಮತ್ತು ಮುಗುಳ್ನಗುತ್ತಿರಬಹುದು ಅಥವ ಬಹುಶಃ ಎಂದೋ ಕಾಶ್ಮೀರದ ಯುದ್ಧದಲ್ಲಿ ಸತ್ತು ಹೋಗಿರಲೂಬಹುದು. ಯಾರಿಗೆ ಗೊತ್ತು ?

ಅಂಧಕಾರ ತುಂಬಿದ ರಾತ್ರಿಯಲ್ಲಿ ನಾನು ಕಣ್ತೆರೆದು ಮಿಸುಕದೆ ಮಲಗಿರುತ್ತೇನೆ. ವಿಜ್ಞಾನವು ನನಗೆ ಅಸ್ತಿತ್ವವಾದೀ ಪ್ರಪಂಚದ ಬಹುತೇಕ ಗುಟ್ಟುಗಳನ್ನು ಹೊರಗೆಡವಿದೆ. ನಾನು ರಸಾಯನಶಾಸ್ತ್ರಕ್ಕೆ ಸಂಬಂಧಿಸಿದ ಲೆಕ್ಕವಿಲ್ಲದಷ್ಟು ಪುಸ್ತಕಗಳನ್ನು ಓದಿದ್ದೇನೆ. ಗಂಟೆಗಟ್ಟಳೆ ಯೋಚಿಸಿದ್ದೇನೆ. ಆದರೆ ನನಗೆ ತುಂಬಾ ಭಯವಾಗುತ್ತದೆ ...

ಖುಷ್‌ವಂತ್‌ಸಿಂಗ್.... ಖುಷ್‌ವಂತ್‌ಸಿಂಗ್.... ನಿನಗೆ ಈಗ ನನ್ನಿಂದಾಗಬೇಕಾದುದೇನಿದೆ ?

(ಈ ಕಥೆಯ ಲೇಖಕಿಯ ಹೆಸರನ್ನು ಖುರ್‌ತುಲೈನ್ ಹೈದರ್ ಎಂದು ಓದಿಕೊಳ್ಳಬೇಕಾಗಿ ವಿನಂತಿ)

ಮರಾಠಿ ದಲಿತ ಸಾಹಿತ್ಯ:

ಎರಡು ಸಂದರ್ಶನಗಳು

ನಮ್ಮ ಸಂಪಾದಕರಲ್ಲೊಬ್ಬರಾದ ಶ್ರೀ ರಾಘವೇಂದ್ರ ಪಾಟೀಲರು ಇತ್ತೀಚೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಯೋಜನೆಯೊಂದರ ಆಶ್ರಯದಲ್ಲಿ ಮಹಾರಾಷ್ಟ್ರ ರಾಜ್ಯದ ಪ್ರವಾಸ ಕೈಗೊಂಡು ಮರಾಠಿ ಭಾಷೆಯ ಅನೇಕ ಲೇಖಕರನ್ನು ಕಂಡು ವಿಚಾರ ವಿನಿಮಯ ಮಾಡಿಕೊಂಡರು. ಆ ಸಮಯದಲ್ಲಿ ಮಾಡಿಕೊಳ್ಳಲಾದ ಧ್ವನಿಮುದ್ರಣ/ಟಿಪ್ಪಣಿಗಳಿಂದ ಹೆಕ್ಕಿ ಇಲ್ಲಿ ಎರಡು ಸಂದರ್ಶನಗಳನ್ನು ನೀಡುತ್ತಿದ್ದೇವೆ.

ಮೊದಲನೆಯ ಸಂದರ್ಶನ ಶ್ರೀ ನಾರಾಯಣ ಸುರ್ವೆ ಅವರೊಂದಿಗೆ. ಇವರ ಹುಟ್ಟು ಅಜ್ಞಾತವಾದದ್ದು. ರಸ್ತೆ ಮೇಲೆ ಸಿಕ್ಕ ಮಗು ಈತ. ಯಾರಿಂದಲೋ ಬೆಳೆಸಲ್ಪಟ್ಟು. ತನ್ನ ಬದುಕನ್ನು ತಾನೇ ಕಟ್ಟಿಕೊಂಡು ಲೇಖಕನಾಗಿ ಅರಳಿದ ಸುರ್ವೆ ತಮ್ಮನ್ನು ದಲಿತರೆಂದೇ ಕರೆದುಕೊಳ್ಳುವರಾದರೂ ಮರಾಠಿ ದಲಿತ ಸಾಹಿತ್ಯದ ವ್ಯಾಪ್ತಿಗೆ ಇವರನ್ನು ಸೇರಿಸಿಕೊಳ್ಳಲಾಗಿಲ್ಲ. ವೃತ್ತಿಯಿಂದ ಕೈಗಾರಿಕಾ ಕಾರ್ಮಿಕರಾದ ಇವರು ಮಾರ್ಕ್ಸ್‌ವಾದಿ ಲೇಖಕರೆಂದೇ ಗುರುತಿಸಲ್ಪಡುವವರು. ಎರಡನೆಯ ಸಂದರ್ಶನ ಆಯುಷ್ಮಾನ್ ಕೇಶವ ಮೆಶ್ರಾಮ್ ಅವರೊಂದಿಗೆ. ಇವರು ಹುಟ್ಟಿನಿಂದ ಅಸ್ಪೃಶ್ಯ, ವೃತ್ತಿಯಲ್ಲಿ ಪ್ರಾಧ್ಯಾಪಕ. ಮೆಶ್ರಾಮ್ ತಮ್ಮನ್ನು ಬೌದ್ಧ ಮತ್ತು ಅಂಬೇಡ್ಕರ್‌ವಾದಿ ಎಂದು ಕರೆದುಕೊಳ್ಳುತ್ತಾರೆ.

ಇವರಿಬ್ಬರೊಡನೆಯ ಈ ಸಂದರ್ಶನಗಳು ಸಾಹಿತ್ಯವನ್ನು ಸಾಮಾಜಿಕವಾಗಿ ವಿಭಾಗಿಸುವ ಇಂದಿನ ಕ್ರಮದ ಹಿನ್ನೆಲೆಯಲ್ಲಿ, ಇವರು ಸಾಹಿತ್ಯ ಸೃಷ್ಟಿ ಹಾಗೂ ಗ್ರಹಿಕೆಗಳ ಬಗೆಗೆ ವ್ಯಕ್ತಪಡಿಸಿರುವ ವಿಚಾರಗಳ ದೃಷ್ಟಿಯಿಂದ ಕುತೂಹಲಕರವಾಗಿವೆ. ಈ ವಿಚಾರಗಳು ಮರಾಠಿ ದಲಿತ ಸಾಹಿತ್ಯದ ಶಕ್ತಿ ದೌರ್ಬಲ್ಯಗಳೆರಡನ್ನೂ ಪ್ರತಿಬಿಂಬಿಸುವುದಷ್ಟೇ ಅಲ್ಲ, ಕನ್ನಡದಲ್ಲಿ ದಲಿತ, ಬಂಡಾಯ ಹಾಗೂ ಶ್ರೇಷ್ಠ ಸಾಹಿತ್ಯ ವೇದಿಕೆಗಳ ವಕ್ತಾರರು ಮಂಡಿಸುತ್ತಿರುವ ವಾಗ್ವಾದಗಳ ಮೇಲೂ ಬೆಳಕು ಚೆಲ್ಲುವಂತಿವೆ. —ಸಂ.]

೧. ಶ್ರೀ ನಾರಾಯಣ ಸುರ್ವೆ ಅವರೊಂದಿಗೆ

ರಾಘವೇಂದ್ರ ಪಾಟೀಲ: ಲೇಖಕನೊಬ್ಬನ ಸೃಜನ ಪ್ರಕ್ರಿಯೆಯ ಸೆಲೆಗಳು, ಬೇರುಗಳು ಅವನ ಬಾಲ್ಯಕಾಲದ ಅನುಭವದಲ್ಲಿರುತ್ತವೆನ್ನುತ್ತಾರೆ. ಆದ್ದರಿಂದ ನಿಮ್ಮ ಬಾಲ್ಯದ ಅನುಭವದ ಬಗ್ಗೆ ಕುತೂಹಲವಿದೆ. ತಿಳಿಸುತ್ತೀರಾ ?

ನಾರಾಯಣ ಸುರ್ವೆ: ಬಾಲ್ಯಕಾಲದ ಅನುಭವಗಳೇ ಮುಖ್ಯ–ಸೃಜನ ಪ್ರಕ್ರಿಯೆಗೆ ಪ್ರೇರಣೆಗಳು ಅಲ್ಲಿಂದಲೇ ದೊರೆಯುತ್ತವೆನ್ನುವುದು ಹೌದೋ ಅಲ್ಲವೋ ನನಗೆ ಗೊತ್ತಿಲ್ಲ.

ನನ್ನ ಬಾಲ್ಯ ಮಾತ್ರ ತುಂಬ ವಿಚಿತ್ರವಾಗಿ ಕಳೆದದ್ದು. ನಾನು ಒಬ್ಬ ಅನಾಥ. ರಸ್ತೆಯ ಮೇಲೆ ಎಸೆಯಲ್ಪಟ್ಟ ಶಿಶುವಾದ ನನ್ನನ್ನು ಗಂಗಾರಾಮ ಸುರ್ವೆ ಎಂಬ ಕಾರ್ಮಿಕನು ಮನೆಗೆ ಒಯ್ದು ನನ್ನನ್ನು ಸಾಕಿದ. ನನಗೆ ಆಗ ಆರು ತಿಂಗಳ ವಯಸ್ಸಂತೆ. ನನ್ನ ನಿಜವಾದ ತಂದೆ ಯಾರೋ ತಾಯಿ ಯಾರೋ ಗೊತ್ತಿಲ್ಲ.... ಆಗಿನ ಗಿರಣಿಯ ಕಾರ್ಮಿಕರಿಗೆ ಹದಿನಾಲ್ಕು ತಾಸುಗಳ ಡ್ಯೂಟಿ. ಬೆಳಿಗ್ಗೆ ಹೋದರ ಸಂಜೆಗೆ, ಸಂಜೆಗೆ ಹೋದರೆ ಮಾರುದಿನ ಬೆಳಿಗ್ಗೆ ಮರಳಿ ಮನೆಗೆ ಬರುವುದು. ನನ್ನ ಸಾಕುತಾಯಿ ಕೂಡ ಕಾರ್ಮಿಕಳೇ.

ಇವರು ನನ್ನನ್ನು ಒಂಭತ್ತು ವರ್ಷದವನಾಗುವವರೆಗೆ ಸಾಕಿದರು. ಶಾಲೆಗೆ ಕಳಿಸಿದ್ದರು. ನಾಲ್ಕನೆ ಇಯತ್ತೆಯವರೆಗೆ ಓದಿದೆ. ಆಗ ನನ್ನ ಸಾಕು ತಾಯಿ ತೀರಿ ಹೋದಳು. ನನ್ನ ಸಾಕುತಂದೆ–ಇನ್ನು ನಿನ್ನನ್ನು ನೋಡಿಕೊಳ್ಳಲು ನನಗೆ ಆಗುವುದಿಲ್ಲ, ನಿನ್ನ ವ್ಯವಸ್ಥೆ ನೀನು ನೋಡಿಕೋ ಎಂದು ಹೇಳಿದನು. ಆಗ ಮನೆ ಬಿಟ್ಟು ಹೊರಬಿದ್ದೆ. ರಘಾಡಮಾಲಿಯ ಕೆಲಸಕ್ಕೆ ಸೇರಿದೆ. ಕರಾಚೀವಾಲಾ–ಒಬ್ಬ ಮುಲ್ತಾನೀ–ಎನ್ನುವವನ ಹತ್ತಿರ ಕೆಲಸಕ್ಕೆ ನಿಂತೆ. ಕಸಗುಡಿಸುವುದು ಮತ್ತು ಇತರ ಸಣ್ಣಪುಟ್ಟ ಕೆಲಸಗಳು. ಆನಂತರ ಒಬ್ಬ ಪಾರ್ಸಿಯ ಹತ್ತಿರ ಕೆಲಸಕ್ಕೆ ನಿಂತೆ. ಆದರೆ ಯಾವ ಕಾರಣದಿಂದಲೋ ಸ್ವಲ್ಪ ಮನಸ್ತಾಪವಾಗಿ ಆ ಕೆಲಸ ಬಿಡಬೇಕಾಯಿತು. ಆಗ ದಯಾಳು ಒಬ್ಬರು ಟಾಟಾ ಸ್ಟೀಲ್ಸ್‌ನಲ್ಲಿ ಹಮಾಲೀ ಕೆಲಸ ಕೊಡಿಸಿದರು. ಇಲ್ಲಿಯೂ ಒಬ್ಬ ಪಾರ್ಸೀ ಇದ್ದರು.... ಹಾಂ, ಅಲ್ಲಿಂದ ಟಾಟಾ ಆಯಿಲ್ ಮಿಲ್ಸ್‌ಗೆ ಹೋದೆ.... ಹೀಗೆಯೇ ಇಪ್ಪತ್ತು ವರ್ಷಗಳ ಕಾಲ ಚೌಪಾಟಿಯ ಮಹಲುಗಳ ಜಿನ್ನೆಗಳ ಕೆಳಗೆ ಮಲಗಿಕೊಂಡು ಅಲ್ಲಿ ಇಲ್ಲಿ ತಿನ್ನುತ್ತ ಅಡ್ಡಾಡಿಕೊಂಡಿದ್ದೆ.... ಈ ಎಲ್ಲ ಬೆವರು ಹರಿಸಿದ ಅನುಭವಗಳ ನಡುವೆ ಕಾವ್ಯದ ಸೆಲೆಗಳು ಎಲ್ಲಿದ್ದವು ಎಂಬುದನ್ನು

ನಾನರಿಯೆ. ಇಷ್ಟೆಲ್ಲದರ ನಡುವೆ, ಅಂತೂ ನನ್ನ 31ನೆಯ ವಯಸ್ಸಿನಲ್ಲಿ-ನನ್ನ ರೇಶನ್ ಕಾರ್ಡ್‌ನಲ್ಲಿ ಆಗ ಇಬ್ಬರು ಮಕ್ಕಳ ಹೆಸರು ನಮೂದಾಗಿದ್ದವು-ಆಗ ನನ್ನ ಮೊದಲನೆಯ ಕವಿತೆ ಬಂದದ್ದು ...

ಪಾಟೀಲ: ಹಾಗಾದರೆ ನಿಮ್ಮ ಕಾವ್ಯದಲ್ಲಿ ಕಾಣುವ ಮಾರ್ಕ್ಸ್‌ವಾದದ ದಟ್ಟ ಪ್ರಭಾವದ ಹಿನ್ನೆಲೆ ...

ಸುರ್ವೆ: ಹಾಂ. ಅದನ್ನು ಹೇಳುತ್ತೇನೆ.. ಮುಂದೆ ಬರುತ್ತದೆ.... ನಂತರ ನಾನು ಟಾಟಾ ಸ್ಟೀಲ್ಸ್‌ನಲ್ಲಿ ಹಮಾಲನಾಗಿದ್ದೆನಲ್ಲ. ಅಲ್ಲಿ ರೈಲು ವ್ಯಾಗನ್ನುಗಳಿಂದ ಸ್ಟೀಲನ್ನು ಇಳಿಸಿಕೊಂಡು ಎತ್ತಿ ಒಳಗೆ ಗೋಡೌನಿಗೆ ಒಯ್ಯುವುದು-ಈ ಕೆಲಸ. ಇಲ್ಲಿ ಒಬ್ಬ ದಾರೂವಾಲ ಅಂತ ಪಾರ್ಸೀ ಆಫೀಸರ್ ಇದ್ದರು. ಅವರ ಕಾರಣದಿಂದ ನಾನು ಇಲ್ಲಿಯ ಕೆಲಸ ಬಿಡಬೇಕಾಯಿತು. ನಂತರ ಇಂಡಿಯನ್ ಟಾಟಾ ಆಯಿಲ್ ಮಿಲ್ಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡೆ. ಅಲ್ಲಿ ನನಗೆ ನಿಧಾನವಾಗಿ ಟ್ರೇಡ್ ಯೂನಿಯನ್ನಿನ ಸಂಪರ್ಕ ಬರಲಾರಂಭಿಸಿತು. ನಾನು ಇನ್ನೂ 14-15 ವರ್ಷಗಳ ಹುಡುಗನಾಗಿದ್ದೆ. ಆಗ 1942ರ ಸ್ವಾತಂತ್ರ್ಯ ಹೋರಾಟದ ಕಾಲ. ಅದರಲ್ಲಿಯೂ ನಾನು ಭಾಗಿಯಾದೆ. ಆಗ ಮಾಹಿಮ್‌ದಲ್ಲಿ ಈಶ್ವರಭಾಯಿ ಪಟೇಲ ಎಂಬ ಕಾಂಗ್ರೆಸ್ಸಿನ ನೇತಾರರಿದ್ದರು. ಅವರು ನಮ್ಮ ನಾಯಕರಾಗಿದ್ದರು. ಪೀಪಲ್ಸ್ ವಾಲಂಟೀರ್ ಬ್ರಿಗೇಡ್ ಎಂಬ ಕಾಂಗ್ರೆಸ್ಸಿನ ಸಂಸ್ಥೆಯಲ್ಲಿ ನಾನೂ ಸೇರಿಕೊಂಡಿದ್ದೆ ... ಪೀಪಲ್ಸ್ ವಾಲಂಟೀರ್ ಬ್ರಿಗೇಡ್‌ನ ಬ್ಯಾಜು ಹಾಕಿಕೊಂಡ ನನ್ನಂಥ ಹುಡುಗರ ಒಂದು ಸೇನೆಯೇ ಇದ್ದಿತು. ಗೋವಾಲೆ ಟ್ಯಾಂಕ್ ಹತ್ತಿರ ನಾನು ಗಾಂಧೀಜಿಯವರ ಭಾಷಣ ಕೇಳಿದೆ. ಮರುದಿನ ಆಗಸ್ಟ್ ಒಂಭತ್ತರಂದು ಲಾಠೀ ಚಾರ್ಜ್ ಆಯಿತು. ಅಲ್ಲಿ ನಾನು ಮೊದಲಬಾರಿಗೆ ಲಾಠೀ ಏಟು ತಿಂದೆ. ನಾವೆಲ್ಲ ಹುಡುಗರು ದಾರಿಗೆ ಕಲ್ಲು ಇಟ್ಟು-ವಾಹನಗಳಿಗ ಅಡೆತಡೆ ಮಾಡುವುದು-ಅದನ್ನು ಸುಡು-ಇದನ್ನು ನಾಶಪಡಿಸು-ಇಂಥ ಚಟುವಟಿಕೆ ನಡೆಸಿದ್ದೆವು. ಪೋಸ್ಟ್ ಆಫೀಸ್ ಸುಡುವುದು-ಟ್ರೇನು ಹಳಿ ಕಿತ್ತುವುದು-ಇಂಥ ವಿನಾಶಕ ಕೆಲಸಗಳು.... ಹೀಗೆ ಇದು ನನ್ನ ಆರಂಭದ ರಾಜಕೀಯ ಜೀವನ. ಮುಂದೆ 1943ರಲ್ಲಿ ಕೊಹಿನೂರು ಮಿಲ್ಲು ಸೇರಿದೆ. ಮಾಹೀಮ್‌ನ ಆ ಭಾಗದಲ್ಲಿ 'ಯಂಗ್ ಫ್ರೆಂಡ್ಸ್' ಎಂಬ ಲೆಫ್ಟಿಸ್ಟರ ಒಂದು ಸಂಸ್ಥೆ ಇತ್ತು. ನನಗೆ ಕ್ರಮೇಣ ಈ ಕಮ್ಯುನಿಸ್ಟ್ ಸಂಸ್ಥೆಯೊಂದಿಗೆ ಸಂಪರ್ಕ ಬಂತು. ನಾನು ನನ್ನ ಒಂದು ಲೇಖನದಲ್ಲಿ ಹೀಗೆ ಹೇಳಿಕೊಂಡಿದ್ದೇನೆ-'ತುಂಬ ಒಳ್ಳೆಯದಾಯಿತದು, ಕಮ್ಯುನಿಸಂನೊಂದಿಗೆ ನನ್ನನ್ನು ಜೋಡಿಸಿಕೊಂಡದ್ದು. ಯಾವುದೇ ಜಾತಿ-ಜಂಗುಳಿಯೊಂದಿಗೆ ಜೋಡಿಸಿಕೊಳ್ಳದೇ ಮಾನವೀಯತೆಯ ಆಧಾರದಿಂದ ಮನುಷ್ಯನೊಂದಿಗೆ ಜೋಡಿಸಲ್ಪಟ್ಟೆ'....ಇಂದು ಜಾತಿಪಾತಿಗಳ ಮಾತು ಬಹಳ ನಡೆಯುತ್ತದೆ. ಹೌದು ಎಲ್ಲರಿಗೂ

ಜಾತಿಗಳಿವೆ. ನನಗೆಲ್ಲಿಯದು....?.... ನಾನು ಕಮ್ಯುನಿಜಂ ಒಪ್ಪಿಕೊಳ್ಳುತ್ತ ಹೆಚ್ಚು ಸರಿಯಾದದ್ದು ಮಾಡಿದ್ದೇನೆನ್ನುವ ಖುಷಿ ಇದೆ ...

ಪಾಟೀಲ: ಹಾಂ.... ನಾನು ಒಂದೆರಡು ದಿನಗಳ ಹಿಂದೆ ಮರಾಠೀ ಸಾಹಿತ್ಯ ವಿಮರ್ಶಕರಾದ ಗೋ.ಮ. ಕುಲಕರ್ಣಿ ಎಂಬುವವರ ಒಂದು ಲೇಖನ ನೋಡಿದೆ. ಅವರು ತಮ್ಮ ಲೇಖನದಲ್ಲಿ–ಮರಾಠೀ ದಲಿತ ಸಾಹಿತ್ಯ ಸಂಪೂರ್ಣವಾಗಿ ಅಂಬೇಡ್ಕರ್‌ವಾದದಿಂದ ಪ್ರೇರಿತವಾಗಿದ್ದು ಮಾರ್ಕ್ಸ್‌ವಾದದ ಪ್ರಭಾವವನ್ನು ಬೇಕಂತಲೇ ದೂರೀಕರಿಸಿದೆ. ಆದ್ದರಿಂದಲೇ ನಾರಾಯಣ ಸುರ್ವೆಯವರಂಥ ಕವಿ ಮಾರ್ಕ್ಸ್‌ವಾದದ ಪ್ರಭಾವಕ್ಕೆ ಒಳಪಟ್ಟಿದ್ದಾರೆನ್ನುವ ಕಾರಣಕ್ಕಾಗಿಯೇ ದಲಿತ ಸಾಹಿತ್ಯ ಪರಂಪರೆಯಲ್ಲಿ ಪರಿಗಣಿಸಲ್ಪಡುವುದಿಲ್ಲ ...

ಸುರ್ವೆ: ದಲಿತ ಸಾಹಿತ್ಯ ಚಳುವಳಿ ನನ್ನನ್ನು ದೂರವಾಗಿ ಇರಿಸಿದೆ.

ಪಾಟೀಲ: ಹಾಂ....

ಸುರ್ವೆ: ನಾನು ಅಂಬೇಡಕರವಾದಿ ಮತ್ತು ಮಹಾರನಲ್ಲವೆಂದು. ಆದರೆ ನಾನು ಅವರಿಗಿಂತ ಕಷ್ಟ ಅನುಭವ ಪಡೆದವನು. ತಂದೆ ತಾಯಿ ಯಾರೆಂದು ಗೊತ್ತಿಲ್ಲದ ಅನಾಥ ಶಿಶುವಾಗಿ ಬೆಳೆದವನು ನಾನು. ಆದರೆ ಯಾರು ಕೇಳುತ್ತಾರೆ ? ಇತ್ತೀಚೆಗೆ ಎಲ್ಲರಿಗೂ ಅವರವರ ಜಾತಿಗಳ ಸಂಘಟನೆ....

ಪಾಟೀಲ: ಹಾಂ.... ಆದರೆ ದಲಿತ ಸಾಹಿತ್ಯ ಕುರಿತು ನಿಮ್ಮ ಪ್ರತಿಕ್ರಿಯೆ. ?

ಸುರ್ವೆ: ಹೇಳುತ್ತೇನೆ.... ದಲಿತ ಸಾಹಿತ್ಯದ ಮೊದಲ ಲೇಖಕ ನಾನು. ಹಾಗೆಂದು ಮರಾಠೀ ಸಾಹಿತ್ಯ ಚರಿತ್ರಕಾರರೂ ಒಪ್ಪುತ್ತಾರೆ. ಬಹಳಷ್ಟು ಇಂದಿನ ದಲಿತ ಲೇಖಕರೂ ಒಪ್ಪುತ್ತಾರೆ. ನಾನು ದಲಿತರ ಬಗ್ಗೆ, ಕಾರ್ಮಿಕರ ಬಗ್ಗೆ ಬರೆಯಲು ಆರಂಭಿಸಿದಾಗ ಇವರಾರೂ ಬರೆಯುತ್ತಿರಲಿಲ್ಲ ...

ಪಾಟೀಲ: ಅಲ್ಲದೇ ನೀವು ಪರಂಪರೆ ವಿಹೀನ ಅನಾಥ ಶಿಶುವಾಗಿ ಬರುತ್ತ ನಿಜವಾದ ಅರ್ಥದಲ್ಲಿ ದಲಿತರೇ ಆಗಿದ್ದಿರಿ.

ಸುರ್ವೆ: ಹೌದು. ಆದರೆ ಅವರಿಗೆ ಜಾತಿ ಬೇಕಲ್ಲ ! ಆದರೆ ನಾನು ಅಂದುಕೊಳ್ಳುತ್ತೇನೆ–ಇಡೀ ಮನುಷ್ಯ ಜಾತಿಯೊಂದಿಗೆ ನಾನು ಸೇರಿಕೊಂಡೆನು. ನಾನು ಮುಸಲ್ಮಾನ, ಬ್ರಾಹ್ಮಣ, ಮರಾಠಾ ಅಥವಾ ಯಾವುದೇ ದಲಿತ ಜಾತಿಯವನಾಗಿ ಬೆಳೆಯುವ ಅವಕಾಶ ನನಗೆ ದೊರೆಯದ್ದು ಒಳ್ಳೆಯದೇ ಆಗಿದೆ ಎಂದು ಭಾವಿಸುತ್ತೇನೆ. ಜಾತಿ ಮುಂದೆ ಬಂದಿತೆಂದರೆ ಮಾನವತ್ವ ನಾಶವಾಗುತ್ತದೆ....

ಪಾಟೀಲ: ನಾವು ದಲಿತ ಸಾಹಿತ್ಯದ ಬಗ್ಗೆ ಮಾತಾಡುತಿದ್ದೆವು.

ಸುರ್ವೆ: ಹಾಂ. ಹೇಳುತ್ತೇನೆ. ದಲಿತ ಸಾಹಿತ್ಯ ಪಂಥ ಆರಂಭವಾದದ್ದು 1974ರ ಸುಮಾರಿಗೆ, ನಾನು ಬರೆಯಲು ಆರಂಭಿಸಿದ್ದು 1956ರಷ್ಟು ಹಿಂದೆ. ನನ್ನ ಮೊದಲ ಸಂಕಲನ ಬಂದದ್ದು 1962ರಲ್ಲಿ. ಅದಕ್ಕೆ 1963ರಲ್ಲಿ ರಾಜ್ಯ ಪ್ರಶಸ್ತಿ ಬಂದಿತು. ಆದಿರಲಿ. ನನ್ನ ಕಾವ್ಯದಲ್ಲಿ ನಾನು ಹೇಳಿಕೊಂಡದ್ದು–'ಕಾರ್ಮಿಕನು ನಾನು. ಕಷ್ಟದಿಂದ ನಿಶಿತಗೊಂಡ ಖಡ್ಗ ನಾನು. ಸಾರಸ್ವತ ಕುದುರೆಯ ದಿಕ್ಕು ಬದಲಿಸುವವ ನಾನು' ಎಂದು. ಹೀಗೆ ನಾನು ಒಂದು ಉದ್ದೇಶದಿಂದ ಪ್ರೇರಿತನಾಗಿಯೇ ಸಾಹಿತ್ಯ ಪ್ರವೇಶ ಮಾಡಿದವನು. ಸಾಹಿತಿಗೆ ಬದ್ಧತೆ, ಒಂದು ನಿರ್ದಿಷ್ಟ ದಿಕ್ಕಿನ ಉದ್ದೇಶ ಇರಕೂಡದು ಎನ್ನುವ ಮಾತನ್ನು ನಾನು ಒಪ್ಪಲಾರೆ. ಯಾವ ಕಮಿಟ್‌ಮೆಂಟ್ ಇಲ್ಲವೆನ್ನುವವನದೂ ಒಂದು ಕಮಿಟ್‌ಮೆಂಟ್ ಇರುತ್ತದೆ.... ನನಗೆ ಯಾವ ಇಜಮ್ಮೂ ಬೇಕಿಲ್ಲವೆಂದು ಹೇಳುವುದು ಕೂಡ ಒಂದು 'ಇಜಂ' ಆಗಿರುತ್ತದೆ. ಜೀವನದಲ್ಲಿನ ನಮ್ಮ ಆಯ್ಕೆಗಳೆಲ್ಲ–ನಾವು ಚುನಾವಣೆಯಲ್ಲಿ ಓಟು ಹಾಕುವುದನ್ನೂ ಸೇರಿಸಿ–ನಾವು ಯಾವುದೋ ಒಂದು ವೈಚಾರಿಕ ಬದ್ಧತೆಗೆ ಅನುಸಾರವಾಗಿ ಮಾಡು ವಂಥವುಗಳೇ ಆಗಿರುತ್ತವೆ....

ಪಾಟೀಲ: ಅದಾಯಿತಲ್ಲ ...

ಸುರ್ವೆ: ಹಾಂ. ಹೀಗೆ ನಾನು 74ಕ್ಕಿಂತ ತುಂಬ ಮೊದಲೇ ಬರೆಯಲು ಆರಂಭಿಸಿ ದವನು. ಇವರು ದಲಿತ ಸಾಹಿತ್ಯವೆಂದರೆ ದಲಿತರು ದಲಿತರಿಗಾಗಿ ಬರೆದ ಸಾಹಿತ್ಯ ಅನ್ನುತ್ತಾರೆ. ಆದರೆ ದಲಿತನೆಂದರೆ ಯಾರು ? ಯಾಕೆಂದರೆ 'ದಲಿತ' ಶಬ್ದದ ವ್ಯಾಖ್ಯೆ ಅತ್ಯಂತ ವ್ಯಾಪ್ತವಾದುದು. 'ಅಸ್ಪೃಶ್ಯ' ಎಂಬ ಪದದ ಅರ್ಥ ಇಷ್ಟು ವ್ಯಾಪ್ತವಾದುದಲ್ಲ. 'ದಲಿತ' ಎಂಬ ಮರಾಠೀ ಶಬ್ದದ ಅರ್ಥ ಆರ್ಥಿಕವಾಗಿ ಸಾಮಾಜಿಕವಾಗಿ ಶೋಷಣೆಗೊಂಡವನು; ಮಾನಸಿಕ, ಸಾಂಸ್ಕೃತಿಕ ಶೋಷಣೆಗೆ ಒಳಗಾದವನು. ಇದು ಎಲ್ಲ ಜಾತಿಯವರನ್ನೂ ಒಳಗೊಳ್ಳುವಂಥದು. 'ಪದದಲಿತ' ಎಂದು ನೀವು ಹೇಳಿದರೆ–ಹಾಂ–ಆಗ ಅರ್ಥ ಬರುತ್ತದೆ 'ಅಸ್ಪೃಶ್ಯ' ಎಂದು.... ಹೇಳುತ್ತಾರೇನವರು–ದಲಿತ ಎಂದು. ಆದರೆ ಅರ್ಥೈಸಿಕೊಳ್ಳುವುದು ಪದದಲಿತ ಎನ್ನುವ ರೀತಿಯಲ್ಲಿ. ಇವರು ಅತ್ಯಂತ ಪ್ರಮುಖ ದಲಿತರೆನ್ನುವುದು ಸರಿಯೇ. ನನಗೆ ಅವರ ಚಿಂತನೆಯ ಬಗ್ಗೆ ಪೂರ್ಣ ಪ್ರೀತಿ ಇಲ್ಲದಿದ್ದರೂ ನನಗೆ ಇವರು ಇಷ್ಟ ರಾಗುತ್ತಾರೆ. ಯಾಕೆಂದರೆ ಇವರ ಚಿಂತನೆ ಬೂರ್ಜ್ವಾ ಚಿಂತನೆಯಿಂದ ಮೂಲ ಭೂತವಾಗಿ ಭಿನ್ನವಾಗಿರುತ್ತದೆ. ಇವರೊಂದಿಗೆ ಜಗಳವಿದ್ದರೂ ಚಿಂತೆಯಿಲ್ಲ, ಪ್ರೀತಿ

ಉಳಿದೇ ಉಳಿಯುತ್ತದೆ. ವೈಚಾರಿಕ ಸಂಘರ್ಷ ನಡೆಯಬೇಕು. ಹಾಗೆಯೇ ಕಲೆಯಲ್ಲಿ ಕೂಡ ಸಂಘರ್ಷ ಕಾಣಿಸಿಕೊಳ್ಳುತ್ತದೆ. ಇಷ್ಟೆಲ್ಲ ಹಿನ್ನೆಲೆ ಇರುವಾಗ ದಲಿತ ಸಾಹಿತ್ಯದ ಸ್ಲೋಗನನ್ನು ಹೇಳುತ್ತ ಮಹಾರ ಜಾತಿಯ ಬಗ್ಗೆಯೇ ಮಾತನಾಡುವುದು ಮತ್ತು ಕೇವಲ ಅಂಬೇಡಕರ್‌ವಾದದಿಂದ ಮಾತ್ರ ಪ್ರಭಾವ ಪಡೆದುಕೊಳ್ಳಬೇಕು ಎನ್ನುವಲ್ಲಿ ನನ್ನ ಪಾತ್ರವೇನು ?.... ನನಗೆ ಮುಖ್ಯವಾಗುವುದು ವಿಶಾಲಾರ್ಥದ ದಲಿತರ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕಷ್ಟಕೋಟಲೆಗಳು. ಇಂಥ ವಿಶಾಲಾರ್ಥದ ಗ್ರಹಿಕೆ ಇಲ್ಲದಿದ್ದರೆ ಏನಾಗುತ್ತದೆಂದರೆ ಸಂಕುಚಿತತೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ವೈಚಾರಿಕತೆಯ ವೈಶಾಲ್ಯ ಅವರಲ್ಲಿ ಸಾಧ್ಯವಾಗದೇ ಹೋಗಿದೆ. ಅಂಬೇಡ್ಕರ್‌ರವರು ನಿಜವಾಗಿ ವೈಚಾರಿಕ ವೈಶಾಲ್ಯ ಹೊಂದಿದ್ದರು, ಆದರೆ ಅವರ ಈ ತರುಣ ಅನುಯಾಯಿಗಳು ಅವರನ್ನು ಭಾಗಶಃ ಮಾತ್ರ ಅರ್ಥಮಾಡಿಕೊಂಡಂತೆ ತೋರುತ್ತದೆ. ಈ ಅನುಯಾಯಿಗಳು ಇನ್ನೂ ಯುವಕರು. ಬಹುತೇಕ 35 ವರ್ಷದೊಳಗಿನ ವಯಸ್ಸಿನ ಇವರು ಇನ್ನೂ ಪಕ್ವವಾಗಬೇಕಾದದ್ದು ಇದೆ.... ನಮ್ಮ ಇಡೀ ಪರಂಪರೆಯಲ್ಲಿನ ಸಂಘರ್ಷಗಳ ಬಗೆಗಿನ ಇವರ ತಿಳುವಳಿಕೆಯೂ ಅರಕೆಯದಾಗಿದೆ. ನಮ್ಮ ಇಡೀ ಮರಾಠೀ ಸಾಹಿತ್ಯ ಪರಂಪರೆಯಲ್ಲಿ ಕಾಣಿಸಿಕೊಂಡ ಪ್ರಗತಿಗಾಮಿ ವಿಚಾರಗಳು, ಹೋರಾಟಗಳು, ಸಂಘರ್ಷಗಳು ಹೀಗೆ ಇವೆಲ್ಲವುಗಳನ್ನು ಒಳಗೊಳ್ಳುತ್ತ ನಾವು ಮುಂದೆ ಹೋಗುವಂತಾದರೆ ಆಗ ನಮಗೆ ಒಂದು ಉಚಿತ ಮಾರ್ಗ ದೊರೆಯುವ ಸಾಧ್ಯತೆ ಇರುತ್ತದೆ. ಅದು ಸರ್ವಮಾನ್ಯವಾಗುವಂಥದ್ದಾಗಿರುತ್ತದೆ.

ಆದರೆ ಇವರ ಗ್ರಹಿಕೆಯ ಬಗೆಗಿನ ನನ್ನ ಅಭಿಪ್ರಾಯವೆಂದರೆ–ನಾನು ದಲಿತನಿದ್ದೇನೆ–ಅಂದರೆ ಅಸ್ಪೃಶ್ಯನಿದ್ದೇನೆ. ಆದ್ದರಿಂದಲೇ ನನಗೆ ನೀರು ಸಿಗುತ್ತಿಲ್ಲ ಅದು ಸಿಗುತ್ತಿಲ್ಲ, ಇದು ಸಿಗುತ್ತಿಲ್ಲ–ಈ ಇಡೀ ಹಿಂದೂ ಸಮಾಜವೇನಿದೆ ಇದನ್ನು ನಾಶ ಮಾಡಬೇಕು, ಹೀಗೆ ಇದೇನು ಸ್ಲೋಗನ್ ಇದೆ–ಇದರ ಹಿಂದೆ ಲೋಭ ಮಾತ್ರ ನನಗೆ ತೋರುತ್ತದೆ. ಇಂಥ ಸ್ಲೋಗನ್ನಿನ ನೆಲೆಯಿಂದ ಬಂದ ಸಾಹಿತ್ಯದಲ್ಲಿ ಒಳ್ಳೆಯದೂ ಸ್ವಲ್ಪ ಇದೆ. ಆದರೆ ಬಹಳಷ್ಟು ಒಳ್ಳೆಯದಾಗಿಲ್ಲ. ಇಂಥ ಸಾಹಿತ್ಯಕ್ಕೆ ಮಾನ್ಯತೆ ದೊರೆಯಲು ಆರಂಭವಾದಾಗ ಅವರು ತಾವು ಬರೆಯುತ್ತಿರುವುದೆಲ್ಲ ಒಳ್ಳೆಯದೆಂದುಕೊಂಡರು. ಸಾಹಿತ್ಯ ಈ ರೀತಿಯಾಗಿ ಮುಂದುವರಿಯಲಾರದು. ಇದು ರಾಜಕಾರಣದ ರೀತಿ... ಸಾಹಿತ್ಯ ರಾಜಕಾರಣಕ್ಕಿಂತ ಹೆಚ್ಚು ತೀವ್ರವಾಗಿ, ಸೂಕ್ಷ್ಮವಾಗಿ ಮನುಷ್ಯನ ಹೃದಯದೊಂದಿಗೆ ಸಂಘರ್ಷ, ಸಂವಾದ ನಡೆಸುತ್ತದೆ. ಸಾಹಿತ್ಯಕ್ಕೆ ಮನುಷ್ಯ ಮುಖ್ಯ. ಅವನ ಹೃದಯ, ಅವನ ಚಿಂತನೆ, ವಿಚಾರಗಳು, ಅವನ ಸಂಘರ್ಷಗಳು ಮತ್ತು ಅವನ ಪರಿಸ್ಥಿತಿ–ಈ ಎಲ್ಲ ಹಿನ್ನೆಲೆಗಳಲ್ಲಿ ಆದರ್ಶವೆನ್ನಿಸುವ

ಬಾಳು ಬದುಕುವ ಮನುಷ್ಯನಿಂದ ಸಾಹಿತ್ಯ ಪ್ರೇರಣೆ ಪಡೆಯುತ್ತಿರುತ್ತದೆ. ಆದರೆ ರಾಜಕಾರಣ, ರಾಜಕೀಯ ಪಕ್ಷಗಳು ಒಣ ಸಿದ್ಧಾಂತಗಳನ್ನು ಮುಂದಿಟ್ಟುಕೊಂಡು ಹೊರಡುತ್ತವೆ. ಅವುಗಳ ಗುರಿ ಆ ಸಿದ್ಧಾಂತಗಳೇ ಆಗಿಬಿಡುತ್ತವೆ.

ಪಾಟೀಲ: ನೀವು ಹೇಳುತ್ತಿರುವ ಈ ಮಾತುಗಳು ದಲಿತ ಸಾಹಿತ್ಯದ ಸಾಮಾಜಿಕ ಗ್ರಹಿಕೆಯ ಅರಕೆಗಳನ್ನು ತಿಳಿಸುವಂಥವು. ಈ ಅಂಶಬಿಟ್ಟು ಸಾಹಿತ್ಯದ ಆಧಾರದ ಮೇಲೆಯೇ ನಿಮ್ಮ ಪ್ರತಿಕ್ರಿಯೆಗಳನ್ನು ತಿಳಿಸುತ್ತೀರಾ ?

ಸುರ್ವೆ: ಹೇಳುತ್ತೇನೆ. ನೋಡಿ ಏಳುನೂರು ವರ್ಷಗಳ ಹಿಂದೆ ಬರೆಯುತ್ತಿದ್ದ ಜ್ಞಾನೇಶ್ವರನನ್ನು ನಾನು ಮೊದಲ ಕವಿ ಎಂದುಕೊಳ್ಳುತ್ತೇನೆ. ಅವನು ಬ್ರಾಹ್ಮಣ ನಾಗಿದ್ದ. ಆದರೆ ಬ್ರಾಹ್ಮಣ ಸಮಾಜವು ಅವನನ್ನು ಸನ್ಯಾಸಿಯ ಸಂತಾನವೆಂದು ಬಹಿಷ್ಕರಿಸಿತು, ಅವನನ್ನು ಪೂರ್ತಿಯಾಗಿ ಸಮಾಜವು ಹೊರಗಿಟ್ಟಿತು. ಯಾರೂ ಅವನಿಗೆ ಅನ್ನ, ನೀರು, ಬೆಂಕಿ ಕೊಡುವಂತಿಲ್ಲ—ಯಾರೂ ಆಶ್ರಯ ನೀಡುವಂತಿಲ್ಲ. ಈ ಜ್ಞಾನೇಶ್ವರನನ್ನು ನಾನು ದಲಿತನೆನ್ನುತ್ತೇನೆ. ಬ್ರಾಹ್ಮಣ ಸಮಾಜದಲ್ಲಿ ಹುಟ್ಟಿದ್ದಾ ನೆನ್ನುವುದು ಅವನ ದೋಷವಲ್ಲ. ಯಾವುದೇ ಜಾತಿಯಲ್ಲಿ ಹುಟ್ಟುವುದರಿಂದಲೇ ಯಾವ ವ್ಯಕ್ತಿಯೂ ಉಚ್ಚನಾಗಲಾರ ಇಲ್ಲವೇ ನೀಚನಾಗಲಾರ. ಹೀಗೆ ಭಾವಿಸುವ ದಲಿತರ ವೈಚಾರಿಕತೆ ಕೂಡ ಜಾತಿವಾದವೇ ಆಗಿರುತ್ತದೆ. ಇದು ತಪ್ಪು, ಇದನ್ನು ಒಪ್ಪಲಾಗದು....

ಪಾಟೀಲ: ನಾನು ಸಾಹಿತ್ಯಿಕ ಅಂಶಗಳನ್ನು ಕುರಿತು ಕೇಳುತ್ತಿದ್ದೆ.

ಸುರ್ವೆ: ಅದೇ ಮಾತಿಗೆ ಬರುತ್ತೇನೆ. ಈ ಉದಾಹರಣೆಯ ಮೂಲಕ ಅಲ್ಲಿಗೆ ಬರು ತ್ತೇನೆ. ಇವರು ಜ್ಞಾನೇಶ್ವರಿಯ ಬಗ್ಗೆ ತಾಳುವ ನಿಲುವು ಹೇಗಿದೆ ಎಂದರೆ ಜ್ಞಾನೇಶ್ವರಿಯಲ್ಲಿ ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ಅದನ್ನು ತೊಡೆದು ಹಾಕಲು ಎಲ್ಲಿ ಹೇಳಿದೆ ?....ಜ್ಞಾನೇಶ್ವರ ಎಲ್ಲಿ ಹೇಳುತ್ತಾನೆ ಇಲ್ಲಿ ಜಾತಿಪಾತಿಗಳಿವೆ ಎಂದು ? ಎಲ್ಲಿ ಹೇಳುತ್ತಾನವನು ಸೋಶಿಯಲಿಸ್ಮ್ ಬರಲಿ ಎಂದು ?.... ಅರೇ ಏಳು ನೂರು ವರ್ಷಗಳ ಹಿಂದಿನ ಮಾತನ್ನು ನೀವು ಇಂದು ವಿಚಾರಣೆಗೆ ಒಳಪಡಿಸುವಾಗ ಇಂಥ ಪ್ರಶ್ನೆಗಳಿಗೆ ಉತ್ತರ ಅರಸುವುದು ತಪ್ಪಾಗುತ್ತದೆನ್ನುವುದು ನನ್ನ ವಾದ. ಅದೇ ಜ್ಞಾನೇಶ್ವರನೇ ಬರೆಯುತ್ತಾನೆ–

ದುರಿತಾಂಚೇ ತಿಮಿರಜಾವೇ
ಜೋಜೇ ವಾಂಛೆಲ ತೋನೇ
ಲಾಭೋ ಪ್ರಾಣೀ ಜಾತ

[ಯಾರು ಯಾರು ದಲಿತರಿದ್ದಾರೆ-ಯಾರು ಕತ್ತಲೆಯಲ್ಲಿದ್ದಾರೆ. ಅಂದರೆ ಯಾರು ಬಡವರು, ಪೀಡಿತರು ಇದ್ದಾರೆ ಅವರ ಕತ್ತಲು ಹರಿಯಲಿ, ಎಲ್ಲರೆಲ್ಲರ ಆಸೆ ಪೂರ್ಣಗೊಳ್ಳಲಿ]

-ಹೀಗೆ ಬರೆಯುವವನು ಜ್ಞಾನೇಶ್ವರನೇ.... ನೋಡಿ ಒಬ್ಬ ಕವಿಯ ಬಗ್ಗೆ, ಒಬ್ಬ ಸಾಹಿತಿಯ ಬಗ್ಗೆ ನೀವು ಯೋಚಿಸುವಾಗ ಕೇವಲ ಒಂದು ತುಂಡಾದ ದೃಷ್ಟಿಕೋನ ದಿಂದ ನೋಡಿದರೆ.... ಊಹೂಂ.... ನಿಮಗೆ ಜ್ಞಾನೇಶ್ವರ ಸಿಕ್ಕಲಾರನು. ಇಡೀ ಸಮಾಜದ ದರ್ಶನ ಸಿಕ್ಕಲಾರದು. ಯಾವುದೇ ವಿಷಯವಾಗಲಿ, ಅತಿ ವ್ಯಾಪ್ತವಾದ ಸಮಗ್ರವಾದ ದೃಷ್ಟಿಕೋನದಿಂದ ನೋಡುವ ಅವಶ್ಯಕತೆ ಇದೆ. ಅದರ ಹಿಂದೆ ಇರುವ ಮೂಲಗಳನ್ನು ಕೆದಕುವಂತಹ, ಅವುಗಳನ್ನು ತಲುಪುವಂತಹ ದೃಷ್ಟಿಕೋನ ನಮಗೆ ಬೇಕು....

ಇನ್ನು ಎರಡನೆಯದಾಗಿ, ಜ್ಞಾನೇಶ್ವರನು ಏನು ಬರೆದಿದ್ದಾನೆ-ಕಲೆಯಾಗಿ, ಶಬ್ದಗಳಾಗಿ, ಲಯಗಳಲ್ಲಿ ಅವು ಸುಂದರವಾಗಿವೆ. ಅಷ್ಟೇ ಅಲ್ಲ, ಇಂದಿಗೂ ಅವು ಮರಾಠೀ ಭಾಷೆಯಲ್ಲಿ ಪ್ರಮಾಣಗಳಾಗಿವೆ. ಇಷ್ಟು ಸುಂದರವಾದದ್ದು ನನಗೆ ಬೇರೆ ಯಾವುದೂ ತೋರುವುದಿಲ್ಲ. ಇಂಥದನ್ನು ನಾವು ತಿರಸ್ಕರಿಸಬೇಕೆ ?....ಇದನ್ನು ತಿರ ಸ್ಕರಿಸುವುದರಿಂದ ನಾವು ಮುಂದೆ ಹೋಗಲಾರೆವು....ಹಿಂದಿನದರ ಹೆಗಲ ಮೇಲೇರಿ ನಾವು ಮುಂದೆ ಸಾಗಬೇಕಿದೆ. ಇತಿಹಾಸದ ಪ್ರಕ್ರಿಯೆಯೇ ಹೀಗಲ್ಲವೆ ?.... ಸಮಾಜ ತನ್ನ ಚಲನೆಯಲ್ಲಿ ಪ್ರತಿಗಾಮಿ ಅಂಶಗಳನ್ನು ಬದಿಗೆ ಸರಿಸುತ್ತಾ ಈಗಾಗಲೇ ಇರುವ ಪ್ರಗತಿಗಾಮಿ ಚಿಂತನೆಗಳ ಊರುಗೋಲು ಹಿಡಿದು ಮುಂದೆ ಸಾಗಬೇಕಾಗುತ್ತದೆ. ಇದಲ್ಲವೇ ಇತಿಹಾಸ ಸಾಗುವ ಕ್ರಮ ? ಈ ಹಿನ್ನೆಲೆಯಲ್ಲಿ ಜ್ಞಾನೇಶ್ವರನನ್ನು ನೋಡ ಬೇಕು. ಇದೇ ಹಿನ್ನೆಲೆಯಲ್ಲಿ ತುಕಾರಾಮ, ರಾಮದಾಸ ...ಇಡೀ ಸಂತ ಪರಂಪರೆಯ ಬರಹಗಳನ್ನು ಪರಿಗಣಿಸಬೇಕು. ಆ ನಂತರ ನಾವು ಕೇಶವಸುತರ ಕಾವ್ಯಕ್ಕೆ ಬರ ಬೇಕಾಗುತ್ತದೆ. ಇದನ್ನು-ಅಂದರೆ ಇಡೀ ಕಾವ್ಯ ಪ್ರಕ್ರಿಯೆಯನ್ನು ಒಂದು ನಿರಂತರ ವಾದ ಪ್ರಕ್ರಿಯೆ ಎಂಬ ಹಿನ್ನೆಲೆಯಲ್ಲಿ ನೋಡಬೇಕು.

ಈ ಕೇಶವಸುತರನ್ನು ನೋಡಿ. ಈ ಆಧುನಿಕ ಕವಿ ಕೂಡ ಬ್ರಾಹ್ಮಣನೇ. ಅರೇ, ಬ್ರಾಹ್ಮಣನೇ ಅಂದು ಶಿಕ್ಷಿತನಾಗಿದ್ದರೆ ಏನು ಮಾಡಲಾಗುತ್ತದೆ ? ತಮಾಷೆಗಲ್ಲ, ನಾನು ನಿಜವಾಗಿಯೂ ಇಂಥ ಒಂದು ಪ್ರಶ್ನೆ ಎತ್ತುತ್ತೇನೆ. ಏನು ಮಾಡಬಹುದು ಇದು ?.... ಭಾರತದಲ್ಲಿನ ಕಮ್ಯುನಿಸ್ಟ್ ಮತ್ತು ಸೋಶಿಯಲಿಸ್ಟ್ ಚಳುವಳಿಗಳಿಗೆ ಬ್ರಾಹ್ಮಣರೇ ನೇತಾರರಾಗಿದ್ದರಿಂದ ಅವು ಅಯಶಸ್ವಿಯಾದವೆಂದು ಒಬ್ಬ ವಿದ್ವಾಂಸರು ಬರೆಯುತ್ತಾರೆ. ಆದರೆ ಅವರೇ ಅಂದು ಶಿಕ್ಷಿತರಾಗಿದ್ದು ಅವರೇ ಮೊಟ್ಟಮೊದಲಿಗೆ

ಹೊಸ ವಿಚಾರಗಳ ಸಂಪರ್ಕಕ್ಕೆ ಬಂದಿದ್ದರೆ ಇಂದು ನಾವು ಏನು ಮಾಡಲಾಗುತ್ತದೆ ? ಈ ರೀತಿಯ ಯೋಚನೆ ಸರಿಯೆ ?.... ಜಾತಿಯಿಂದಲೇ ಎಲ್ಲವನ್ನೂ ಪರಿಗಣಿಸುವುದು? .... ಹಾಂ. ಜಾತಿಯ ಸವಾಲನ್ನೂ ನಾವು ಎದುರಿಸುವುದು ಇದ್ದೇ ಇದೆ. ಜಾತಿಗಳ ಸಂಘರ್ಷ ಅವುಗಳ ಮೂಲಕ ಇರುವ ಶೋಷಣೆ ಅಸಹಾಯಕತೆಗಳ ವಿರುದ್ಧದ ಹೋರಾಟ ಇದ್ದೇ ಇದೆ. ಇದೆಲ್ಲ ಸರಿ. ಆದರೆ ಪ್ರತಿಯೊಂದು ವಿಷಯವನ್ನು ಈ ಜಾತಿಯ ದೃಷ್ಟಿಯಿಂದಲೇ ನೋಡುವುದು–ಎಲ್ಲವನ್ನೂ ಜಾತಿಯೊಂದಿಗೆ ಜೋಡಿಸು ವುದರಿಂದ ನಾವು ಬಹಳಷ್ಟು ಕಳೆದುಕೊಳ್ಳುತ್ತೇವೆ. ಕೇವಲ ಜಾತಿಯ ಬೆನ್ನುಹತ್ತಿ ನಮ್ಮ ಈ ಕಾವ್ಯ ಪರಂಪರೆ ತ್ಯಜಿಸಿದರೆ ಅದರಲ್ಲಿನ ಕಲೆಗಾರಿಕೆ, ಲಯ, ಶಬ್ದ ಸೌಂದರ್ಯ ಇವೆಲ್ಲವುಗಳಿಂದ ನಾವು ವಂಚಿತರಾಗುತ್ತೇವೆ. ಇವೆಲ್ಲ ನಿಮಗೆ ಒಮ್ಮೆಲೆ ಎಲ್ಲಿಂದ ದೊರೆಯಲು ಸಾಧ್ಯ ?

ಪಾಟೀಲ: ಅಂದರೆ ಜ್ಞಾನೇಶ್ವರ, ತುಕಾರಾಮ ಮುಂತಾದ ಸಂತರ ಅಭಂಗ ಸಾಹಿತ್ಯ ಪರಂಪರೆಯನ್ನು ಕಡಿದುಕೊಂಡದ್ದರಿಂದ ದಲಿತ ಸಾಹಿತ್ಯಕ್ಕೆ ಅರಕೆಯುಂಟಾಗಿದೆ ಎಂದು ನೀವು ಹೇಳುತ್ತಿರುವಿರಾ ?

ಸುರ್ವೆ: ಹಾಂ.... ವಾರಸಾ ಎನ್ನುತ್ತೇವೆ ನಾವು. ಈ ವಾರಸಾ ತಪ್ಪಿಸಿಕೊಂಡಿದ್ದಾರವರು.... ಈ ಜ್ಞಾನೇಶ್ವರನು ಯಾರು ? ನಮ್ಮವನು. ಬ್ರಾಹ್ಮಣನಾದರೂ ದಲಿತನಾದವನು. ಸಿದ್ಧಾಂತಗಳ ಹೋರಾಟದಲ್ಲಿ ನಮ್ಮ ಪರವಾಗಿ ನಿಂತವನು. ಹೌದು.... ಅವನ ಬರಹದ ಮೇಲೆ ಮಹಾಭಾರತದ ಸಾಕೆಷ್ಟು ಪ್ರಭಾವವಿದೆ. ಆದರೆ ಅದರಾಚೆಗೆ ಅಮೃತಾನುಭವ ಮುಂತಾದ ಬರಹದಲ್ಲಿ ಅವನು ಯೋಚಿಸಿದ್ದು, ಬರೆದದ್ದು ಮನುಷ್ಯನ ಬಗ್ಗೆ, ಅಲ್ಲಿ ಕಂಡರಿಸಿದ ದರ್ಶನ ನಮ್ಮ ಬಗೆಗಿನದು....

ಪಾಟೀಲ: ಅಂಬೇಡ್ಕರ್‌ರವರು ಹಿಂದೂಧರ್ಮ ಬಿಟ್ಟು ಬೌದ್ಧಧರ್ಮ ಸ್ವೀಕರಿಸಿದ ಪರಿಣಾಮದಿಂದ ಹೀಗಾಗಿರಬಹುದಲ್ಲವೆ ?

ಸುರ್ವೆ: ಹೌದು. ಆಗಿದೆ. ಆದರೆ ನಾವು ಇದನ್ನು ಮಾತಾಡಿದರೆ ಸಾಹಿತ್ಯಕ ಮಾನದಂಡದಿಂದ ಪುನಃ ಸಾಮಾಜಿಕ ಮಾನದಂಡದ ಬಗ್ಗೆ ಮಾತಾಡಲು ಆರಂಭಿಸಿದಂತಾಗುತ್ತದೆ....ಅಂಬೇಡ್ಕರ್‌ರವರಿಗೆ ಯಾವಾಗ ಅನಿವಾರ್ಯ ಎನಿಸಿತೋ ಆಗ ಅವರು ಬೌದ್ಧಧರ್ಮ ಸ್ವೀಕರಿಸಿದರು. ಅದಕ್ಕೆ ಕೆಲವು ಮುಖ್ಯ ಕಾರಣಗಳಿವೆ. ಅವರು ಬರೆಯುತ್ತಾರೆ–"ಹಿಂದೂ ಧರ್ಮದಲ್ಲಿದ್ದು ನನಗೆ ಸಾಮಾಜಿಕ ಸಮತೆಯ ನ್ಯಾಯ ದೊರಕದಿದ್ದರೆ ಈ ಧರ್ಮದಲ್ಲಿರುವುದಕ್ಕಿಂತ ಬೌದ್ಧಧರ್ಮದತ್ತ ಹೋಗುವುದು ಯೋಗ್ಯವೆನಿಸುತ್ತದೆ. ಆ ಧರ್ಮದಲ್ಲಿ ಸಾಮಾಜಿಕ ಸಮತೆಯ ನಿಯಮಗಳಿವೆ; ಅವಕಾಶವಿದೆ. ಎರಡನೆಯದಾಗಿ–ಬೌದ್ಧಧರ್ಮದಲ್ಲಿ ಕರುಣೆ ಇಂದು ಮುಖ್ಯ ಮೌಲ್ಯ

ವಾಗಿದೆ. ಶಾಂತಿ ಒಂದು ಮೌಲ್ಯವಾಗಿದೆ.... ಹಿಂದೂ ಧರ್ಮವು ಸಾವಿರಾರು ವರ್ಷಗಳಿಂದ ಕೇವಲ ಜಾತೀಯತೆಯಲ್ಲಿ ನಿರತವಾಗಿ ನಮ್ಮನ್ನು ಬದಿಗೆ ಸರಿಸುತ್ತ ಹೋಗುವ ಅದರ ಮಾನಸಿಕ ಸ್ಥಿತಿ ಬದಲಾಗದಿರುವುದರಿಂದ ನಾನು ಹಿಂದೂ ಧರ್ಮ ತ್ಯಜಿಸಿ ಬೌದ್ಧಧರ್ಮ ಸ್ವೀಕರಿಸುತ್ತೇನೆ" ಎಂದು ಹೇಳುತ್ತಾರೆ. ಆದರೆ ಸಾಹಿತ್ಯದ ದೃಷ್ಟಿಯಿಂದ ಇದರಿಂದ ಎಷ್ಟು ಪರಿಣಾಮವಾಗಿದೆಯೋ....

ಪಾಟೀಲ: ಹಾಗಲ್ಲ. ನಾನು ಈ ಪ್ರಶ್ನೆ ಎತ್ತಿದ್ದು ಎರಡು ದೃಷ್ಟಿಯಿಂದ. ಒಂದು–ಅಂಬೇಡ್ಕರ್ ಹಿಂದೂ ಧರ್ಮ ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸುವಾಗ ಇಡೀ ಹಿಂದೂ ಧರ್ಮ ಮತ್ತು ಅದರ ಸಂಸ್ಕೃತಿ ಪರಂಪರೆಗಳನ್ನು ಕಳಚಿ ಒಗೆದು ಬೌದ್ಧ ಧರ್ಮ ಸ್ವೀಕರಿಸಿದರು. ಅದೇ ರೀತಿಯಾಗಿ ಅವರ ಅನುಯಾಯಿಗಳು ತಮ್ಮ ಸೃಜನ ಪ್ರಕ್ರಿಯೆಯ ಸಂದರ್ಭದಲ್ಲಿ ಹಿಂದೂಧರ್ಮ ಪ್ರಣೀತವಾದ ಸಂತ ಪರಂಪರೆಯನ್ನು ಒಳಗೊಂಡ ಒಟ್ಟು ಸಾಹಿತ್ಯ ಪರಂಪರೆಯನ್ನು ನಿರಾಕರಿಸಿರುವ ಸಾಧ್ಯತೆ ಇದೆಯಲ್ಲವೆ?

ಸುರ್ವೆ: ಇರಬಹುದು. ಆದರೆ ಸೃಜನ ಪ್ರಕ್ರಿಯೆಯ ನಮ್ಮ ಅಪೇಕ್ಷೆ ಏನು? ಅಂಬೇಡ್ಕರ್‌ರವರು ಕೆಲವು ಅಂಶಗಳನ್ನು ತ್ಯಜಿಸಿ ನಡೆದಿರಬಹುದು. ಆದರೆ ಇಂದಿನ ನೆಲೆಯಲ್ಲಿ ನಿಂತು ಯೋಚಿಸಿದರೆ ನಾವು ಇಂಥ ಪಾತ್ರ ವಹಿಸಬೇಕಾಗಿಲ್ಲ ಎನಿಸುತ್ತದೆ. ಇಂಥ ನೆಲೆಯಲ್ಲಿಯೇ ಯೋಚನೆ ಮಾಡುತ್ತೇವೆಂದಾದರೆ ಬೌದ್ಧಧರ್ಮದಲ್ಲಿ ಕೂಡ ಕೆಡುಕುಗಳು ಇಲ್ಲವೆ ಎಂದು ಕೇಳಬೇಕಾಗುತ್ತದೆ. ಅದೂ ನಂತರ ಶಿಥಿಲವಾಗಿದೆ. ಯಾಕೆ ಹಾಗಾಯಿತೆಂದು ಯೋಚಿಸಬೇಕಲ್ಲವೆ ? ಅದರಲ್ಲಿ ಕೂಡ ಜಗಳಗಳು ಏರ್ಪಡಲಿಲ್ಲವೇ ? ಪ್ರತಿ ಧರ್ಮದಲ್ಲಿಯೂ ಇದೇ ಆಗುವುದು. ನೀವು ಯಾವುದೇ ಧರ್ಮದ ಇತಿಹಾಸ ಗಮನಿಸಿ ನೋಡಿ.... ಓದು ಬರಹ ಬಲ್ಲ ಹೊಸಯುಗದಲ್ಲಿ ಬದುಕುತ್ತಿರುವ ನಾವು ಇದನ್ನು ಯೋಚಿಸಬೇಕು. ನಾವು ಎಲ್ಲವನ್ನೂ ನಮ್ಮ ಬೆನ್ನಿಗೆ ಕಟ್ಟಿಕೊಂಡು ಹೊರಡಬೇಕಾಗಿದೆ. ಅಸ್ಪೃಶ್ಯತೆ ಕೊನೆಗಾಣಬೇಕು ಎನ್ನುವಾಗ ಅದು ಬರೀ ಅಸ್ಪೃಶ್ಯರ ಪ್ರಶ್ನೆ ಮಾತ್ರವಾಗುವುದಿಲ್ಲ. ಇಡೀ ಹಿಂದೂ ಸಮಾಜದ ಮನಃಪರಿವರ್ತನೆಯ ಪ್ರಶ್ನೆ ಇದರಲ್ಲಿದೆ. ಹೀಗೆ ಇಡೀ ಹಿಂದೂ ಸಮಾಜದ ಮಾನಸಿಕ ಬದಲಾವಣೆಯ ಅವಶ್ಯಕತೆ ಇರುವಾಗ ನಾವು ಅದರ ಪರಂಪರೆಯ ಹಿನ್ನೆಲೆಯಲ್ಲಿಯೇ ಒಂದೊಂದು ಹೆಜ್ಜೆ ಇಡುತ್ತ–ಅದರ ತಿಳುವಳಿಕೆಗೆ ಪ್ರಶ್ನೆ ಹಾಕುತ್ತ ಹಾಕುತ್ತ ಮುಂದುವರಿಯಬೇಕಾಗುತ್ತದೆ.

ಪಾಟೀಲ: ಅಂದರೆ ಕಾವ್ಯದ ಕಾಂತಾಸಂಮಿತಿಯ ಕಾರ್ಯ ತುಂಬ ಮುಖ್ಯ ಎಂದು ಭಾವಿಸುತ್ತೀರಿ....

ಸುರ್ವೆ: ಹಾಂ. ತಿಳುವಳಿಕೆ ನೀಡುತ್ತ ಪರಿವರ್ತನೆ ಸಾಧಿಸುವ ಕೆಲಸ.... ಕಾವ್ಯ free thinking ಎಂದರೆ ಏನುಬೇಕಾದದ್ದನ್ನು ಯೋಚಿಸುವುದು ಅಂತಲ್ಲ. ಈ

free thinking ಕೂಡ ವಾಸ್ತವದ ಹಿನ್ನೆಲೆಯಿಂದ ಬರಬೇಕಾದುದು. ನೋಡಿ ಇಂದು ಕೇವಲ ರಮ್ಯ ಚಿಂತನೆಯ ಕಲ್ಪನಾ ವಿಲಾಸ ಸಾಧ್ಯವಿಲ್ಲ, ಪುರಾತನ ಸಂಸ್ಕೃತ ಕವಿಗಳಿಗೆ ಅಂಥ ಕಲ್ಪನಾ ವಿಲಾಸ ಸಾಧ್ಯವಿತ್ತು ... ಇಂದು ಪರಿಸ್ಥಿತಿ ತುಂಬ ಭೀಷಣ ವಾದುದಾಗಿದೆ. ಇಂಥ ಪರಿಸ್ಥಿತಿಯಲ್ಲಿ ಜೀವಿಸುವ ಮನುಷ್ಯನಿಗೆ ಅವು ಒದಗಿಸುವ ಅನುಭವಗಳನ್ನು ಎಲ್ಲಿ ಬಚ್ಚಿಡುತ್ತೀರಿ ? ಇದು ದಲಿತರ ಪರಿಸ್ಥಿತಿಯೂ ಆಗಿದೆ. ಇಂದಿನ ಆರ್ಥಿಕ ದುರ್ಭರತೆಯನ್ನೇ ನೋಡಿರಿ. ದಲಿತರಿಗೂ ಇದರ ಅನುಭವ ಇದೆ. ಹಿಂದೂಗಳಿಗೆ, ಯಹೂದಿಗಳಿಗೆ, ಮುಸಲ್ಮಾನರಿಗೆ ಎಲ್ಲರಿಗೂ ಈ ಸಮಸ್ಯೆ ಸಮಾನ ವಾಗಿದೆ. ಅಂದರೆ ಬರೀ ಧರ್ಮ ಒಂದನ್ನೇ ಏಕೈಕ ಸಮಸ್ಯೆ ಎಂಬ ನೆಲೆಯಿಂದ ನಾವು ದಲಿತ ಸಾಹಿತ್ಯವನ್ನು ನೋಡಲಾಗದಲ್ಲವೆ ?

ಪಾಟೀಲ: ನನ್ನ ಎರಡನೆಯ ದೃಷ್ಟಿಕೋನ ಇದಾಗಿತ್ತು .. ಏನೆಂದರೆ.... ಅಂಬೇಡ್ಕರ್‌ರವರು ...

ಸುರ್ವೆ: ಅಲ್ಲ. ನನ್ನ ಮಾತಿನ ನೆಲೆಯನ್ನು ಗ್ರಹಿಸಿದಿರಲ್ಲವೆ ?.... ಬೌದ್ಧಧರ್ಮದಲ್ಲಿ ಈಶ್ವರನೆಂಬ ಕಲ್ಪನೆ ಇಲ್ಲ. ಆತ್ಮ ಎಂಬ ಕಲ್ಪನೆ ಇಲ್ಲ. ಅಂಬೇಡ್ಕರ್‌ರವರು ಹಿಂದೂ ಮಾನಸಿಕ ಸ್ಥಿತಿಯನ್ನು ಸರಿಯಾಗಿ ಗುರುತಿಸುತ್ತಾರೆ. ಅವರು ಹೇಳುವಂತೆ ಹಿಂದೂ ಧರ್ಮದಲ್ಲಿ ಆತ್ಮದ ಬಗ್ಗೆ ಹೇಳುತ್ತ ಅದರ ಭ್ರಮೆಯಲ್ಲಿ ಜನರನ್ನು ಕಟ್ಟಿಹಾಕಲಾಗುತ್ತದೆ. ಪ್ರಾರಬ್ಧದ ಹೆಸರಿನಿಂದ–ಈಶ್ವರನ ಹೆಸರಿನಿಂದ ಜನತೆಯನ್ನು ವಂಚಿಸಲಾಗುತ್ತದೆನ್ನುವ ಅವರ ಚಿಂತನೆ ನನಗೆ ಒಪ್ಪಿತವಾಗುವಂಥದು. ಈ ಬಗ್ಗೆ ನನ್ನ ಪೂರ್ಣ ಸಹಮತವಿದೆ.

ಪಾಟೀಲ: ಇನ್ನು ನಿಮ್ಮ ಕಾವ್ಯಕರ್ಮದ ಬಗ್ಗೆ ಮಾತಾಡಬಹುದು ... ನಿಮ್ಮ ಮನಸ್ಸಿನಲ್ಲಿ ಕಾವ್ಯ ಹುಟ್ಟುವ ಕ್ರಿಯೆಯ ಬಗ್ಗೆ ಹೇಳುತ್ತೀರಾ ?

ಸುರ್ವೆ: ಓ !.... ಅದು ಬಹಳ ಅವಗಢದ ಕ್ರಿಯೆ. ಕಠಿಣ ಕ್ರಿಯೆ....

ಪಾಟೀಲ: ಪ್ರಯತ್ನಿಸಿರಿ ... ಹೇಳಿ ನೋಡೋಣ ...

ಸುರ್ವೆ: ಅದರ ಬಗ್ಗೆ ಏನೂ ಹೇಳಲಾಗುವುದಿಲ್ಲ ... ಕಾವ್ಯ ನನ್ನ ಮನಸ್ಸಿನಲ್ಲಿ ಚಿಂತನೆಯಿಂದ ಮೂಡುತ್ತದೆ.... ಜೀವನದ ಅನುಭವಗಳು ಮೂಡಿಸುವ ದರ್ಶನದಿಂದ ಹುಟ್ಟುತ್ತದೆ....ದಿನದ 24 ಗಂಟೆಯೂ ನಾನು ಕವಿಯಾಗಿ ಇರಲಾರೆ. ನಾಗರಿಕನಾಗಿರುತ್ತೇನೆ. ಮಕ್ಕಳ ತಂದೆಯಾಗಿ ಕುಟುಂಬದ ಮುಖ್ಯಸ್ಥನಾಗಿರುತ್ತೇನೆ. ನನ್ನ ಕೆಲಸವನ್ನು, ಶ್ರಮವನ್ನು ಮಾಡುತ್ತ ಮಾಲೀಕನೊಂದಿಗೆ ನಿರ್ದಿಷ್ಟ ಸಂಬಂಧ ಸ್ಥಾಪಿಸಿ

ಕೊಂಡು ಕಾರ್ಮಿಕನಾಗಿರುತ್ತೇನೆ. ಇವುಗಳಾಚೆಗೆ ಟ್ರೇಡ್ ಯೂನಿಯನ್ನಿನ ಚಟು ವಟಿಕೆಗಳಲ್ಲಿ ನನ್ನ ಸ್ಥಾನ ಉಂಟು. ಹೀಗೆ ಹೊರಜಗತ್ತು ನನ್ನನ್ನು ಪೂರ್ಣವಾಗಿ ಆವರಿಸುತ್ತದೆ. ಈ ಎಲ್ಲ ಹೊರಜಗತ್ತು ನನ್ನ ಗ್ರಹಿಕೆಗೆ ದೊರಕುವುದು. ಅಲ್ಲದೆ ಇದನ್ನು ಗ್ರಹಿಸುವ ನನ್ನದೇ ಒಂದು ವೈಚಾರಿಕ ಮಾಡೆಲ್ ಇದೆ. ಈ ಮಾಡೆಲ್–ಈ ಪ್ಯಾಟರ್ನ್ ನನ್ನ ಮತ್ತು ರಾಜಕಾರಣದ, ನನ್ನ ಮತ್ತು ಉಳಿದ ಮನುಷ್ಯರ, ನನ್ನ ಮತ್ತು ಸಾಹಿತ್ಯದ ನಡುವಿನ ಸಂಬಂಧಗಳಿಗೆ ಒಂದು ಅರ್ಥದ, ಕಲೆಯು ಚೌಕಟ್ಟು ಒದಗಿಸುತ್ತದೆ.... ಇವೆಲ್ಲ ವಾಸ್ತವಗಳನ್ನು ಗಮನಿಸದೇ ಬರೀ ರಮ್ಯ ಮನೋಭಾವದೊಂದಿಗೆ ಪ್ರತಿಕ್ರಿಯಿಸುತ್ತೇನೆ ಎನ್ನುವುದಾದರೆ ಜೀವನದಲ್ಲಿ ಬರೀ ರಮ್ಯತೆ ಇಲ್ಲ. ವಾಸ್ತವ ಕಹಿಯಾಗಿದೆ. ಇನ್ನು ವಾಸ್ತವ ಕೂಡ ವಾಸ್ತವಕ್ಕಾಗಿ ಅಲ್ಲ. ವಾಸ್ತವತೆಯು ಕಲೆಯ ತೆಕ್ಕೆಗೆ ಒದಗುವುದು ಮಾನಸಿಕ ಸಂಘರ್ಷದ, ವೈಚಾರಿಕ ಸಂಘರ್ಷದ ಒಂದಂಗವಾಗಿ. ಹೀಗೆ ವೈಚಾರಿಕ ಸಂಘರ್ಷದ ಅಂಗವಾಗಿ ಬರುವ ವಾಸ್ತವತೆ ಕಲೆಯಾಗಿ ರೂಪತಾಳುವಾಗ ಸೌಂದರ್ಯಪ್ರಜ್ಞೆಯ ಅಧೀನವಾಗಿಯೇ ಬರಬೇಕು. ಇದಾಗದಿದ್ದರೆ ಸಾಹಿತ್ಯಕೃತಿಗಳಲ್ಲಿ ಮೂಡಿ ಬರುವ ವಾಸ್ತವತೆ ಕೇವಲ ವರದಿಗಳ ರೂಪತಾಳುತ್ತದೆ. ಸೃಜನಶೀಲ ಪ್ರಕ್ರಿಯೆಯಲ್ಲಿ ಇವೆಲ್ಲ ಗಂಭೀರವಾದ ಅಂಶಗಳು ಸೇರಿಕೊಂಡಿರುತ್ತವೆ.... ನನಗೆ ಕಾವ್ಯರಚನೆ ತುಂಬ ಕಷ್ಟದ ಕೆಲಸ.... ಕಾವ್ಯದ ರಚನೆ–ಅದೇಕೆ–ಸಾಹಿತ್ಯದ ಯಾವುದೇ ಪ್ರಭೇದದ ರಚನೆ ಬಹಳ ಗಂಭೀರ ವಾದ ಕ್ರಿಯೆ. ಅದು ಮಾಮೂಲಿಯಾದ ಕ್ರಿಯೆಯಲ್ಲ.

ಪಾಟೀಲ: ಪಾರಂಪರಿಕ ಸಂದರ್ಶನಗಳಲ್ಲಿ ಕೇಳುವಂತಹ ಮತ್ತು ಕೊನೆಯದಾದ ಪ್ರಶ್ನೆ. ನಿಮ್ಮ ಕಾವ್ಯಾದರ್ಶವೇನು....?

ಸುರ್ವೆ: ನನ್ನ ಕಾವ್ಯಾದರ್ಶ ?!.... ಹಾಗೇಂದೂನೂ....ಹಾಂ....ಮನುಷ್ಯನೊಂದಿಗೆ ಸದಾ ಸಂಬಂಧ ಸಾಧಿಸುವುದು–ಬರೆಯುತ್ತಿರುವುದು. ಮಾನವ ಪ್ರಜ್ಞೆಗೆ ಧ್ವನಿ ಕೊಡುವುದು....ಅದಕ್ಕಿಂತ ಹೆಚ್ಚಾಗಿ. ನೋಡಿ, ಇಂದಿನ ಮನುಷ್ಯ ಬಹಳ ಆಳಕ್ಕೆ ಕುಸಿದು ಹೋಗಿದ್ದಾನೆ. ದುಃಖದ ಹುದಲಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಅವನ ಕಷ್ಟಗಳಿಗೆ ಧ್ವನಿ ನೀಡುವುದಿದೆ. ಕಲೆಯಲ್ಲಿ ಏರ್ಪಡುವ ಸಂಘರ್ಷ ಮನುಷ್ಯನ ಒಳಿತಿಗಾಗಿ ಸೌಹಾರ್ದಯುತ ಬದುಕಿಗಾಗಿ ಎಂದು ನನ್ನ ನಂಬಿಕೆ. ನನ್ನ ಒಂದು ಕವಿತೆ ಇಂಥ ದುಃಖಿತನಾದ ಒಬ್ಬ ಮನುಷ್ಯನಿಗೆ ಸಾಂತ್ವನ ಸಂತೋಷ ನೀಡುತ್ತದೆನ್ನುವು ದಾದರೆ ನಾನು ನನ್ನ ಕಾವ್ಯ ಸಾರ್ಥಕವಾಯಿತೆಂದುಕೊಳ್ಳುತ್ತೇನೆ. ನನ್ನ ಇಂತಹ ಕಾವ್ಯ ಶಾಶ್ವತವಾದುದೇ ಅಂದರೆ ಸಾರ್ವಕಾಲಿಕವಾದುದು ಅಹುದೋ ಅಲ್ಲವೋ, ಅದು ಶ್ರೇಷ್ಠವಾದುದು ಅಹುದೋ ಅಲ್ಲವೋ ಎನ್ನುವ ಪ್ರಶ್ನೆಯನ್ನು ನಾನು ಕೇಳಿಕೊಳ್ಳುವುದಿಲ್ಲ. ಅದು ಕಾಲದ ಸಮಸ್ಯೆ....

೨. ಆಯುಷ್ಮಾನ್ ಕೇಶವ ಮೆಶ್ರಾಮರೊಂದಿಗೆ

ರಾಘವೇಂದ್ರ ಪಾಟೀಲ: ನಿಮ್ಮ 'ಹಕೀಕತ್ ಅಣೀ ಜಟಾಯು' ಈ ಕಾದಂಬರಿ ಯುಗ್ಮದಲ್ಲಿನ 'ಜಟಾಯು'ದಲ್ಲಿ ಪೌರಾಣಿಕ ಕಲ್ಪನೆಯ ಬಳಕೆ ಇದೆ. 'ಪೋಖರಣ' ಕಾದಂಬರಿಯಲ್ಲಿ ಪುರಾಣಸೃಷ್ಟಿಯ ಪ್ರಯತ್ನವಿದೆ. ಇಲ್ಲೆಲ್ಲ ಹಿಂದೂ ಪೌರಾಣಿಕ ಕಲ್ಪನೆಗಳ ಬಳಕೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ನನಗೆ ಒಂದು ಸಂಶಯ.... ಬುದ್ಧಿಸ್ಟ್ ತತ್ವದ ಹಿನ್ನೆಲೆಯಲ್ಲಿ ಇಂಥ ಪುರಾಣ ಸೃಷ್ಟಿ ಕ್ರಿಯೆಯನ್ನು ನಾವು ದಲಿತ ಸಾಹಿತ್ಯದಲ್ಲಿ ಕಾಣುತ್ತಿಲ್ಲವಲ್ಲ....?

ಕೇಶವ ಮೆಶ್ರಾಮ: ನೀವು ಕೇಳುತ್ತಿರುವುದು ತುಂಬ ಸರಿ.... ನೋಡಿ, ಬಾಬಾ ಸಾಹೇಬ ಅಂಬೇಡ್ಕರ್‌ರವರು ಬೌದ್ಧ ಧರ್ಮ ಸ್ವೀಕಾರ ಮಾಡಿದ ಮೇಲೆ ಅದಕ್ಕೆ ಸಂಬಂಧಪಟ್ಟ ಬದಲಾವಣೆಗಳನ್ನು ಜನತೆಯ ಜೀವನದಲ್ಲಿ ಅಳವಡಿಸಲು ಅವರಿಗೆ ಸಮಯವೇ ಸಿಗಲಿಲ್ಲ. ತುಂಬ ಸ್ವಲ್ಪ ಕಾಲದಲ್ಲಿಯೇ ಅವರು ನಿರ್ವಾಣ ಹೊಂದಿದರು. ಅಂಬೇಡ್ಕರ್‌ರವರ ನಂತರದ ನೇತಾರರು ಅವರು ಅಪೂರ್ಣವಾಗಿ ಬಿಟ್ಟು ಹೋದ ಈ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿತ್ತು. ಜನತೆಗೆ ಧರ್ಮ ಎಂದರೇನು ?–ಬೌದ್ಧ ಧರ್ಮ ಏನು ಹೇಳುತ್ತದೆ ?–ಅದು ಹಿಂದೂ ಧರ್ಮದಿಂದ ಹೇಗೆ ಭಿನ್ನವಾಗಿದೆ ?–ಈ ಎಲ್ಲ ಅಂಶಗಳನ್ನು ವಿವರಿಸಬೇಕಾಗಿತ್ತು. ಆದರೆ ಇಂಥ ಕೆಲಸ ನಡೆಯಲಿಲ್ಲ. ಇದರಿಂದ ಜನರು ಗೊಂದಲಗಳಲ್ಲಿ ಉಳಿದುಬಿಡುವಂತಾಯಿತು. ಹಿಂದೂ ಧರ್ಮ ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸಿದ ಅವರು ಇಂದು ಕೂಡ ಹಿಂದೂ ದೇವತೆಗಳಿಗೆ, ಹಿಂದೂ ನಂಬಿಕೆಗಳಿಗೆ ಕಟ್ಟು ಬಿದ್ದಿರುವುದನ್ನು ಕಾಣುತ್ತೇವೆ. ಹೀಗೆ ಈ ಜನ ಒಂದು ವಿಚಿತ್ರ ಹೈಬ್ರಿಡ್ ಧರ್ಮಾಚರಣೆಗಳಿಗೆ ಸಿಕ್ಕಿಹಾಕಿಕೊಂಡಿರುವುದನ್ನು ನಾವು ನೋಡುತ್ತೇವೆ.

ಇದಲ್ಲದೆ ಇನ್ನೊಂದು ಮುಖ್ಯವಾದ ಅಂಶವಿದೆ. ಬದುಕಿನ ತೀವ್ರತೆಯನ್ನು ಅನುಭವಿಸಲು ಮನುಷ್ಯನಿಗೆ ಉತ್ಸವ–ಸಮಾರಂಭಗಳು ಬೇಕು. ಇಂಥವು ಜೀವನದ Outlets. ನಾನು ಬರೀ ಥಿಯರಿ ಹೇಳುತ್ತಿಲ್ಲ. ನೇರವಾಗಿ ನನ್ನ ಜನವನ್ನು ನೋಡಿ ಈ ಮಾತು ಹೇಳುತ್ತಿದ್ದೇನೆ.... ಈ ಪರಿವರ್ತನೆಯ ಸಂದರ್ಭದಲ್ಲಿ ಜನಕ್ಕೆ ಉತ್ಸವ–ಆಚರಣೆ ಈ ಮುಂತಾದ ಜೀವನದ Outletಗಳು ದೊರೆಯಲಿಲ್ಲ. ಇದರಿಂದ ಅವರು ಒಂದು ರೀತಿಯ ಮಾನಸಿಕ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಹೀಗೆ ಇವರು ಒಂದು ರೀತಿಯಾಗಿ ಅಪರಿಚಿತವಾಗಿದ್ದ ಧರ್ಮವನ್ನು ಸ್ವೀಕರಿಸಿದ್ದಾರೆ. ಇದರಿಂದ

ಅವರ ಜೀವನ ವಿಧಾನದಲ್ಲಿ ಸಹಜ ಹೊರದಾರಿಗಳು ಅಳವಡದೆ ಒಂದು ರೀತಿಯ ಕುಸಿತ ಉಂಟಾಗಿದೆ....

ಪಾಟೀಲ: ಈ ಸಮಸ್ಯೆಗಳ ಪರಿಹಾರದ ಬಗ್ಗೆ ಯೋಚಿಸಿದ್ದೀರಾ ?

ಮೆಶ್ರಾಮ: ಪ್ರಯತ್ನಗಳು ನಡೆದಿವೆ ... ನಾವು ಬಹುತೇಕ ಶಿಕ್ಷಿತ ದಲಿತರು ಈ ಬಗ್ಗೆ ಯೋಚಿಸುತ್ತಿದ್ದೇವೆ. ನಮ್ಮ ತಾತ ಮುತ್ತಾಂದಿರು ಏನಾಗಿದ್ದರು, ಇಂದು ನಾವು ಏನಾಗಿದ್ದೇವೆ, ನಮ್ಮ ಬದುಕಿನ ವಿಧಾನಗಳಲ್ಲಿ ಉಂಟಾಗಿರುವ ಪರಿವರ್ತನೆಗಳೇನು ? ಎನ್ನುವ ಬಗ್ಗೆ ತೀವ್ರ ವಿಚಾರ ಏರ್ಪಡುತ್ತಿದೆ. ಬಾಬಾಸಾಹೇಬ ಅಂಬೇಡ್ಕರ್‌ರವರ ಚಿಂತನೆ ಮತ್ತು ಕ್ರಿಯಾಶೀಲತೆಯಿಂದಲೇ ನಮ್ಮ ಬದುಕಿನ ವಿಧಾನದಲ್ಲಿ ಮಾರ್ಪಾಡುಗಳಾಗಿವೆ ಎಂಬುದನ್ನು ನಾವು ಅರಿತಿದ್ದೇವೆ. ಅಂತೆಯೇ ಅವರ ಆದರ್ಶಗಳನ್ನು ಇನ್ನಷ್ಟು ವ್ಯಾಪಕವಾಗಿ ನಮ್ಮ ಮುಂದಿನ ಪೀಳಿಗೆಗೆ ಕೊಂಡೊಯ್ಯಲು ನಾವು ಕೆಲಸ ಮಾಡಬೇಕಾಗಿದೆ. ಈ ದಿಕ್ಕಿನಲ್ಲಿ ನಮ್ಮ ಅನೇಕ ಸಂಸ್ಥೆಗಳು ಮತ್ತು ಶಾಲೆಗಳು ಕೆಲಸ ಮಾಡುತ್ತಿವೆ. ಪುಸ್ತಕಗಳ ಪ್ರಕಟಣೆಯ ಮೂಲಕ ಅವರ ಚಿಂತನೆಗಳ ಪ್ರಸಾರ ನಡೆದಿದೆ. ಇದಲ್ಲದೆ ಭಿಕ್ಕುಗಳು ಇಂದು ಹಳ್ಳಿಯಿಂದ ಹಳ್ಳಿಗೆ ಹೋಗಿ ಬೌದ್ಧ ಧರ್ಮದ ಚಿಂತನೆಗಳನ್ನು, ತತ್ವಗಳನ್ನು ಪ್ರಚಾರಮಾಡುತ್ತಿದ್ದಾರೆ. ಇಡೀ ಜೀವನ ವ್ಯವಹಾರಗಳನ್ನು ಯಾವ ತರಹ ಬದಲಿಸಿಕೊಳ್ಳುವ ಪ್ರಯತ್ನಗಳು ನಡೆದಿವೆ ಎಂದರೆ –ನೋಡಿ ಈಗ ಶ್ರೀ ಪಾಟೀಲ ಎಂದು ಹೇಳುವ ಬದಲು ಆಯುಷ್ಮಾನ್ ಪಾಟೀಲ ಎಂತಲೂ, ಈಗ ಆಶೀರ್ವಾದಗಳು ಎಂದು ಹೇಳುವ ಬದಲು 'ಮಂಗಲ' ಎಂದು ಹೇಳುವ ವಿಧಾನಗಳನ್ನು ಬೆಳೆಸಿಕೊಳ್ಳುತ್ತಿದ್ದೇವೆ. ಶ್ರೀ, ಲಕ್ಷ್ಮೀ, ರಾಮ, ಆಶೀರ್ವಾದ–ಈ ಮುಂತಾದ ಎಲ್ಲ ಹಿಂದೂ ಧರ್ಮದ ಕಲ್ಪನೆಗಳನ್ನು ಕಳಚಿ ಹಾಕಿಕೊಳ್ಳುವ ಪ್ರಯತ್ನಗಳು ನಡೆದಿವೆ. ಇಂಥ ಒಂದು ಸಮಗ್ರ ಪ್ರಕ್ರಿಯೆ ಆರಂಭವಾಗಿದೆ. ಬಹುಶಃ ಇನ್ನೊಂದು ದಶಕದಲ್ಲಿ ಈ ನಿಟ್ಟಿನಲ್ಲಿ ಗುಣಾತ್ಮಕ ಸಾಧನೆ ಸಾಧ್ಯವಾಗಬಹುದೆಂದು ಭಾವಿಸುತ್ತೇನೆ.

ಪಾಟೀಲ: ಬೌದ್ಧ ಸಂಸ್ಕೃತಿಯ ಯಾವುದಾದರೂ ವಿಶೇಷ ಆಚರಣೆಗಳನ್ನು ಅಳವಡಿಸಿಕೊಂಡಿದ್ದೀರಾ ?

ಮೆಶ್ರಾಮ: ವಿಜಯದಶಮಿ (ದಸರಾ) ಉತ್ಸವದ ಆಚರಣೆ ಇದೆ. ಇದನ್ನು ಬಿಟ್ಟರೆ ಬುದ್ಧ ಜಯಂತಿ, ಅಂಬೇಡ್ಕರ್ ಜಯಂತಿ ಉತ್ಸವಗಳನ್ನು ಆಚರಿಸಲಾಗುತ್ತಿದೆ. ಇವಲ್ಲದೆ ನಮ್ಮ ನಾಯಕರ–ಉದಾಹರಣೆಗೆ ನಾಸಿಕ ಪ್ರದೇಶದ ದಾದಾಸಾಹೇಬ ಗಾಯಕವಾಡ, ನಾಗಪುರ ಪ್ರದೇಶದ ಖೊಬ್ರಗಡೆ–ಇವರು ಅಂಬೇಡ್ಕರ್‌ರವರ

ಅತ್ಯಂತ ನಿಷ್ಠ ಅನುಯಾಯಿಗಳು. ಇವರ ಜಯಂತಿ ಮತ್ತು ನಿರ್ವಾಣ ದಿನಗಳನ್ನು ಉತ್ಸವಗಳಾಗಿ ಆಚರಿಸಲಾಗುತ್ತಿದೆ. ಇವುಗಳಲ್ಲದೆ ಅನೇಕ ವ್ಯಾಖ್ಯಾನ ಮಾಲೆ, ಸಮಾವೇಶಗಳನ್ನು ಏರ್ಪಡಿಸಲಾಗುತ್ತಿದೆ. ಮೇಧಾವಿಗಳು ಈ ಸಮಾವೇಶಗಳಲ್ಲಿ ಭಾಗವಹಿಸಿ ಪ್ರವಚನ ನೀಡುತ್ತಾರೆ. ಈ ರೀತಿಯಾಗಿ ಕೆಲವು ಆಚರಣೆಗಳನ್ನು ಬೆಳೆಸಿಕೊಳ್ಳುವ ಪ್ರಯತ್ನಗಳು ನಡೆದಿವೆ.

ಪಾಟೀಲ: ನಾನು ತಿಳಿದುಕೊಂಡಿರುವಂತೆ ಮರಾಠೀ ದಲಿತ ಸಾಹಿತ್ಯವು ಕೇವಲ ಅಂಬೇಡ್ಕರ್‌ವಾದದಿಂದ ಪ್ರಭಾವಿತವಾಗಿದೆ ಮತ್ತು ಅದು ಪ್ರಯತ್ನಪೂರ್ವಕವಾಗಿ ಎನ್ನಿಸುವಷ್ಟರಮಟ್ಟಿಗೆ ಮಾರ್ಕ್ಸ್‌ನ ತತ್ವವನ್ನು ಹೊರಗೆ ಇಟ್ಟಿರುವಂತೆ ತೋರುತ್ತದೆ ... ಬುದ್ಧನ ತತ್ವಗಳಿಗೂ ಮಾರ್ಕ್ಸ್‌ನ ತತ್ವಗಳಿಗೂ ಇರುವ ಯಾವ ವೈರುದ್ಧ್ಯಗಳು ಇಂಥ ಪ್ರೇರಣೆಯನ್ನು ನೀಡಿವೆ ಎನ್ನುತ್ತೀರಿ ? ಬುದ್ಧನ ತತ್ವಗಳೆಂದರೆ ಮರಾಠೀ ದಲಿತರಿಗೆ ಬಾಬಾಸಾಹೇಬ ಅಂಬೇಡ್ಕರ್‌ರವರ ಮೂಲಕ ಬಂದವುಗಳು....

ನೆುಶ್ರಾಮ: ನೋಡಿ ಪಾಟೀಲ. ಬಾಬಾ ಸಾಹೇಬ ಅಂಬೇಡ್ಕರ್‌ರವರು ಆರ್ಥಿಕ-ರಾಜಕೀಯ ಶಾಸ್ತ್ರದ ವಿದ್ಯಾರ್ಥಿ. ಒಂದು ವೇಳೆ ಬುದ್ಧನ ತತ್ವಗಳು ಮತ್ತು ಮಾರ್ಕ್ಸ್‌ನ ಆರ್ಥಿಕ ಚಿಂತನೆಗಳು ಪೂರ್ತಿಯಾಗಿ ಹೊಂದಾಣಿಕೆಯಾಗುವಂತಿದ್ದರೆ ಮತ್ತು ಅವು ನಮ್ಮ ಜನತೆಯ ಮನೋಭಾವಕ್ಕೆ ಹೊಂದುವಂತಿದ್ದರೆ ಅಂಬೇಡ್ಕರ್‌ರವರು ಖಂಡಿತವಾಗಿ ಈ ದಿಕ್ಕಿನಲ್ಲಿ ಯೋಚಿಸಿರುತ್ತಿದ್ದರು. ಯಾಕೆಂದರೆ ಅವರಿಗೆ ಈ ಮೂರೂ ಅಂಶಗಳ ಬಗ್ಗೆ ಸಂಪೂರ್ಣವಾದ ಅರಿವು ಇದ್ದಿತು.... ನಮ್ಮ ಜನ, ನೋಡಿ, ಆಳವಾದ ಧಾರ್ಮಿಕ ಪ್ರವೃತ್ತಿ ಇರುವಂತಹ ಜನ. ಧರ್ಮದತ್ತಲಿನ ಅವರ ತುಡಿತ, ವೈಚಾರಿಕತೆಯತ್ತಲಿನ ಅವರ ತುಡಿತಕ್ಕಿಂತ ತುಂಬ ಬಲವಾದುದಾಗಿದೆ. ಮಾರ್ಕ್ಸ್‌ವಾದ ಜನರ ಆರ್ಥಿಕ ಪರಿಸ್ಥಿತಿಯ ಬದಲಾವಣೆ ಕುರಿತ ಚಿಂತನೆಯಾಗಿದೆ. ಆದರೆ ಜನರ ಮನಸ್ಸುಗಳಲ್ಲಿ ಬೇರೂರಿರುವ ಧರ್ಮ, ಜಾತಿ, ಉಪಜಾತಿಗಳ ಪ್ರಜ್ಞೆಯನ್ನು ಕುರಿತಾದ ಯಾವ ಧನಾತ್ಮಕ ಪರಿಹಾರಗಳೂ ಸೂಚಿತವಾಗಿಲ್ಲ. ಆದ್ದರಿಂದಲೇ ಅಂಬೇಡ್ಕರ್‌ರವರು 'ಮಾರ್ಕ್ಸ್‌ನ ಚಿಂತನೆ ಕೇವಲ ಶಿಕ್ಷಿತ ಜನತೆಯ ಚಿಂತನಾಕ್ರಮವಾಗಿದೆ' ಎನ್ನುತ್ತಿದ್ದರು. ಬಹುತೇಕ ಭಾರತೀಯರು ಅದರಲ್ಲಿಯೂ ದಲಿತ ಜನಾಂಗ ಅಶಿಕ್ಷಿತರಾಗಿದ್ದು ಅವರಿಗೆ ಅವರ ಬಡತನ, ಕಷ್ಟ, ಕಾರ್ಪಣ್ಯಗಳು ಎಷ್ಟು ನಿಜವಾಗಿದ್ದವೋ ಅವರ ಜಾತಿ, ಉಪಜಾತಿಗಳೂ ಅವರಿಗೆ ಅಷ್ಟೇ ನಿಜವಾಗಿದ್ದವು. ಆ ಜಾತಿ ಉಪಜಾತಿಗಳೊಂದಿಗೆ ಸಾಗಿಬಂದ ಪುರಾಣಕಲ್ಪನೆಗಳು, ಅವುಗಳ ಆಕರ್ಷಣೆಗಳು, ನಂಬಿಕೆಗಳು ಅವರಿಗೆ ಅಷ್ಟೇ ನಿಜವಾಗಿದ್ದವು. ಇಂಥದ್ದರಲ್ಲಿ ಅಂಬೇಡ್ಕರ್

ಅವರು ಬೆಳೆಸಿಕೊಂಡ ಚಿಂತನೆ ಕೇವಲ ಥಿಯರಿ ಆಗಿರದೆ ಅದು ಜೀವನ ವಿಧಾನವಾಗಿ ಕೂಡ-ಪ್ರಾಯೋಗಿಕ ನೆಲೆಯಲ್ಲಿ ಕೂಡ-ಯಶಸ್ವಿಯಾಗುವಂಥದಾಗಿತ್ತು. ಬಾಬಾ ಸಾಹೇಬರು ಜನರ ಮನಸ್ಸನ್ನು ಸದ್ಯಕ್ಕೆ ಹೇಗೆ ಮುಟ್ಟಬೇಕು, ಅದರಲ್ಲಿ ಬದಲಾವಣೆ ಗಳನ್ನು ನೆಡಲು ಎಂಥ ಬಿತ್ತು ಬಿತ್ತಬೇಕು ಎಂಬುದನ್ನು ಅರಿತವರಾಗಿದ್ದರು. ಅಂತಲೇ ಅವರು ಕಾರ್ಯಸಾಧುವಾಗುವಂತಹ ಒಂದು ಚಿಂತನೆಯನ್ನು ನೀಡಲು ಸಾಧ್ಯ ವಾಯಿತು. ಅವರು ಶಿಕ್ಷಣದ ಮಹತ್ವ ಅರಿತವರಾಗಿದ್ದರು. ಅವರು ನೀಡಿದ ಸಂದೇಶ ಹೀಗಿದೆ: Educate-Unite-Educate. ಶಿಕ್ಷಿತರಾಗಿ-ಶಿಕ್ಷಿತರು-ಒಟ್ಟು ಗೂಡಿರಿ. ಉಳಿದೆಲ್ಲರನ್ನೂ ಶಿಕ್ಷಿತರನ್ನಾಗಿಸಿ....

ಇನ್ನು ಮಾರ್ಕ್ಸಿಸ್ಟರೆಂದು ಹೇಳಿಕೊಳ್ಳುವವರು ಕೇವಲ ಮಾರ್ಕ್ಸ್‌ನ ಚಿಂತನೆ ಯಲ್ಲಿಯೇ ಮುಳುಗಿ ಹೋಗಿರುತ್ತಾರೆ. ಕೇವಲ ಅದನ್ನೇ ಪಠಿಸುತ್ತಿರುತ್ತಾರೆ. ಆದರೆ ಇಲ್ಲಿ ಇರುವ ಸನ್ನಿವೇಶ ಪರಿಸ್ಥಿತಿಗಳನ್ನು ಅರಿಯದೇ, ಅವು ಒಡ್ಡುತ್ತಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳದೇ ಕೇವಲ ಮಾರ್ಕ್ಸ್‌ನ ತತ್ವಗಳೆಂದು ಕುಳಿತರೆ ಯಾವ ಸಮಸ್ಯೆಗಳೂ ಪರಿಹಾರವಾಗಲಾರವು.

ಪಾಟೀಲ: ಅಂಬೇಡ್ಕರ್ ವಾದವನ್ನು ಅನುಸರಿಸಿ, ಚಾತುರ್ವರ್ಣದ ನಿವಾರಣೆಯ ನಂತರ ಕೊನೆಗೆ ಮಾರ್ಕ್ಸ್‌ನ ಆರ್ಥಿಕ ತತ್ವಚಿಂತನೆಗಳ ಅನ್ವಯ ಸಾಧ್ಯವಾಗಬಹು ದೆನ್ನುತ್ತೀರಾ ?

ಮೆಶ್ರಾಮ: ಇಲ್ಲ. ನಾನು ಹಾಗೆಂದುಕೊಳ್ಳುವುದಿಲ್ಲ. ಇದು ಅಷ್ಟು ಸರಳವಾದ ಕ್ರಿಯೆಯಾಗಿಲ್ಲ. ಚಾತುರ್ವರ್ಣವೆನ್ನುವುದು ತುಂಬ ವ್ಯಾಪ್ತವಾದ ವರ್ಗೀಕರಣ. ಇಂದು ಅವು ನಮಗೆ ಅಷ್ಟು ನಿಜವಾದವುಗಳು ಆಗಿಲ್ಲ. ನಮಗೆ ಈ ಚಾತುರ್ವರ್ಣ ಗಳಿಗಿಂತ ಹೆಚ್ಚು ನಿಜವಾದವುಗಳೆಂದರೆ ಜಾತಿ ಮತ್ತು ಉಪಜಾತಿಗಳು ಮತ್ತು ಉಪ ಪಂಗಡಗಳು. ಉದಾಹರಣೆಗಾಗಿ ಮಹಾರಾಷ್ಟ್ರದಲ್ಲಿನ ಆಳುವ ಮರಾಠಾ ಜಾತಿ ಯನ್ನೇ ತೆಗೆದುಕೊಳ್ಳಿರಿ. ಇದರಲ್ಲಿ ಬರುವವರು ಪಾಟೀಲ, ಚವ್ಹಾಣ ಮುಂತಾ ದವರು. ಈ ಜಾತಿಯಲ್ಲಿ ಪುನಃ ನಾಲ್ಕೈದು ಅಥವಾ ಹೆಚ್ಚು ಉಪಜಾತಿಗಳಿವೆ. ನೇವಾ ಪಾಟೀಲರಿದ್ದಾರೆ, ಲಿಂಗಾಯತರಿದ್ದಾರೆ . ಈ ನೇವಾ ಪಾಟೀಲರು ಉಳಿದ ವರಿಗಿಂತ ಕನಿಷ್ಠರಂತೆ.... ದಲಿತರಲ್ಲಿ ಕೂಡ ಮಹಾರರಿದ್ದಾರೆ, ಮಾಂಗೇವಾರರಿದ್ದಾರೆ, ಮಾತಂಗರಿದ್ದಾರೆ... ಹೀಗೆ ನಮ್ಮ ಜನತೆ ಸಾವಿರಾರು ಪೀಳಿಗೆಗಳ ಕಾಲದಿಂದಲೂ, ಜಾತಿ ಉಪಜಾತಿಗಳಲ್ಲಿ ತುಂಡು ತುಂಡುಗಳಾಗಿ ಹೋಗಿದ್ದಾರೆ. ಈ ಒಡಕು ನಮ್ಮ ರಕ್ತದಲ್ಲಿಯೇ ಬೆರೆತುಹೋಗಿದೆ. ಆದ್ದರಿಂದಲೇ, ಯಾವುದೇ ಹೊಸ ವಿಚಾರ

ಬಂದರೆ, ಜನ ತಮ್ಮ ತಮ್ಮ ಜಾತಿ ಉಪಜಾತಿಗಳ ಹಿತಾಸಕ್ತಿಯ ನೆಲೆಯಲ್ಲಿ ನಿಂತು ಸಂಶಯದಿಂದ ನೋಡತೊಡಗುತ್ತಾರೆ. ಹೀಗಾಗಿ ಯಾವುದೇ ಹೊಸ ವಿಚಾರವು ಜನತೆಗೆ ಸುಲಭವಾಗಿ ಸ್ವೀಕಾರಾರ್ಹ ಎನ್ನಿಸುವುದಿಲ್ಲ ನನ್ನ 'ಜಟಾಯು' ಕಾದಂಬರಿಯಲ್ಲಿ ಮಹಾರ ಉಪಜಾತಿಗೆ ಸೇರಿದ ದಲಿತ ನಾಯಕನು ಮಾಂಗ್ ಉಪಜಾತಿಯ ಶಿಕ್ಷಿತ ಯುವಕನಿಗೆ ಸಹಾಯ ಹಸ್ತ ನೀಡುವುದೇ ಇಲ್ಲ. ಅಷ್ಟೇ ಅಲ್ಲ. ಮಹಾರ ಉಪಜಾತಿಗೆ ಸೇರಿದ ದಲಿತರ ಈ ಹುಡುಗನ ಮೇಲೆ ಆಕ್ರಮಣ ನಡೆಸುತ್ತಾರೆ. ಅವನ ದುಡಿಮೆಯ ಆಧಾರವಾದ ಸೈಕಲ್‌ರಿಕ್ಷಾವನ್ನು ಮುರಿದುಹಾಕುತ್ತಾರೆ. ಹೀಗಿದೆ ನಮ್ಮ ಒಡಕಿನ ಕಥೆ .. ಮಾರ್ಕ್ಸಿಸ್ಮ್‌ನ ಅನ್ವಯ ಅಂಥ ಸರಳಕ್ರಿಯೆ ಎಂತಾಗಿದ್ದರೆ, ಅದು ಸರಳವಾಗಿ ನೆರವೇರುವುದು ಎನ್ನುವುದಾಗಿದ್ದರೆ ಬಾಬಾ ಸಾಹೇಬ್ ಈ ಬಗ್ಗೆ ಖಂಡಿತವಾಗಿ ಯೋಚಿಸಿರುತ್ತಿದ್ದರು.

ಪಾಟೀಲ: ಹಾಗಾದರೆ, ಕೇವಲ ಸಾಮಾಜಿಕ ಸ್ಥಾನಮಾನ, ಧಾರ್ಮಿಕ ಬದಲಾವಣೆಗಳ ಚಿಂತನೆಗಳು ಸಮಗ್ರವೆನ್ನುತ್ತೀರಾ ? ಆರ್ಥಿಕ, ಭೌತಿಕ ಏಳ್ಗೆ ಅಷ್ಟು ಮುಖ್ಯವಲ್ಲ ಎಂದು ನಿಮ್ಮ ಭಾವನೆಯೆ ?

ಮೆಶ್ರಾಮ: ಇಲ್ಲ, ಇಲ್ಲ. ಹಾಗಾಗದು. ಜನತೆ ಇಂದು ತಮ್ಮ ಹಕ್ಕುಗಳ ಬಗ್ಗೆ ಕೂಡ ಎಚ್ಚೆತ್ತಿದ್ದಾರಲ್ಲವೆ ? ಮೀಸಲಾತಿಯ ಬಗ್ಗೆ ತಿಳುವಳಿಕೆ ಬಂದಿದೆ. ಮೀಸಲಾತಿಯ ಅನ್ವಯದ ಬಗ್ಗೆ, ಅದರಲ್ಲಿ ನಡೆಯುವ ಮೋಸದ ಬಗ್ಗೆ ಎಚ್ಚೆತ್ತಿದ್ದಾರೆ. ನಮ್ಮದು ಪ್ರಜಾಪ್ರಭುತ್ವದ ಆಡಳಿತವಾದರೂ ಅದು ಅಧಿಕಾರಶಾಹೀ ಪ್ರಜಾಪ್ರಭುತ್ವ-ಈ ಬಗ್ಗೆ ಆ ಮೂಲಕ ನಡೆಯುವ ಮೋಸದ ಬಗ್ಗೆ ಜನಕ್ಕೆ ಎಚ್ಚರ ಮೂಡುತ್ತಿದೆ. ....ಇಂದು ನಮ್ಮ ಯುವಕರು ಶಿಕ್ಷಿತರಾಗುತ್ತಿದ್ದಾರೆ. ತಮ್ಮ ಪಾಲನ್ನು, ಹಕ್ಕನ್ನು ಕೇಳುತ್ತಿದ್ದಾರೆ. ತಮ್ಮ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುತ್ತಿದ್ದಾರೆ. ಇಂದು ಅನೇಕ ದಲಿತರು ಒಳ್ಳೆಯ ಡಾಕ್ಟರುಗಳಾಗಿ, ಇಂಜಿನಿಯರುಗಳಾಗಿ, ಕಲಾವಿದರಾಗಿ, ಸಂಗೀತಗಾರರಾಗಿ ಸಮಾಜದಲ್ಲಿ ಸ್ಥಾನಮಾನ ಗಳಿಸುತ್ತಿದ್ದಾರೆ. ದಲಿತರಲ್ಲಿ ಒಂದು ಸಮಗ್ರವಾದ ಸಾಂಸ್ಕೃತಿಕ ಬೆಳವಣಿಗೆ ಸಾಧ್ಯವಾಗುತ್ತಿದೆ. ಅಂಬೇಡ್ಕರ್‌ರವರು ಒಂದು ಕಡೆ ಹೇಳುತ್ತಾರೆ: Man has a mind. Man has a Stomach. Stomach has hunger. ಹೊಟ್ಟೆಯ ಹಸಿವನ್ನು ತೃಪ್ತಿಪಡಿಸಿ ಆದನಂತರ ಸುಮ್ಮನುಳಿಯಲಾಗುವುದಿಲ್ಲ. ಮನಸ್ಸಿನ ಹಸಿವೆ ಮುಂದೆ ಬರುತ್ತದೆ. ಈ ಮನಸ್ಸಿನ ಹಸಿವೆಯ ಸಮಸ್ಯೆಗಳನ್ನು ಯೋಚಿಸದ ಯಾವುದೇ ಸಿದ್ಧಾಂತ ಪರಿಪೂರ್ಣವಾಗಲಾರದು. ಈ ಮನಸಿನ ಹಸಿವಿನ ಸಮಸ್ಯೆಗೆ ಅಂಬೇಡ್ಕರ್ ಅವರು ಬೌದ್ಧ ಧರ್ಮವು ಪರಿಹಾರ ಒದಗಿಸಬಲ್ಲದು ಎಂದು ಕಂಡುಕೊಂಡರು. ಅಂಬೇಡಕರ್

ಅವರು ದಲಿತರ ಉದ್ಧಾರದ ಬಗ್ಗೆ ಒಂದು ಸಮಗ್ರವಾದ ಕಲ್ಪನೆ ಹೊಂದಿದ್ದರು. ಅವರು ಆರ್ಥಿಕ ಬೆಳವಣಿಗೆಯ ಮೂಲಕ ಸಾಂಸ್ಕೃತಿಕ ಉತ್ಕರ್ಷದ ತನಕದ ಸಂಪೂರ್ಣ ದಾರಿಯ ಬಗ್ಗೆ ಯೋಚಿಸಿದ್ದರು. ಅಂಬೇಡಕರ್ ಅವರ ನಂತರ ನಮ್ಮದು ಮೊದಲ ಅಥವಾ ಎರಡನೆಯ ಪೀಳಿಗೆಯಾಗಿದೆ. ಇಂದು ಈ ಪೀಳಿಗೆಯವರಿಗೆ ಒಳ್ಳೆಯ ಸಂಬಳಗಳು ದೊರೆಯುತ್ತಿವೆ, ವಾಸಕ್ಕೆ ಯೋಗ್ಯವಾದ ಮನೆಗಳು ದೊರಕುತ್ತಿವೆ, ಬದುಕಲು ತಕ್ಕ ಪರಿಸರ ದೊರೆಯುತ್ತಿದೆ. ಇಂಥ ಬದುಕಿನ ಅನುಭವ ಮೊಟ್ಟ ಮೊದಲ ಬಾರಿಗೆ ಅವರಿಗೆ ದೊರೆಯುತ್ತಿದೆ. ಇದೇ ರೀತಿಯ ಬೆಳವಣಿಗೆ ಕನಿಷ್ಠ ಇನ್ನೊಂದು ಕಾಲು ಶತಮಾನದಷ್ಟು ಕಾಲ ಅಬಾಧಿತವಾಗಿ ದೊರೆತರೆ ಒಂದು ಪರಂಪರೆ ನಿರ್ಮಿಸಲು ಸಾಧ್ಯವಾಗುತ್ತದೆ. ಆಗ ಮಾರ್ಕ್ಸ್‌ನ ಸಿದ್ಧಾಂತದಂತಹ ಬೌದ್ಧಿಕ ಚಿಂತನೆಗಳಿಗೆ ಸ್ಪಂದಿಸಲು ಸಾಧ್ಯತೆ ಉಂಟಾಗಬಹುದು....

ಪಾಟೀಲ: ಈ ಎಲ್ಲ ಹಿನ್ನೆಲೆಯಲ್ಲಿ ಮೂಡಿ ಬಂದ ಮರಾಠೀ ದಲಿತ ಕಾವ್ಯ, ಶಿಷ್ಟ ಕಾವ್ಯ ಪರಂಪರೆಯೊಂದಿಗೆ ಸ್ಥಾಪಿಸಿಕೊಳ್ಳುವ ಸಂಬಂಧ ಎಂಥದು ? ಅದರ ವೈಶಿಷ್ಟ್ಯವನ್ನು ಹೇಗೆ ಗುರುತಿಸಿಕೊಳ್ಳುತ್ತೀರಿ ?

ಮೆಶ್ರಾಮ: Our Poerty is rich !... ಆರಂಭದಲ್ಲಿ ನಮ್ಮ ಕಾವ್ಯ ಕೇವಲ ಪ್ರತಿಭಟನೆಯ ಕಾವ್ಯವಾಗಿತ್ತು. ನಮ್ಮ ಸಿಟ್ಟನ್ನು ಕಾರಿಕೊಳ್ಳುವ ಮಾಧ್ಯಮವಾಗಿತ್ತು. ಆಗ ಅದು ಅತಿ ಸದ್ದು ಮಾಡುವ, ಘೋಷಣೆಗಳು ತುಂಬಿದ wordy ಆದ ಒಂದು ರೀತಿಯ ಪ್ರಚಾರೀ ಸಾಹಿತ್ಯವೆನಿಸುತ್ತಿತ್ತು. ಆದರೆ ನಂತರ ದಲಿತ ಕವಿಗಳು ಆತ್ಮ ಪರಿವೀಕ್ಷಣೆಯ ಮಾರ್ಗವನ್ನು ಒಳಗೊಳ್ಳತೊಡಗಿದರು.... ಆರಂಭದ ಕಾವ್ಯ ನೋಡಿ ನೋವಿನ ಚೀರಾಟವಾಗಿತ್ತು.... ಆದರೆ ಕ್ರಮೇಣ ದಲಿತ ಜನಾಂಗದಲ್ಲಿ ಶಿಕ್ಷಿತರ ಸಂಖ್ಯೆ ಹೆಚ್ಚುತ್ತಹೋದಂತೆ ಮತ್ತು ಅದೂ ಅಲ್ಲದೇ ದಲಿತ ಯುವಕ ಅಥವಾ ಬೌದ್ಧ ಯುವಕ ನಗರ ಪ್ರಜ್ಞೆಗೆ ಪಕ್ಕಾಗುತ್ತ ಬಂದಂತೆ–ಈ ಕವಿಗಳು ಎದುರಿಸುವ ಸಮಸ್ಯೆಗಳು ಮತ್ತು ಇತರ ವರ್ಗದ ಯುವಕರು ಎದುರಿಸುವ ಸಮಸ್ಯೆಗಳು ಕ್ರಮೇಣ ಒಂದೇ ಆಗತೊಡಗಿದವು. ಹೀಗೆ ಸಾಮಾನ್ಯ ಸಮಸ್ಯೆಗಳು ಮತ್ತು ಇವುಗಳ ಹಿನ್ನೆಲೆಯಲ್ಲಿರುವ ಹೆಪ್ಪುಗಟ್ಟಿದ ನೋವಿನ ನೆನಪು ತುಂಬಿರುವ ಭೂತಕಾಲ ಇವು ದಲಿತಕಾವ್ಯಕ್ಕೆ ಶ್ರೀಮಂತಿಕೆ ಮತ್ತು ವೈಶಿಷ್ಟ್ಯವನ್ನು ನೀಡಿವೆ.

ಇನ್ನೊಂದು ಅತಿ ಸೂಕ್ಷ್ಮ ಸಮಸ್ಯೆ ಎಂದರೆ ನೋಡಿ ಪಾಟೀಲ, ಮಹಾರಾಷ್ಟ್ರದಲ್ಲಿ–ಕೇವಲ ಮಹಾರಾಷ್ಟ್ರದಲ್ಲಿಯೇ ಏಕೆ–ಇಡೀ ಭಾರತೀಯ ಭಾಷಾಕಾವ್ಯ ಪರಂಪರೆ ಸಂಸ್ಕೃತ ಕಾವ್ಯ ಪರಂಪರೆಯಿಂದ ಪೋಷಿತವಾದದ್ದು, ನಿಯಂತ್ರಿತವಾದದ್ದು. ಇದು

ನಮ್ಮಲ್ಲಿನ ಶಿಷ್ಟ ಕಾವ್ಯ ಪರಂಪರೆ. ಇಂಥ ಕಾವ್ಯ ಮೀಮಾಂಸೆಯ ಹಿನ್ನೆಲೆಯ ಸೌಂದರ್ಯಮೀಮಾಂಸೆ 'ಸತ್ಯಂ-ಶಿವಂ-ಸುಂದರಂ' ತತ್ವವನ್ನು ಹೇಳುತ್ತದೆ. ಆದರೆ ಯಾವುದು ಸತ್ಯ ?.... ಅವರು ತಮ್ಮದೇ ಒಂದು ಸೂತ್ರ ರಚಿಸಿಕೊಂಡಿದ್ದಾರೆ. ಆದರೆ ಸಂಪೂರ್ಣವಾಗಿ ಬೇರೊಂದು ಪರಿಸ್ಥಿತಿಯಲ್ಲಿ ಬದುಕುವ ಕೆಳವರ್ಗದ ಜನಾಂಗಕ್ಕೆ ಇವರ ಸೂತ್ರ ಅಪರಿಗ್ರಾಹ್ಯವಾಗುತ್ತದೆ. ಇವರ ಸತ್ಯ ಬೇರೆಯೇ ಇದೆ. ಇಲ್ಲಿ ನಮ್ಮ ತಾಯಂದಿರು, ಅಕ್ಕ ತಂಗಿಯರು, ಪಾಟೀಲ-ಪಟವಾರಿಗಳ ಮನೆಗಳಲ್ಲಿ ದೇಹ ಸವೆಸುತ್ತಾರೆ. ಬರೀ ಶ್ರಮ ಮತ್ತು ಹಣಕಾಸಿನ ಶೋಷಣೆಗೆ ಮಾತ್ರ ಇವರು ಪಕ್ಕಾಗಿರುವುದಿಲ್ಲ. ಇವರ ಶೀಲ ಕೂಡ ಸೂರೆಗೊಂಡಿರುತ್ತದೆ. ಇಂಥವರ ಸತ್ಯ ಖಂಡಿತವಾಗಿಯೂ ಬೇರೆಯೇ ಆಗಿರುತ್ತದೆ. ....ಇತ್ತೀಚೆಗೆ ಈ ಜನಾಂಗ ಜಗತ್ತಿನ ಎಲ್ಲ ಶೋಷಿತ ಜನಾಂಗದೊಂದಿಗೆ ಗುರುತಿಸಿಕೊಳ್ಳುತ್ತಿದೆ. ಭಾರತದ ಇತರ ರಾಜ್ಯಗಳ ದಲಿತರಲ್ಲದೆ ವರ್ಣಭೇದ ನೀತಿಯ ಶೋಷಣೆಗೆ ಒಳಗಾದ ನೀಗ್ರೋ ಜನಾಂಗದ ಸತ್ಯ ಕೂಡ ಇವರ ಸತ್ಯವನ್ನು ಹೋಲುತ್ತದೆ. ಹೀಗೆ ದಲಿತಕಾವ್ಯ ವೈವಿಧ್ಯಮಯವಾದ ಸಾಂಸ್ಕೃತಿಕ ಅನುಭವ, ನೆನಪುಗಳನ್ನು ಒಳಗೊಳ್ಳುತ್ತ ಅನೇಕ ರೂಪ ವೈವಿಧ್ಯಗಳನ್ನು ಆಯಾಮಗಳನ್ನು ಪಡೆದುಕೊಳ್ಳುತ್ತಿದೆ.

ಇದು 'ಸರ್ಕ್ಯಾಸ್ಮ್'ನ್ನು ಅತ್ಯಂತ ಪ್ರಬುದ್ಧವಾಗಿ ಬಳಸುತ್ತಿರುವುದನ್ನು ಕಾಣಬಹುದು. ದುಡಿಯದೆ ಕೂತುಣ್ಣುವ ವಿಶ್ರಾಂತ ಜನಾಂಗ ಮತ್ತು ಅವರ ಕಾವ್ಯವನ್ನು ಗೇಲಿಗೆ ಒಳಪಡಿಸುವ ಒಂದು ಕವಿತೆಯ ಕೆಲವು ಸಾಲುಗಳು ಹೀಗಿವೆ ನೋಡಿ: "ನಾನು ಅವನನ್ನು ಪತ್ರ ಬರೆದು ಹರಟೆ ಹೊಡೆಯಲು ಕರೆದರೆ ಅಯ್ಯೋ! ಈ ದೂತ ದುಃಖದ ಸುದ್ದಿ ತಂದಿದ್ದಾನೆ.. ಅವನು ಕಾಲಿಗೆ 'ಮೆಹಂದೀ' ಹಚ್ಚಿಕೊಂಡಿದ್ದು ಇಂದು ಅಲುಗಾಡಲಾರನು!" ಇನ್ನೊಂದು ಕಾವ್ಯದಲ್ಲಿ ನಮ್ಮ ರಾಷ್ಟ್ರದ ಗೃಹಾಡಳಿತವು ಗೇಲಿಗೆ ಒಳಗಾಗುತ್ತದೆ:"ಈ ರಾಷ್ಟ್ರದ ಗೃಹಮಂತ್ರಿ ಹಿಜಡಾ ಆಗಿರಬೇಕು-ಪೋಲೀಸ್ ಇಲಾಖೆಯ ಮುಖ್ಯಸ್ಥ ಕೂಡ ಇಂಥ ಹಿಜಡಾ ವ್ಯಕ್ತಿಯೇ ಆಗಿರಬೇಕು" ಎಂದು ಹೇಳುತ್ತದದು.

ಇದಲ್ಲದೆ ದಲಿತ ಕಾವ್ಯದಲ್ಲಿ ಹಿಂದೂ ಪೌರಾಣಿಕ ಕಲ್ಪನೆಗಳು ಹೊಸ ವಿಶ್ಲೇಷಣೆಗೆ ಒಳಪಡುತ್ತವೆ.... ಹೀಗೆ ದಲಿತ ಕಾವ್ಯವು ವಿಭಿನ್ನ ಆಸಕ್ತಿಗಳನ್ನು ರೂಪ ವೈವಿಧ್ಯಗಳನ್ನು ತೋರುತ್ತಿದೆ.

ಪಾಟೀಲ: ಶಿಷ್ಟ ಕಾವ್ಯ ಪರಂಪರೆಯ ಕಾವ್ಯಮೀಮಾಂಸೆ ರೂಪಿಸಿರುವ ವಿಮರ್ಶಾ ತತ್ವಗಳನ್ನು ದಲಿತಕಾವ್ಯದ ವಿಮರ್ಶೆಗೆ ಬಳಸಲಾಗದು. ದಲಿತ ಕಾವ್ಯವು ಒಂದು

ಭಿನ್ನವಾದ ವೈಶಿಷ್ಟ್ಯದ ನೆಲೆಯಿಂದ ಹುಟ್ಟಿಬಂದಿದ್ದು ಅದರ ವಿಮರ್ಶೆಗೆ ಬೇರೆ ಮಾನದಂಡಗಳು ರೂಪುಗೊಳ್ಳಬೇಕು ಎನ್ನುವ ವಾದವಿದೆ. ದಲಿತ ಕಾವ್ಯ ಚಳುವಳಿಯು ಈ ಹಿನ್ನೆಲೆಯಲ್ಲಿ ಹೊಸ ಕಾವ್ಯಮೀಮಾಂಸೆಯನ್ನೇನಾದರೂ ಸೃಷ್ಟಿಸುತ್ತಿದೆಯೆ ?

ಮೆಶ್ರಾಮ: ಹೊಸ ಕಾವ್ಯ ಮೀಮಾಂಸೆಯ ರಚನೆಯ ಪ್ರಕ್ರಿಯೆ ನಿಜವಾಗಿಯೂ ಆರಂಭಗೊಂಡಿದೆ. ಆದರೆ ಇನ್ನೂ ಯಾವ ನಿರ್ದಿಷ್ಟ ಧನಾತ್ಮಕ ತತ್ವಗಳು, ಮಾನ ದಂಡಗಳು ರೂಪುಗೊಂಡಿಲ್ಲ. ಈಗ ನಡೆದಿರುವ ಪ್ರಕ್ರಿಯೆ ಎಂದರೆ ಇದುವರೆಗಿನ ಸಂಸ್ಕೃತ ಪ್ರಣೀತ ಕಾವ್ಯ ಮೀಮಾಂಸೆಯ ತತ್ವಗಳ ತಾರ್ಕಿಕ ತಿರಸ್ಕಾರ. ಇದುವರೆಗೆ ಆ ಕಾವ್ಯಮೀಮಾಂಸೆ ಹೇಳುತ್ತಿದ್ದ ಇದು ಸುಂದರ–ಅದು ಅಸುಂದರ–ಇದು ಸೌಂದರ್ಯಪ್ರಜ್ಞೆ–ಅದು ಅಲ್ಲ ಮುಂತಾದ ಕಲ್ಪನೆಗಳು ಏನಿದ್ದವೋ ಅವುಗಳನ್ನು ಪ್ರಶ್ನಿಸುವ, ತಿರಸ್ಕರಿಸುವ, ಪರಿಷ್ಕರಿಸುವ ಪ್ರಕ್ರಿಯೆ ಆರಂಭಗೊಂಡಿದೆ. ಯಾಕೆಂದರೆ ನಮ್ಮ ಸತ್ಯ ಸುಂದರಗಳು ಬೇರೆಯಾಗಿಯೇ ಉಳಿದಿವೆಯಲ್ಲ! ನಮ್ಮ ಸತ್ಯ ನಿಮಗೆ ಶಿವೇತರವಾದರೆ ನಿಮ್ಮ ಸೌಂದರ್ಯ ಹೇಗೆ ಸುಂದರ ಎನಿಸಬಲ್ಲದು ? ಪ್ರಾಣಿ ಯೊಂದನ್ನು ವಧಿಸಿದಾಗ, ಜನ ಪಾತ್ರೆಗಳಲ್ಲಿ ಅದರ ರಕ್ತ ಹಿಡಿದಿಟ್ಟುಕೊಂಡು–ಅದಕ್ಕೆ ಉಪ್ಪುಹಾಕಿ ಬೇಯಿಸಿ ಅದನ್ನು ತಿನ್ನುತ್ತಾರೆಂದು ಇಟ್ಟುಕೊಳ್ಳೋಣ. ಇದು ಶಿವವೋ ಶಿವೇತರವೋ ? ಇದು ಈ ಜನರ ಬದುಕಿನ ವಿಧಾನವಾಗಿದ್ದು ಸತ್ಯ ವಂತೂ ಹೌದೇ ಹೌದು. ಹೀಗೆ ಮಾಡದಿದ್ದರೆ ಈ ಬಡಜನಕ್ಕೆ ಹೊಟ್ಟೆಗೆ ಸಿಕ್ಕದೇ ಹಸಿದು ಸಾಯಬೇಕಾಗುತ್ತದೆ.... ನಿಮ್ಮ ಶುಚಿ–ಅಶುಚಿಗಳು, ಶಿವ–ಸುಂದರಗಳು ನಮಗೆ ನಿರುಪಯುಕ್ತ....

ಪಾಟೀಲ: ನೀವು ವಿಮರ್ಶಕರೂ ಆಗಿದ್ದೀರಿ. ನೀವು ಸಾಹಿತ್ಯಕೃತಿಯೊಂದನ್ನು ವಿಮರ್ಶಿಸುವಾಗ ಇಟ್ಟುಕೊಳ್ಳುವ ಮಾನದಂಡಗಳೇನು ?

ಮೆಶ್ರಾಮ: ಮೂಲಭೂತವಾಗಿ ನಾನು ಕೃತಿಯೊಂದನ್ನು ಪ್ರವೇಶಿಸಲು ಹೊರಡು ವುದು elitist ರೀತಿಯಿಂದಲ್ಲ. ವಿಮರ್ಶಕ ದಂತಗೋಪುರ ಒಂದರಲ್ಲಿ ಕುಳಿತು ಉಳಿದ ಜನವೆಲ್ಲ ಅಜ್ಞಾನಿಗಳು, ಸಾಹಿತ್ಯಕೃತಿ ಅವರಿಗೇನೂ ಅರ್ಥವಾಗದು ಎನ್ನುವ ಏರು ಹುಬ್ಬಿನ ನಿಲುವಿನಿಂದ ಹೊರಡಲಾಗದು. ವಿಮರ್ಶಕನಿಗೆ ಒಂದು ಸಾಂಸ್ಕೃತಿಕ ಜವಾ ಬ್ದಾರಿ ಕೂಡ ಇರುತ್ತದೆ.... ನನಗನಿಸುವಂತೆ ಒಳ್ಳೆಯ ವಿಮರ್ಶೆ ಕನಿಷ್ಠ ವಿದ್ಯಾರ್ಹತೆ ಯುಳ್ಳವನನ್ನೂ ತಲುಪುವಂಥದು, ಉದ್ದೀಪನಗೊಳಿಸುವಂಥದು ಆಗಿರಬೇಕು. ಅದು ಕೃತಿಯೊಂದನ್ನು ಓದಿ ಪಡೆಯುವ ಆನಂದದ ಮಾರ್ಗ ತೋರುವಂಥದಾಗಿರ

ಬೇಕು. ಇದಕ್ಕೆ ಬೇರೆ ಬೇರೆ ಮಾರ್ಗಗಳನ್ನು ಅನುಸರಿಸಬೇಕಾಗಬಹುದು. ಕೆಲವೊಮ್ಮೆ ಕೃತಿಯಲ್ಲಿನ ಸಂಕೇತಗಳನ್ನು ವಿವರಿಸಬೇಕಾಗುತ್ತದೆ. ಕೆಲವೊಮ್ಮೆ ಬೇರೆ ಬೇರೆ ಲೇಖಕರ ಕೃತಿಗಳ ತುಲನಾತ್ಮಕ ಅಧ್ಯಯನದ ಸಹಾಯ ಬೇಕಾಗುತ್ತದೆ. ಇನ್ನು ಕೆಲವು ಸಲ ಬೇರೆ ಬೇರೆ ಭಾಷೆಗಳ ಕೃತಿಗಳ ತುಲನಾತ್ಮಕ ಅಧ್ಯಯನದ ಬಳಕೆಯಾಗ ಬೇಕಾಗುತ್ತದೆ. ಇವೆಲ್ಲವುಗಳ ಬಳಕೆಯಿಂದ ಬೇರೆ ಬೇರೆ ಹಂತದಲ್ಲಿರುವ ಸಮು ದಾಯವನ್ನು ಸಮಗ್ರವಾಗಿ ತಲುಪಲು ಸಾಧ್ಯವಾಗಬಹುದು. ಇದಲ್ಲದೆ 50ರ ದಶಕದಲ್ಲಿರುವ ನನಗೆ ಒಂದು ವಿಶೇಷ ಜವಾಬ್ದಾರಿ ಕೂಡ ಇದೆ.... ಇತ್ತೀಚೆಗೆ ಬರು ತ್ತಿರುವ ದಲಿತ ಸಾಹಿತ್ಯ ಕೃತಿಗಳನ್ನು ಪರಿಚಯಿಸುವ, ಅವುಗಳ ನಿರಪೇಕ್ಷ ಅಧ್ಯ ಯನಕ್ಕೆ ಯೋಗ್ಯವಾದ ಒಂದು ವಾತಾವರಣ ನಿರ್ಮಿಸುವ ಜವಾಬ್ದಾರಿ ನನ್ನಂಥವರ ಮೇಲಿದೆ ಎಂದು ನಾನು ಭಾವಿಸುತ್ತೇನೆ....

ಪಾಟೀಲ: ದಲಿತೇತರ ಸಾಹಿತ್ಯ ಕುರಿತು ನಿಮ್ಮ ಅನಿಸಿಕೆ–ಪ್ರತಿಕ್ರಿಯೆ....

ಮೆಶ್ರಾಮ: ನೋಡಿ ಪಾಟೀಲ. ನಾನು ಮರಾಠೀ ಸಾಹಿತ್ಯದ ವಿದ್ಯಾರ್ಥಿ. ಕಾಲೇಜಿನಲ್ಲಿ ಮರಾಠೀ ಪ್ರೊಫೆಸರ್.... ನಾನು ಇಡೀ ಮರಾಠೀ ಸಾಹಿತ್ಯದ ಬಗ್ಗೆ ತೆರೆದ ಮನಸ್ಸಿನವನಾಗಿದ್ದೇನೆ. ದಲಿತೇತರ ಸಾಹಿತ್ಯವನ್ನು ಕೂಡ ನಾನು ತುಂಬ ಪ್ರೀತಿಯಿಂದ ಓದಿ ಸ್ಪಂದಿಸಬಲ್ಲೆ.... ಆದರೆ ನನಗೆ ಒಂದು ಅರಕೆ ಮಾತ್ರ ತುಂಬ ಸ್ಪಷ್ಟವಾಗಿ ತೋರುತ್ತಿದೆ. ಅದೇಂದರೆ, ಇಡೀ ಮರಾಠೀ ಜನಾಂಗವನ್ನು, ಅದರ ಸಂಸ್ಕೃತಿಯನ್ನು ಪ್ರತಿನಿಧಿಸಬಲ್ಲಂತಹ–ಮೇಜರ್ ಎನ್ನಬಹುದಾದಂತಹ ಸಮಕಾಲೀನ ಮರಾಠೀ ಲೇಖಕ ನಮ್ಮಲ್ಲಿ ಇಲ್ಲ–ದಲಿತ, ದಲಿತೇತರ ಎರಡು ವರ್ಗದ ಲೇಖಕರಲ್ಲಿಯೂ.... ●

ಇಲ್ಲಿ ಜನತೆ ತಿಳಿಯದ ಭಾಷೆಯಾದ ಸಂಸ್ಕೃತದಲ್ಲಿ ಸೃಷ್ಟಿಯಾದುದರ ನೆರಳಿನಂತೆ ಕನ್ನಡ ಸಾಹಿತ್ಯ ತನ್ನನ್ನು ರೂಪಿಸಿಕೊಂಡು ಬಂತು. ಆದ್ದರಿಂದಲೋ ಏನೋ, ಹೇಳಿಕೊಳ್ಳುವಂಥ ಕನ್ನಡ ಸಾಹಿತ್ಯ ಸೃಷ್ಟಿ ಆಗಲೇ ಇಲ್ಲ. ಮನುಜನನ್ನು ಕುಗ್ಗಿಸುವ ಜನ್ಮ, ಕರ್ಮ, ವರ್ಣ, ಪಾರಮಾರ್ಥಿಕ ಸತ್ಯ, ಲೌಕಿಕ ಸತ್ಯ, ಇಂಥ ಇಬ್ಬಂದಿ ಸತ್ಯಗಳನ್ನು ಮನಸ್ಸಿನ ಆಳದಲ್ಲಿ ಅನೈಚ್ಛಿಕವಾಗಿ ಇಟ್ಟುಕೊಂಡ ಕೃತಿಗಳೇ ಇಲ್ಲಿ ಹುಟ್ಟಿದವು.

—ದೇವನೂರ ಮಹಾದೇವ

ಡಿ.ವಿ.ಜಿ. ಅವರ ಸಾಹಿತ್ಯ ವಿಮರ್ಶೆ

● ಪ್ರಭುಸ್ವಾಮಿಮಠ

ಡಿ.ವಿ.ಜಿ.ಯವರು ತಮ್ಮ ಆಸಕ್ತಿಯ ವೈವಿಧ್ಯಗಳೊಂದಿಗೆ ನಮ್ಮ ನವೋದಯ ಕಾಲದ ಕನ್ನಡದ ಪ್ರಮುಖ ಚಿಂತಕ ವಿಮರ್ಶಕರಲ್ಲೊಬ್ಬರಾಗಿದ್ದಾರೆ. ಅವರ ವಿಮರ್ಶೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದಕ್ಕೆ, ಆ ಕಾಲದ ಒಟ್ಟು ಸಾಹಿತ್ಯಿಕ ಸಂದರ್ಭ ಮತ್ತು ವಿಮರ್ಶೆಯ ದೃಷ್ಟಿಕೋನವನ್ನು ಸ್ಪಷ್ಟಪಡಿಸಿಕೊಳ್ಳುವುದು ಅವಶ್ಯವಾಗುತ್ತದೆ. ಆದ್ದರಿಂದ ಕೆಳಗಿನ ಈ ಸಾಲುಗಳನ್ನು ಉದ್ಧರಿಸುತ್ತೇನೆ:

'ಈ ನವೋದಯ ಕಾಲದ ಕವಿಗಳು, ಕಾವ್ಯವಿಮರ್ಶಕರು ಪ್ರಾಚೀನಾಲಂಕಾರಿಕರ ಅಭಿಪ್ರಾಯಗಳನ್ನು ತತ್ವಗಳನ್ನೂ ಪುನಃ ಪರಿಶೀಲಿಸಿ ಅವು ಇಂದಿಗೂ ಸಾರ್ವಕಾಲಿಕವಾದವುಗಳೆಂದು ಅಂಗೀಕರಿಸಿದರು. ಈ ಪರಂಪರೆಯ ಪ್ರಜ್ಞೆ ಕವಿಗೆ-ಕಾವ್ಯಕ್ಕೆ ಕಾವ್ಯಮೀಮಾಂಸೆಗೆ ಆಗತ್ಯವಾದದ್ದು, ಸತ್ವದಾಯಕವಾದದ್ದೆಂದು ಎತ್ತಿ ಹಿಡಿದರು. ಪ್ರಾಚೀನದ್ದು ಮಾತ್ರವಲ್ಲ, ಪಾಶ್ಚಾತ್ಯರಿಂದ ಬಂದ ಹೊಸ ಆಲೋಚನೆಗಳನ್ನೂ, ಭಾವನೆಗಳನ್ನೂ ಅನುದ್ವಿಗ್ನರಾಗಿ ಎತ್ತಿಕೊಂಡು ಪರಿಶೀಲಿಸಿ ತೌಲನಿಕ ಕ್ರಮದಲ್ಲಿ ಅಭ್ಯಾಸಮಾಡಿ ಭಾರತೀಯ ಕಾವ್ಯಮೀಮಾಂಸೆ ಪಾಶ್ಚಾತ್ಯ ಕಾವ್ಯಮೀಮಾಂಸೆಗಿಂತ ಯಾವ ದಿಕ್ಕುಗಳಲ್ಲಿ ಮುಂದುವರಿದಿದೆ ಎಂಬುದನ್ನೂ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಸಹಾಯದಿಂದ ಮತ್ತು ನಮ್ಮದರೊಂದಿಗೆ ಅದನ್ನು ಸಮನ್ವಯಿಸಿಕೊಂಡು ನೋಡುವುದರಿಂದ ಎಂಥ ಲಾಭವಿದೆ ಎಂಬುದರ ನಿರ್ದೇಶನವನ್ನೂ ನೀಡಿ ಕಾವ್ಯ ಮೀಮಾಂಸೆಯ ಕ್ಷೇತ್ರವನ್ನು ಫಲವತ್ತಾಗಿಸಿದರು'.*

ಈ ದೃಷ್ಟಿಗೆ ಹೊರತಲ್ಲ ಎನ್ನುವಂತೆ ಡಿ.ವಿ.ಜಿ.ಯವರೂ ಭಾರತೀಯ ಕಾವ್ಯಮೀಮಾಂಸೆ ಮತ್ತು ಪಾಶ್ಚಾತ್ಯ ವಿಮರ್ಶೆಯ ತತ್ವಗಳ ಅಧ್ಯಯನದಿಂದ ಸಂಸ್ಕಾರಗೊಂಡು ನಮ್ಮ ಸಾಹಿತ್ಯವನ್ನು ಅರ್ಥೈಸಿ, ಬೆಲೆಕಟ್ಟಿ ಹೊಸರುಚಿಯನ್ನು ಬೆಳೆಸುವುದಕ್ಕೆ ಮುಂದಾದರು. ಇಂಥ ಪ್ರಯತ್ನದಲ್ಲಿ ಅವರ ಮುಖ್ಯವಾದ ಕಾಳಜಿ

* ಜಿ. ಎಸ್. ಶಿವರುದ್ರಪ್ಪ. ಗತಿಬಿಂಬ: ಪುಟ 158

ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾದದ್ದು. ನಮ್ಮ ಪ್ರಾಚೀನ ಮೀಮಾಂಸಕರು ಕಾವ್ಯವನ್ನೇ ವಿಶಾಲ ಅರ್ಥದಲ್ಲಿ ಸಾಹಿತ್ಯವೆಂದು ಕರೆದಂತೆ ಡಿ.ವಿ.ಜಿ.ಯವರೂ "ಸಾಹಿತ್ಯವೆಂದರೆ ಎದೆಯನ್ನು ಅಲುಗಿಸುವಂಥ ಮಾತು. ಯಾವ ವಾಕ್ಯವನ್ನು ಓದಿದರೆ ಅಥವ ಕೇಳಿದರೆ ನಮ್ಮ ಹೃದಯದಲ್ಲಿ ಒಂದಾನೊಂದು ಚಲನೆಯ ಅನುಭವ ಉಂಟಾಗುತ್ತದೆಯೋ ಆ ವಾಕ್ಯವೇ ಸಾಹಿತ್ಯ; ಸಾಹಿತ್ಯದ ಸಾರಭಾಗ ಕಾವ್ಯ".* "ಜೀವದ ಕೊಳೆ ಕಶ್ಮಲಗಳನ್ನು ತೊಳೆಯಬಲ್ಲ ತೀರ್ಥವೆಂದರೆ ಕಾವ್ಯತೀರ್ಥ, ಕಾವ್ಯವೆಂದರೆ ಕಥೆ, ಕಾದಂಬರಿ, ನಾಟಕ, ಹಾಡು, ಪದ್ಯ–ಇವೇ ಮೊದಲಾದ ಮನಃಪರಿವರ್ತಕ ಪ್ರಭಾವವುಳ್ಳ ಸಾಹಿತ್ಯ"** ಎಂದಿರುವುದು ಮುಂದಿನ ಅಧ್ಯಯನದಲ್ಲಿ ಅವರು ಕಾವ್ಯಕ್ಕೆ ಸಂಬಂಧಿಸಿದಂತೆ ಬಳಸುವ ಮಾತುಗಳು ವಿಶಾಲವಾಗಿ ಸಾಹಿತ್ಯ ಎಂಬುದಕ್ಕೆ ಅನ್ವಯವಾಗುತ್ತವೆ.

ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಅವರ ಗ್ರಂಥಗಳು: 1) ಸಾಹಿತ್ಯಶಕ್ತಿ 2) ಜೀವನ ಸೌಂದರ್ಯ ಮತ್ತು ಸಾಹಿತ್ಯ 3) ಕಾವ್ಯ ಸ್ವಾರಸ್ಯಗಳಲ್ಲದೆ, 'ಉಮರನ ಒಸಗೆ', 'ಮ್ಯಾಕ್‌ಬೆತ್' ನಾಟಕದ ತಮ್ಮ ಕನ್ನಡ ಅನುವಾದಕ್ಕೆ ಅವರೇ ಬರೆದಿರುವ ಪ್ರಸ್ತಾವನೆಯ ಭಾಗಗಳು ಮುಖ್ಯವಾಗಿವೆ. ಈ ಗ್ರಂಥಗಳಲ್ಲಿಯ ಹೆಚ್ಚಿನ ಬರಹಗಳು ಬೇರೆ ಬೇರೆ ಸಂದರ್ಭಗಳಲ್ಲಿ ಅವರು ಮಾಡಿದ ಭಾಷಣದ ರೂಪಗಳಾಗಿವೆ. ಇಲ್ಲಿಯ ಕೆಲ ಬರಹಗಳನ್ನು ಸ್ಥೂಲವಾಗಿ ಪೌರ್ವಾತ್ಯ-ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆಯ ತಳಹದಿಯ ಮೇಲೆ ರಚಿತವಾದವುಗಳೆಂದು ಹೇಳಬಹುದಾದರೂ, ಅವರ ಒಲವು ವಿಶೇಷವಾಗಿ ಭಾರತೀಯ ಕಾವ್ಯಮೀಮಾಂಸೆಯ ತತ್ವಗಳ ಮೇಲಿರುವುದು ಕಂಡುಬರುತ್ತದೆ. ಕವಿ–ಕಾವ್ಯರಚನೆ, ಪ್ರತಿಭೆ, ಅಲಂಕಾರ, ರೀತಿ, ಗುಣ ಔಚಿತ್ಯ, ರಸ, ಧ್ವನಿ, ಮೊದಲಾದವುಗಳನ್ನು ಕುರಿತು ತಮ್ಮದೇ ಆದ ರೀತಿಯಲ್ಲಿ ಸೂತ್ರಪ್ರಾಯವಾಗಿ ಅಭಿಪ್ರಾಯಗಳನ್ನು ಹೇಳುತ್ತ ಹೋಗುತ್ತಾರೆ. ಉದಾಹರಣೆಗೆ ಕೆಲವನ್ನು ನೋಡಬಹುದಾಗಿದೆ. "ಕವಿ ಅಸಾಧಾರಣ ಮನುಷ್ಯ, ಆದದ್ದರಿಂದ ಅವನದು ಅಸಾಧಾರಣ ವ್ಯಕ್ತಿತ್ವ, ಅದು ಅಂತರ್ಮುಖಿ ವ್ಯಕ್ತಿತ್ವ, ಆ ವ್ಯಕ್ತಿ ವೈಶಿಷ್ಟ್ಯದ ಪ್ರಕಟ ರೂಪವೇ ಕಾವ್ಯ", "ಋಷಿಯಲ್ಲದವನು ಕವಿಯಾಗಲಾರ", "ಕಾವ್ಯವೆಂದರೆ ಮನುಷ್ಯನ ಅಂತರಂಗ ಜೀವನದ ವಾಕ್ಯರೂಪದ ಪ್ರತಿಕೃತಿ", "ಪ್ರತಿಭೆಯೆಂಬುದು ಸಹಜಶಕ್ತಿ, ಹೊರಗಿನಿಂದ ಲಭ್ಯವಾಗತಕ್ಕದ್ದಲ್ಲ; ಎಂದರೆ ಸರ್ವರಿಗೂ ಸಾಧ್ಯವಾದದ್ದಲ್ಲ, ಅದೇ ಮಹಾಸಾಹಿತ್ಯದ ಬೀಜ", "ಛಂದೋಲಂಕಾರಾದಿ

* ಡಿ.ವಿ.ಜಿ.: ಸಾಹಿತ್ಯ ಶಕ್ತಿ : ಪುಟ 13

** ಡಿ.ವಿ.ಜಿ.: ಸಾಹಿತ್ಯ ಶಕ್ತಿ : ಪುಟ 15

ಶಾಸ್ತ್ರಗಳೆಲ್ಲವು ಕಾವ್ಯಜನ್ಯಗಳಾದುವೇ ಹೊರತು ಕಾವ್ಯಜನಕಗಳಲ್ಲ", "ಕವಿತ್ವದ ಗುಣ ಅಲಂಕಾರ ರೀತಿ; ಇವು ಸಾರ್ಥಕವಾಗುವುದು ರಸೋತ್ಕರ್ಷದಿಂದಲೇ", ಕಾವ್ಯದ ಉಪಕರಣಗಳು ಕಾವ್ಯವಾಗಲಾರವು", "ರಸವೇ ಕಾವ್ಯದ ಜೀವಾಳ, ರಸೋತ್ಪಾದನೆ ಯಾಗುವಂತೆ ವಾಕ್ಯವನ್ನು ಬರೆಯುವವನೇ ಕವಿ", "ಕಾವ್ಯದ ಅಂತರಾತ್ಮ ರಸ ಬಾಹ್ಯ ಲಕ್ಷಣ ರೀತಿ, ರಸವೆಂದರೆ ಮನಸ್ಸು ಕರಗಿ ನೀರಿನಂತಾಗಿರುವ ಸ್ಥಿತಿ", "ಮಿತ ಸೌಂದರ್ಯವನ್ನು ಹಿಡಿದೇ ಮನುಷ್ಯನು ಅಮಿತ ಸೌಂದರ್ಯದ ದಾರಿಯನ್ನು ತಿಳಿಯ ಬೇಕಾಗಿದೆ", "ಮಹಾ ಅನುಭವವಿಲ್ಲದೆ ಮಹಾಕಾವ್ಯವಾಗದು", "ಕಾವ್ಯವೆಂಬುದು ಒಬ್ಬ ಪ್ರತಿಭಾಶಾಲಿಯು ಜಗತ್ತಿನೊಡನೆ ನಡೆಸುವ ಸಲ್ಲಾಪ, ಅದರ ಕೂಗಿಗೆ ಅವನ ಮರುಕೂಗು".

ಈ ರೀತಿಯಾಗಿ ಕಾವ್ಯ ತತ್ವಕ್ಕೆ ಸಂಬಂಧಿಸಿದ ಮೂಲಭೂತವಾದ, ಸರ್ವ ಸಮ್ಮತವಾದ ವಿಚಾರಗಳು ಹರಳುಗಟ್ಟಿದಂತೆ ಅವರ ವಿಮರ್ಶಾ ಲೇಖನಗಳುದ್ದಕ್ಕೂ ವ್ಯಕ್ತವಾಗುತ್ತ ಹೋಗುತ್ತವೆ. ಹೀಗಾಗಿ ಅವುಗಳನ್ನು ಕುರಿತು ಅಭಿಪ್ರಾಯ ಭೇದ ಗಳನ್ನಾಗಲಿ, ಪ್ರತಿಕ್ರಿಯೆಗಳನ್ನಾಗಲಿ ವ್ಯಕ್ತಪಡಿಸುವುದು ಕಷ್ಟವಾಗುತ್ತದೆ. "ಆದರೆ ಈ ಬಗೆಯ ವಿಮರ್ಶೆಯ ಕೊರತೆಯೆಂದರೆ ಅದು ಕೇವಲ ಸುಸಂಗತವಾದ ಶಾಸ್ತ್ರ ವಾಗಿರುವುದರಿಂದ ಅದಕ್ಕೆ ಕ್ರಿಯಾಶೀಲತೆ ಇರುವುದಿಲ್ಲ, ಈ ವಿಚಾರಗಳನ್ನು ಜಗತ್ತಿನ ಯಾವ ಉತ್ತಮ ಸಾಹಿತ್ಯಕ್ಕೂ ಅನ್ವಯಿಸಿಬಿಡಬಹುದು."*

ಆದರೆ ಅದೇ ಸಾಹಿತ್ಯ ಮತ್ತು ವಿಜ್ಞಾನ, ಸಾಹಿತ್ಯ ಮತ್ತು ರಾಜಕೀಯ, ಸಾಹಿತ್ಯ ಮತ್ತು ಜನಜೀವನದ ಸಂಬಂಧಗಳನ್ನು ಕುರಿತು ಹೇಳುವಾಗಿನ ಅವರ ಅಭಿಪ್ರಾಯಗಳು ಹೆಚ್ಚು ಗಮನಾರ್ಹವಾಗಿವೆ. ಏಕೆಂದರೆ ನವೋದಯ ಕಾಲದ ನಮ್ಮ ಸಾಹಿತ್ಯ ಮತ್ತು ವಿಮರ್ಶೆಗಳು ಪಾಶ್ಚಾತ್ಯರ ರಮ್ಯ ಸಂಪ್ರದಾಯದಿಂದ ಪ್ರಭಾವಿತ ವಾಗಿವೆ ಎಂಬ ಒಂದು ಸಾಮಾನ್ಯ ಅಭಿಪ್ರಾಯವಿದೆ. ಆದರೆ ಆ ಪ್ರಭಾವವನ್ನು ಕನ್ನಡದಲ್ಲಿ ಸ್ವೀಕರಿಸಿರುವ ರೀತಿ ಭಿನ್ನವಾಗಿದೆ. ಅಂದರೆ: ಯುರೋಪಿನವರಲ್ಲಿ ರಮ್ಯ ಸಂಪ್ರದಾಯ ಅಲ್ಲಿನ ಔದ್ಯೋಗಿಕ ಕ್ರಾಂತಿಗೆ ಪ್ರತಿಭಟನೆಯಾಗಿ ಹುಟ್ಟಿಕೊಂಡರೆ ನಮ್ಮ ನವೋದಯ ಸಾಹಿತ್ಯ ಅಲ್ಲಿಂದ ಬಂದ ವೈಜ್ಞಾನಿಕ ದೃಷ್ಟಿಕೋನದಿಂದಲೂ ಪೋಷಿತವಾಗಿದೆ. ಇದು ಕನ್ನಡ ನವೋದಯಕ್ಕೆ ವಿಶಿಷ್ಟವಾದ ದೃಷ್ಟಿಕೋನ ವಾಗಿದ್ದು**ಇದನ್ನು ಬೆಳೆಸುವಲ್ಲಿ ಡಿ.ವಿ.ಜಿ. ಅಂಥವರ ಮಹತ್ವ ಎಷ್ಟಿದೆಯೆಂಬುದನ್ನು ಮನಗಾಣಬಹುದಾಗಿದೆ.

---

* ಕೆ.ಡಿ. ಕುರ್ತುಕೋಟಿ : ನಡೆದು ಬಂದ ದಾರಿ : ಸಾಹಿತ್ಯ ವಿಮರ್ಶೆ : 1991

** ಡಾ॥ ಡಿ. ಆರ್. ನಾಗರಾಜ : ಆಧುನಿಕ ಕನ್ನಡ ಕಾವ್ಯದ ಅಧ್ಯಯನ : ಪುಟ 27–29

ಮೇಲುನೋಟಕ್ಕೆ ಸಂಪ್ರದಾಯವಾದಿಗಳಂತೆ ಕಾಣಿಸುವ ಡಿ.ವಿ.ಜಿ.ಯವರಲ್ಲಿ ಎಂಥ ಪ್ರಗತಿಪರ ವಿಶಾಲ ದೃಷ್ಟಿಕೋನವಿದೆ ಎಂಬುದಕ್ಕೆ ಕೆಳಗಿನ ಈ ಮಾತುಗಳನ್ನು ಗಮನಿಸಬಹುದಾಗಿದೆ: "ಹೊಸ ಹೊಸದಾಗಿ ಬರುತ್ತಿರುವ ವಿಜ್ಞಾನವಿದ್ಯಾಪ್ರವಾಹದಲ್ಲಿ ನಮ್ಮ ಪ್ರಾಚೀನ ವಿದ್ಯೆಯು ಮೈಮೇಲೆ ನೂರಾರು ವರ್ಷಗಳಿಂದ ಸೇರಿರುವ ಧೂಳು ಕೊಳೆಗಳನ್ನು ತೊಳೆಯಬೇಕಾಗಿದೆ. ನಮ್ಮ ಸಾಹಿತ್ಯ ಸೂತ್ರಗಳನ್ನು, ನಮ್ಮ ಸಮಾಜ ಧರ್ಮ ತತ್ವಗಳನ್ನು, ನಮ್ಮ ಆಧ್ಯಾತ್ಮಿಕ ತತ್ವಗಳನ್ನು ಸಹ ಹೊಸಕಾಲದ ಬೆಳಕಿನಲ್ಲಿ ಪರೀಕ್ಷಿಸಿ, ವಿಮರ್ಶಿಸಿ ಪುನಃ ಪರಿಷ್ಕಾರಗೊಳಿಸಬೇಕಾಗಿದೆ" ಎನ್ನುತ್ತಾರೆ.

ಅದಲ್ಲದೆ ಕವಿ-ವಿಜ್ಞಾನಿಗಳಿಬ್ಬರನ್ನೂ ಯಮಳರು ಎಂದು ಕರೆದು ಅವರು ಒಂದೇ ಅಖಂಡ ಸತ್ಯವನ್ನು ಶೋಧಿಸಲು ಹೊರಟವರು, ಅವರ ಗುರಿ ಒಂದೇ, ಆದರೆ ಅವರ ಮಾರ್ಗಗಳು ಭಿನ್ನ ಭಿನ್ನ ಅಷ್ಟೆ. ವಿಜ್ಞಾನವನ್ನು ವಿಜ್ಞಾನಧರ್ಮವೆಂದು ಕರೆದು ಅದನ್ನು ಪೌರುಷ ಪ್ರಕಾಶವಾದ, ಬುದ್ಧಿ ಪರಿಶ್ರಮವಾದ ಅಥವ ಪುರುಷ ಕಾರಯೋಗ–ಆತ್ಮಶಕ್ತಿ ಯೋಗವೆಂದು ಕರೆಯಬಹುದು ಎಂದಿದ್ದಾರೆ.

ಅದರಂತೆ "ರಾಷ್ಟ್ರಕನಿಗೆ ಸಾಹಿತ್ಯ ಬೇಕೆ?" ಎಂಬ ಪ್ರಬಂಧದಲ್ಲಿ ಸಾಹಿತ್ಯ ಮತ್ತು ರಾಜಕೀಯದ ಸಂಬಂಧ ಮತ್ತು ಪರಿಣಾಮಗಳನ್ನು ಕುರಿತು ಚಿಂತಿಸಿರುವುದಲ್ಲದೆ "ಸೂಕ್ಷ್ಮ ಗ್ರಹಣಶಕ್ತಿ, ಊಹನಶಕ್ತಿ, ಕಲ್ಪನಶಕ್ತಿಗಳನ್ನು–ರಾಜ್ಯಕರ್ತನು ಕವಿಯಿಂದ ಸಂಪಾದಿಸಿಕೊಳ್ಳಬೇಕು, "ಕಾವ್ಯ ಸಂಸ್ಕಾರವಿಲ್ಲದವನು ಮಾಡುವ ರಾಜ್ಯ ಶಾಸನವು ಕುರುಡನು ಹಿಡಿದ ತುಫಾಕಿ ; ಸಾಹಿತ್ಯವಿಲ್ಲದ ಸಾರ್ವಜನಿಕ ಸೇವೆ ಕತ್ತಲು ಕೋಣೆಯಲ್ಲಿ ಮೂಗನು ಬಡಿಸಿದ ಭೋಜನ" ಎಂಬ ಹೋಲಿಕೆಯಲ್ಲಿ ಸಾಹಿತ್ಯದ ಸಂಸ್ಕಾರವಿಲ್ಲದ ರಾಜಕೀಯ ಎಂಥ ಅವಸ್ಥೆಗೆ ಒಯ್ಯಬಹುದೆಂಬುದನ್ನು ಸೂಚಿಸಿದ್ದಾರೆ.

"ಸಾಹಿತ್ಯ ಮತ್ತು ಜನಜೀವನ" ಲೇಖನದಲ್ಲಿ ಸಾಹಿತ್ಯ ಮತ್ತು ಸಮಾಜದ ಸಂಬಂಧವನ್ನು ಕುರಿತು "ಸದ್ಗ್ರಂಥ ಮಹಿಮೆಯಿಂದ ಜನಜೀವನವು ಉತ್ತಮಗೊಳ್ಳುವಂತೆಯೇ, ಜನಜೀವನದ ಮಹಿಮೆಯಿಂದ ಸದ್ಗ್ರಂಥಗಳು ಹುಟ್ಟುವುವು" ಎಂದು "ಸಾಹಿತ್ಯ ಸಮಾಜಗಳು ಪರಸ್ಪರ ಉದ್ದೀಪನಗೊಂಡು ಉತ್ತಮ ಬದುಕಿಗೆ ದಾರಿಮಾಡಿಕೊಡುತ್ತವೆ" ಎನ್ನುತ್ತಾರೆ.

ಇನ್ನೊಂದು ಕಡೆ, ಸೌಂದರ್ಯಶಾಸ್ತ್ರ ಮತ್ತು ಅಧ್ಯಾತ್ಮ ತತ್ವಜ್ಞಾನದ ತಿಳಿವಿನ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಆನಂದವೆಂಬುದೇನು ? ಎಂಬ ಪ್ರಶ್ನೆಗೆ "ಅದು ಮನಸ್ಸಿನ ಒಂದು ಸರ್ವೋತ್ಕೃಷ್ಟ ಸ್ಥಿತಿ, ಮನಸ್ಸು ಆ ಸ್ಥಿತಿಯಲ್ಲಿರುವಾಗ ಜೀವದ ಎಲ್ಲ ಶಕ್ತಿಗಳು–ಇಂದ್ರಿಯಗಳು, ಬುದ್ಧಿ, ಸ್ಮೃತಿ ಎಲ್ಲವೂ–ಯಾವುದೋ ಒಂದು

ವಸ್ತುವಿನಲ್ಲಿ ಸೇರಿ ಹೋಗಿ, ಬೇರಾವುದನ್ನೂ ನೆನೆಯದೆ, ಬೇರಾವುದನ್ನೂ ಬಯಸದೆ, ಬೇರಾವುದನ್ನೂ ಕಾಣದೆ, ಆ ಒಂದರಲ್ಲಿಯೇ ಒಂದಾಗಿ ಬೆರೆತು ಹೋಗಿರುತ್ತದೆ. ಈ ಸ್ಥಿತಿಯನ್ನೇ 'ಸಮಾಧಿ'ಯೆಂದೂ, 'ತಾದಾತ್ಮ್ಯ'ವೆಂದೂ, 'ಪರವಶತೆ' ಎಂದೂ ನಾವು ಕರೆಯುವುದು. ಯಾವ ವಸ್ತುವಿನಲ್ಲಿ ಮನಸ್ಸು ಹೀಗೆ ಶಾಶ್ವತವಾಗಿ ಆನಂದ ಹೊಂದಲಾಗುತ್ತದೆಯೋ ಅದನ್ನೇ ವೇದಾಂತಿಗಳು 'ಆತ್ಮ'ವೆಂದೂ, 'ಬ್ರಹ್ಮ'ವೆಂದೂ ಕರೆಯುವುದೆಂದು ಕಾಣುತ್ತದೆ". ಈ ಮೇಲಿನ ಉದಾಹರಣೆಗಳಿಂದ ಡಿ.ವಿ.ಜಿ. ಯವರು ವಿಜ್ಞಾನ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸೌಂದರ್ಯ ಮೀಮಾಂಸೆ, ಅಧ್ಯಾತ್ಮ ತತ್ವಜ್ಞಾನಗಳ ತಿಳಿವು ಸಾಹಿತ್ಯ ವಿಮರ್ಶೆಗೆ ತೊಡಗುವವನಿಗೆ ಅಗತ್ಯವೆಂಬುದನ್ನು ವಿವರಿಸಿದ್ದಾರೆ. ಅಂದರೆ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಮೂಲಭೂತವಾದ ಸಿದ್ಧಾಂತಗಳ ಅರಿವಿನೊಂದಿಗೆ, ವಿಮರ್ಶೆಗೆ ತೊಡಗುವವನಿಗೆ ಅಗತ್ಯವಾದ ಬೇರೆ ಬೇರೆ ಜ್ಞಾನಶಾಖೆಗಳ ಸಲಕರಣೆಗಳ ಅಗತ್ಯವನ್ನು ಸಮರ್ಥಿಸಿದ್ದಾರೆ.

ಮೇಲಿನ ವಿಚಾರಗಳಿಗೆ ಪೂರಕವಾಗಿ. ಡಿ.ವಿ.ಜಿ.ಯವರ ಅನ್ವಯಿಕ ವಿಮರ್ಶೆಯ ಒಂದೆರಡು ಉದಾಹರಣೆಗಳನ್ನು ನೋಡಬಹುದು: ಒಂದು ಕಡೆ ಉಮರಖಯ್ಯಾಂ, ಲ್ಯಾಟಿನ್ ಕವಿ ಲುಕ್ರಿಷಿಯಸ್ ಮತ್ತು ಬ್ರೌನಿಂಗ್ ಕವಿಗಳನ್ನು ಹೋಲಿಸುತ್ತ "ನಮ್ಮ ನಮ್ಮ ದೃಷ್ಟಿ ಪ್ರಪಂಚಗಳೇ ಸರ್ವಸ್ವವೆಂದು ನಮಗೆ ತೋರಿ ನಮ್ಮ ಕ್ಷಣಿಕ ಕಷ್ಟಗಳೇ ಮಹತ್ತರವೆನಿಸಿರುವಾಗ ಲುಕ್ರೀಷಿಯಸ್ಸು ಹಿತಕರ; ಆಚಾರ ನಿಷ್ಠೆಗಳ ಕಾಷ್ಠ ವ್ಯಸನ ಹೆಚ್ಚಿದಾಗ ಉಮರ್ ಖಯ್ಯಾಮ್; ಅಪನಂಬಿಕೆ ಹೆಚ್ಚಿ ಭರವಸೆ ತಪ್ಪಿ ಜೀವ ತಲ್ಲಣಿಸುವಾಗ ರಾಬರ್ಟ್ ಬ್ರೌನಿಂಗ್; ಮಾನುಷ ಅಹಂಕಾರ ಹೆಚ್ಚಿದಾಗ ಲುಕ್ರೀಷಿಯಸ್; ಶಾಸ್ತ್ರಶ್ರವಣದ ಗುಲ್ಲು ಅತಿಯಾದಾಗ, ಉಮರ್ ಖಯ್ಯಾಮ್; ಜೀವಕ್ಕೆ ಒಂದು ಊರುಗೋಲು ಬೇಕೆನಿಸಿದಾಗ ರಾಬರ್ಟ್ ಬ್ರೌನಿಂಗ್–ಹೀಗೆ ಮೂವರಿಗೂ ಇನ್ನೂ ಅನೇಕರಿಗೂ, ನಮ್ಮ ಜಗತ್ತಿನಲ್ಲಿ ಜಾಗವಿದ್ದೇ ಇರುತ್ತದೆ. ಸಾವಿರ ಜಾತಿಯ ಕಾವ್ಯಗಳಿಗೆ ಸ್ಥಾನ ಸಿದ್ಧವಾಗಿದೆ. ಒಂದೊಂದು ಮನೋವಸ್ಥೆಯದು (Mood) ಒಂದೊಂದು ಅಭಿರುಚಿ".*

ಈ ತೌಲನಿಕ ದೃಷ್ಟಿಯೊಂದಿಗೆ, ಲೇಖಕನೊಬ್ಬನ ಚಿಂತನೆಯ ಒಳತಿರುಳನ್ನು ವ್ಯಾಖ್ಯಾನಿಸುವ ರೀತಿಗೆ ಉಮರ ಖಯ್ಯಾಮನನ್ನು ಕುರಿತು ಬರೆದ ಈ ಸಾಲುಗಳನ್ನು ಗಮನಿಸಬೇಕು: "ತಾಪತ್ರಯದ ಗೋಳಾಟ ಎಂದೆಂದಿಗೂ ಇದ್ದೇ ಇರುತ್ತದೆ. ಒಪ್ಪತ್ತಾದರೂ ಉಲ್ಲಾಸದಿಂದ ಇರೋಣ" ಎಂದು ಒಂದೊಂದು ಸಲವಾದರೂ ಯಾರಿಗೆ ತಾನೆ ಅನ್ನಿಸುವುದಿಲ್ಲ ? ಇದರಲ್ಲಿ ಅಧರ್ಮವೇನು ಇಲ್ಲ, ಈ

* ಡಿ.ವಿ.ಜಿ. ಉಮರನ ಒಸಗೆ : ಮುನ್ನುಡಿ : ಪುಟ 62

ಪ್ರವೃತ್ತಿಯ ಬೇರುಗಳು ಮನುಷ್ಯ ಸ್ವಭಾವದಲ್ಲೇ ಅಡಗಿವೆ, ಹೀಗೆ ಸೃಷ್ಟಿ ವಿಹಿತವಾಗಿ ಹೆರರಿಗೆ ಬಾಧಕವಾಗದೆ ನಮ್ಮ ಚಿತ್ತಸ್ವಾಸ್ಥ್ಯಕ್ಕೆ ಸಾಧಕವಾಗುವ ಹಿತಮಿತ ಸುಖಸಂಪಾದನೆ ನಮ್ಮ ಸಾಮಾನ್ಯ ಲೋಕಧರ್ಮದ ಮುಖ್ಯಾಂಗವೆಂದು ಹೇಳಬಹುದಲ್ಲವೆ ? ... ಈ ಜೀವನೋತ್ಸಾಹ ನೀತಿಯ ಮೇಲ್ಮೆಯನ್ನೂ, ಸೊಬಗನ್ನೂ ಮನಸ್ಸೊಪ್ಪುವಂತೆ ತೋರಿಸಿರುವುದೇ ಉಮರನ ಒಸಗೆ".

ಇದರಂತೆ ಪಾಶ್ಚಾತ್ಯ ರುದ್ರನಾಟಕಗಳೊಂದಿಗೆ, ನಮ್ಮವುಗಳನ್ನು ಹೋಲಿಸಿ ವಿಶ್ಲೇಷಿಸಿರುವುದಕ್ಕೆ ಒಂದೆರಡು ಉದಾಹರಣೆಗಳನ್ನು ನೋಡೋಣ: "ಇಂಥ ದೃಶ್ಯ ಪ್ರಬಂಧವನ್ನು ರುದ್ರನಾಟಕವೆಂದು ಕರೆಯುವುದು, ಸಂಸ್ಕೃತ ಕಾವ್ಯ ಮೀಮಾಂಸೆಯ ದೃಷ್ಟಿಯಿಂದಲೂ ಅನುಚಿತವಾಗಲಾರದು. ಏಕೆಂದರೆ ಸಂಸ್ಕೃತದ ಅಷ್ಟ–ನವರಸಗಳಲ್ಲಿ ಯಾವುದು ರೌದ್ರವೆನ್ನಿಸಿಕೊಂಡಿದೆಯೋ ಅದು ಒಂದು ಕಡೆ ಭಯಾನಕ ರಸಕ್ಕೂ ಕಾರಣವಾಗಿಯೂ ಆ ಮೂಲಕ ಇನ್ನೊಂದು ಕಡೆ, ಕರುಣರಸಕ್ಕೆ ನಿಮಿತ್ತವಾಗಿಯೂ ಪರಿಣಮಿಸತಕ್ಕದ್ದಾಗಿದೆ. ರಾಮನ ರೌದ್ರದ ಫಲ ರಾವಣನ ಸಂಹಾರ; ಅದರ ಕಾರ್ಯ ರಾಕ್ಷಸರ ಭಟರ ಭಯ, ಮಂಡೋದರಿಯ ಶೋಕ, ಲಂಕಾ ಪುರಜನರ ಕರುಣ, ಹೀಗೆ ರೌದ್ರವು ಭಯ ಕರುಣೆಗಳಿಗೆ ಆಸ್ಪದಪ್ರದವಾಗುತ್ತದೆ. ಆದರೂ 'ಮ್ಯಾಕ್‌ಬೆತ್'ನಂಥ ನಾಟಕವನ್ನು ನೋಡಿದಾಗ ನಮ್ಮ ಮನಸ್ಸಿನಲ್ಲಿ ಎದ್ದು ನಿಲ್ಲುವ ರಸವನ್ನು ಅಥವ ಭಾವವನ್ನು ಒಂದು ಬಗೆಯ ವಿಷಾದಾದ್ಭುತವೆಂದು ನಿರ್ದೇಶಿಸಬೇಕಾಗುತ್ತದೆ. ನಮ್ಮ ಕಣ್ಣಿಗೆ ಕಾಣುವುದು ಹಟ, ರೋಷ, ವಿನಾಶ, ಸಂಕಟ–ಇವುಗಳ ಹಿಂದೆ ನಿಂತು ನಾನಾ ನಾಟಕ ವ್ಯಕ್ತಿಗಳನ್ನು ಸೂತ್ರಧಾರನಂತೆ ಆಡಿಸುತ್ತ ನಾಯಕ ನಾಯಕಿಯರನ್ನು ಅಮಾರ್ಗಕ್ಕೆಳೆಯುತ್ತ, ಅವರ ಮಹೋದ್ಯಮಗಳನ್ನು ಹಾಳು ಮಾಡುತ್ತ ಒಂದು ಅದೃಶ್ಯ ಭೂತವು ಸಂಚು ನಡೆಸುತ್ತಿರುವಂತೆ ನಮ್ಮ ಊಹೆಗೆ ಗೋಚರವಾಗುತ್ತದೆ. ರಾವಣನ ಬೆನ್ನ ಹಿಂದೆಯೂ, ದುರ್ಯೋಧನನ ಬೆನ್ನ ಹಿಂದೆಯೂ ಈ ಭೂತ ನಿಂತು ಚೇಷ್ಟೆ ನಡೆಸಿ ಅವರ ಭಂಗವನ್ನು ನೋಡಿ ಕೇಕೆ ಹಾಕುವುದು ನಮ್ಮ ಕಿವಿಗೆ ಕೇಳಿಬರುತ್ತದೆ".*

ಇದರಂತೆಯೇ "ಷೇಕ್ಸ್‌ಪಿಯರನ 'ಹ್ಯಾಮ್ಲೆಟ್' ನಾಟಕದಲ್ಲಿ ಆ ರಾಜಕುಮಾರನು ಪಡುವ ಸಂಕಟವನ್ನು ಮನಸ್ಸಿಗೆ ತಂದುಕೊಳ್ಳೋಣ. ಅವನಿಗೆ ಅವನ ತಂದೆಯ ಪ್ರೇತವು ಕಾಣಿಸಿಕೊಂಡು "ನಿನ್ನ ತಾಯಿ ನಿನ್ನ ಚಿಕ್ಕಪ್ಪನಲ್ಲಿ ಅನುರಕ್ತಳಾಗಿ ನನ್ನನ್ನು ಕೊಲ್ಲಿಸಿ, ಅವನನ್ನು ಸಿಂಹಾಸನಕ್ಕೆ ತಂದಿದ್ದಾಳೆ, ಈ ಘೋರವಾದ ಅನ್ಯಾಯಕ್ಕೆ ನೀನು ಪ್ರತೀಕಾರ ಮಾಡಬೇಡವೆ ?" ಎಂದು ಕೇಳುತ್ತದೆ. ಆಗ ಹ್ಯಾಮ್ಲೆಟ್‌ನ

* ಡಿ.ವಿ.ಜಿ. ಷೇಕ್ಸ್‌ಪಿಯರ್: ಕನ್ನಡ ಮ್ಯಾಕ್‌ಬೆತ್ : ಪೀಠಿಕೆ : ಪುಟ 8

ಮನಸ್ಸು ಹೇಗೆ ಆಗಿರಬೇಕು ? ನಮ್ಮಲ್ಲಿ ಅಂಥ ಸನ್ನಿವೇಶ ಯಾರಿಗಾದರೂ ಒದಗಿದರೆ ಅವರು ಏನು ಮಾಡಿಯಾರು, ಉತ್ತರವನ್ನು ಊಹಿಸುವುದು ಕಷ್ಟ.

ಜಮದಗ್ನಿ ಋಷಿಯು ತಮ್ಮ ಮಕ್ಕಳನ್ನು ಒಬ್ಬೊಬ್ಬರನ್ನಾಗಿ ಕರೆದು, ಅವರ ತಾಯಿಯು ಮನಸ್ಸಿನಿಂದ ವ್ಯಭಿಚಾರ ಮಾಡಿದವಳೆಂದೂ, ಶಿರಚ್ಛೇದನ ಆಕೆಗೆ ತಕ್ಕ ಪ್ರಾಯಶ್ಚಿತ್ತವೆಂದೂ ವಿಧಿಸಿದಾಗ ಮೂವರು ಮಕ್ಕಳು ಭಯಭ್ರಾಂತರಾಗಿ ತಂದೆಯ ಆಜ್ಞೆಯನ್ನು ನಿರಾಕರಿಸಿ ಓಡಿಹೋದರು. ಕಿರಿಯವನಾದ ಪರಶುರಾಮನು ತಂದೆಯ ಆಜ್ಞೆಯನ್ನು ಕರ್ತವ್ಯ ಬುದ್ಧಿಯಿಂದ ನಡೆಸಿದ, ನಡೆಸಿದರೂ ಆ ಕಾರ್ಯದ ನಿರ್ದೋಷತ್ವದ ವಿಷಯದಲ್ಲಿ ಅವನಿಗೆ ಶಂಕೆ ತಪ್ಪಲಿಲ್ಲ. ಆ ಶಂಕೆಯ ಪರಿಹಾರಕ್ಕಾಗಿ ತೀರ್ಥಯಾತ್ರೆ ಮಾಡಿ ತಪಶ್ಚರ್ಯೆ ನಡೆಸಿದ.

ಪರಶುರಾಮನ ಕಥೆಯಿಂದಲೂ, ಹ್ಯಾಮ್ಲೆಟ್‌ನ ಕಥೆಯಿಂದಲೂ ನಮಗೆ ಜೀವ ಸಂಕಟದ ದರ್ಶನವಾಗುತ್ತದೆ. ಅದು ಅರಿಸ್ಟಾಟಲ್ ಹೇಳುವಂತೆ 'ಕೆಥಾರಿಸಸ್' (catharsis) ಜೀವ ಮಲ ವಿರೇಚಕ ಜೀವ ಶೋಧಕವಾಗುತ್ತದೆ".*

ಮೇಲಿನ ಈ ಎರಡೂ ಸಂದರ್ಭಗಳಲ್ಲಿ ಡಿ.ವಿ.ಜಿ.ಯವರು ಭಾರತೀಯ ಕಾವ್ಯ ಮೀಮಾಂಸೆ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಯ ತತ್ವಗಳನ್ನು ಸಮನ್ವಯಗೊಳಿಸಿ ವಿವೇಚಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಪಾಶ್ಚಾತ್ಯ ದುರಂತ ದೃಷ್ಟಿಯನ್ನು ನಮ್ಮ ಪುರಾಣ ವಸ್ತುಗಳಿಗೆ ಅನ್ವಯಿಸಿ ನೋಡುವುದರೊಂದಿಗೆ ನಮ್ಮಲ್ಲಿಯ 'ರಸಾನುಭೂತಿ' ಅಥವಾ 'ರಸಾನಂದ'ವನ್ನು ಅರಿಸ್ಟಾಟಲ್‌ನ 'ಕೆಥಾರಿಸಸ್' ತತ್ವದ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಈ ರೀತಿ ದುರಂತ ದೃಷ್ಟಿಯಿಂದ ನಮ್ಮ ಕಾವ್ಯಗಳನ್ನು ನೋಡುವ ಪ್ರಯತ್ನವನ್ನು ಮೊದಲು ಮಾಡಿದವರು ಬಿ.ಎಂ.ಶ್ರೀ.ಯವರು. ಡಿ.ವಿ.ಜಿ.ಯವರೂ ತಮ್ಮ ವಿಮರ್ಶೆಯಲ್ಲಿ ಈ ಎರಡೂ ದೃಷ್ಟಿಕೋನಗಳನ್ನು 'ಕಸಿಮಾಡಿ' ನೋಡುವುದರಿಂದ ಎಂಥ ಸೊಗಸು ಉಂಟಾಗುತ್ತದೆಂಬುದನ್ನು ನೋಡಿದಂತಿದೆ. ಆದರೆ ರಸಾನಂದದ ಅನುಭವಕ್ಕೂ, ಕೆಥಾರಿಸಸ್‌ನ 'ವಿರೇಚನ' ತತ್ವಕ್ಕೂ ಸಮಾನ ಅಧಿಕರಣ ಸಾಧ್ಯವಾಗುತ್ತದೆಂದು ಹೇಳುವುದು ಕಷ್ಟವಾಗುತ್ತದೆ.

ಕೊನೆಯದಾಗಿ ಡಿ.ವಿ.ಜಿ.ಯವರ ದೃಷ್ಟಿಯಲ್ಲಿ ವಿಮರ್ಶೆ ಮತ್ತು ವಿಮರ್ಶಕನ ಕಲ್ಪನೆ ಎಂಥದಿತ್ತೆಂಬುದನ್ನು ನೋಡಬಹುದು: ಕೃತಿವಿಮರ್ಶೆಗೆ ತಕ್ಕ ಅಧಿಕಾರಿ ಯಾರು ? ಯೋಗ್ಯತೆಗೆ ಪ್ರಮಾಣ ಯಾವುದು ? ಎಂಬ ಪ್ರಶ್ನೆಗಳೊಂದಿಗೆ: "ವಿಮರ್ಶಕನು ಅನೇಕ ಕೃತಿಗಳನ್ನು ನೋಡಿ ಪರಿಶೀಲಿಸಿದವನಾಗಿರಬೇಕು, ಅವನು

* ಡಿ.ವಿ.ಜಿ. ಕಾವ್ಯಸ್ವಾರಸ್ಯ : ಪೀಠಿಕೆ : 30

ಸಹೃದಯನಾಗಿ ಸಮಾನ ಹೃದಯ ಉಳ್ಳವನಾಗಿರಬೇಕು.... ವಿಮರ್ಶಕನು ಆರ್ದ್ರ ಸ್ವಭಾವದವನಾಗಿರಬೇಕು. ಸಹಾನುಭೂತಿಯುಳ್ಳವನಾಗಿ, ಎಂದರೆ ಕವಿಯ ವಿಷಯ ದಲ್ಲಿ ಸ್ನೇಹಬುದ್ಧಿಯುಳ್ಳವನಾಗಿರಬೇಕು. ಯೋಗ್ಯರೆನಿಸಿಕೊಂಡ ವಿಮರ್ಶಕರಲ್ಲೂ ಕೂಡ ಒಂದು ಕಾವ್ಯದ ಯೋಗ್ಯತೆಯನ್ನು ಕುರಿತು ಅಭಿಪ್ರಾಯ ಭೇದವಿರುವುದು ಸಂಭವವಾಗಿದೆ .."

"ಕಾವ್ಯಸೌಂದರ್ಯ ದರ್ಶನವು-ರಸಾನುಭವವು-ವೈಯಕ್ತಿಕ ಸಾಕ್ಷ್ಯವುಳ್ಳದ್ದು. ಅದು ಪ್ರತಿ ಮನುಷ್ಯನಿಗೂ ಅವನ ಮನೋಧರ್ಮ ಸಂಸ್ಕಾರಗಳಿಗನುಗುಣವಾಗಿರು ತ್ತದೆ. ಆದ್ದರಿಂದ ಕಾವ್ಯ ವಿಮರ್ಶೆಯಲ್ಲಿ ಐಕ್ಯಮತ್ಯವು ಸಾಧ್ಯವಿಲ್ಲ".

"ಕಾವ್ಯವಿಮರ್ಶೆ ಎಂಬುದೇ ಒಂದು ಕಲೆ, ಅದು ಒಂದು ತೆರೆದ ಕಲ್ಪನಾಕೃತಿಯೇ, ಕಾವ್ಯನಿರ್ಮಾಣವು ಎಷ್ಟು ದೊಡ್ಡದೋ ಕಾವ್ಯವಿಮರ್ಶೆಯೂ ಅಷ್ಟು ದೊಡ್ಡದು".

"ಎಲ್ಲ ಕಾವ್ಯವೂ ಮಕ್ಕಳಂತೆ, ವಿಶ್ವಾಸವಿಲ್ಲದ ಕಡೆ ಮಕ್ಕಳು ಸುಳಿಯಲಾರರು. ಅವರ ಲೀಲೆಯನ್ನು ನೋಡಿ ಸಂತೋಷಪಡಬೇಕೆನ್ನುವವರು ಮೊದಲು ಅವರಲ್ಲಿ ವಾತ್ಸಲ್ಯ ತೋರಬೇಕು. ಕಾವ್ಯದ ವಿಷಯದಲ್ಲಿಯೂ ಹಾಗೆಯೇ, ಸರಳತೆ ಸ್ನೇಹ ನಂಬುವ ಬುದ್ಧಿ–ಇವು ಮಕ್ಕಳನ್ನೊಲಿಸಿಕೊಳ್ಳುವುದಕ್ಕೆ ಹೇಗೋ ಕಾವ್ಯವನ್ನೊಲಿಸಿ ಕೊಳ್ಳುವುದಕ್ಕೂ ಅನಿವಾರ್ಯವಾದವುಗಳು. ಬೇಗ ಬೇಸರ ಪಡುವವರಿಗೂ ಅತಿ ಯುಕ್ತಿಯಿಂದ ಪರೀಕ್ಷೆ ನಡೆಸುವವರಿಗೂ ಕಾವ್ಯ ಹತ್ತಿರ ಬರಲು ಒಪ್ಪದು".

"ಕಾವ್ಯ ವಿಮರ್ಶೆಯಲ್ಲಿ ಸ್ಥೂಲ ತಳಹದಿಯ ವಿಚಾರಗಳಲ್ಲಿ ಅಭಿಪ್ರಾಯೈಕ್ಯವು ಸಾಧ್ಯ. ಸೂಕ್ಷ್ಮಶಿಖರ ವಿಚಾರಗಳಲ್ಲಿ ಆ ಬಗೆಯ ಐಕ್ಯವು ದುರ್ಲಭ".

ಡಿ.ವಿ.ಜಿ.ಯವರು ಹೇಳುವ ವಿಮರ್ಶಕ ಸಹೃದಯನಾದರೂ, ಬೆಲೆಗಟ್ಟುವ ಮೌಲಿಕ ಕಲ್ಪನೆಯುಳ್ಳವನಾದುದರಿಂದ ಅವನು, ರಸಿಕ–ಸಹೃದಯರಿಗಿಂತಲೂ ಒಂದು ಮಟ್ಟದಲ್ಲಿ ಮುಂದೆ ಹೋಗುತ್ತಾನೆ. ಡಿ.ವಿ.ಜಿ.ಯವರು ಅಷ್ಟಾಗಿ ಅನ್ವ ಯಿಕ ಅಥವಾ ಪ್ರಾಯೋಗಿಕ ವಿಮರ್ಶೆಗಳನ್ನು ಬರೆಯದಿದ್ದರೂ. ಸಂಸ್ಕಾರಗೊಂಡ ಮನಸ್ಸೊಂದು, ಒಂದು ಕಲಾಕೃತಿಗೆ ಮುಖಾಮುಖಿಯಾಗುವುದೇ ವಿಮರ್ಶೆಯಾಗುವು ದಾದರೆ, ಡಿ.ವಿ.ಜಿ.ಯವರಿಗಿರುವ ಹಲವು ಜ್ಞಾನ ಶಾಖೆಗಳ, ಸಿದ್ಧಾಂತಗಳ ತಿಳಿವು, ಅಪಾರವಾದ ಜೀವನಾನುಭವ, ಮುಕ್ತ ಮನಸ್ಸು, ಸೂಕ್ಷ್ಮಜ್ಞತೆ, ತೌಲನಿಕ, ವಿಶ್ಲೇಷಣಾತ್ಮಕ ದೃಷ್ಟಿಕೋನಗಳೊಂದಿಗೆ, ಅತ್ಯುತ್ತಮವಾದದ್ದರ ಕಲ್ಪನೆ, ಅದನ್ನು ಸ್ಪಷ್ಟ ಖಚಿತ ಮಾತುಗಳಲ್ಲಿ ಹೇಳುವ ಗುಣಗಳು ಅವರನ್ನು ನಮ್ಮ ನವೋದಯ ಕಾಲದ ಪ್ರಮುಖ ವಿಮರ್ಶಕರಲ್ಲೊಬ್ಬರನ್ನಾಗಿ ಮಾಡಿವೆ. ಮುಖ್ಯವಾಗಿ ಡಿ.ವಿ.ಜಿ. ಯವರ ವಿಮರ್ಶೆ ಕನ್ನಡ ವಿಮರ್ಶೆಗೆ ಸೈದ್ಧಾಂತಿಕ ತಳಹದಿಯನ್ನು ಒದಗಿಸಿದೆಯೆಂದು ಹೇಳಬಹುದು. ●

(ಸಾಗರದ "ಅಭಿರುಚಿ" ಆಶ್ರಯದಲ್ಲಿ ನಡೆದ ಸಾಹಿತ್ಯ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ)

ನನ್ನ ನೆನಪುಗಳು

ಆನಂದಕಂದ

ನನ್ನ ಪ್ರಾಥಮಿಕ ಶಿಕ್ಷಣ

ನಾವೆಲ್ಲರೂ ಬಗರನಾಳದಲ್ಲಿ ಇರುವಾಗಲೇ ಬೆಟಗೇರಿಯಲ್ಲಿ ಶಾಲೆಗೆ ನನ್ನ ಹೆಸರು ಹಚ್ಚಿದುದನ್ನು ಈ ಮೊದಲೇ ವಿವರಿಸಿದ್ದೇನೆ. ಬೆಟಗೇರಿ ಶಾಲೆಯಲ್ಲಿ ಒಬ್ಬರೇ ಶಿಕ್ಷಕರು. ಅವರು ನಾಲ್ಕು ತರಗತಿಗಳನ್ನು ಒಬ್ಬರೇ ನಡೆಸುತ್ತಿದ್ದರು. ವೆಂಕಣ್ಣ ಮಾಸ್ತರರ ಮನೆಯೆಂದರೆ ಒಂದು Mental Hospital ಇದ್ದಂತೆ. ತಲೆಯಿಲ್ಲದ ಅರೆಹುಚ್ಚಿಯಂತಹ ಒಬ್ಬ ಹೆಂಡತಿ ಆವರಿಗೆ. ಆಕೆಗೆ ಚೆನ್ನಾಗಿ, ಸ್ಪಷ್ಟವಾಗಿ ಮಾತನಾಡಲಿಕ್ಕೂ ಬರುತ್ತಿರಲಿಲ್ಲ. ಅವರ ತಾಯಿ ಇನ್ನೊಂದು ಬಗೆಯ ಹುಚ್ಚಿ. ಯಾವುದೂ ತಿಳಿಯದ ಹೆಣ್ಣು ಮಗಳು. ಮಕ್ಕಳು ಏಳೆಂಟು ಆಗಿದ್ದರೂ ಎರಡು ಮಾತ್ರ ಬದುಕಿ ಉಳಿದಿದ್ದವು; ಹನ್ನೆರಡು ವರ್ಷದ ಹುಡುಗಿಯು ಮತ್ತು ಹತ್ತು ವರ್ಷದ ಹುಡುಗನು. ಅವರಿಬ್ಬರೂ ಮಾತನಾಡುವ ಭಾಷೆ, ಆವರದೇ ಆಗಿದ್ದಿತು. ಇನ್ನಾರಿಗೂ ತಿಳಿಯುವಂತಿರಲಿಲ್ಲ. ಹೀಗಾಗಿ ಮನೆಯಲ್ಲೆಲ್ಲ ಒಂದು ತೊದಲು ಮಾತಿನ ಮನುಷ್ಯರ ಪ್ರದರ್ಶನವನ್ನೇ ಅಲ್ಲಿ ಕಾಣಬಹುದು. ಹೆಂಡತಿಯಾಗಿ ಬಂದವಳು ಆ ಮಾಸ್ತರ ಸೋದರತ್ತೆಯ ಮಗಳು. ಹಳಸಿದ ನುಚ್ಚಿಗೂ ಹಸಿದ ನಾಯಿಗೂ ಸ್ನೇಹವಿದ್ದಂತೆ ಅವರಲ್ಲಿ ದಾಂಪತ್ಯ ಬೆಳೆದಿದ್ದಿತು.

ವೆಂಕಣ್ಣ ಮಾಸ್ತರರು ಕೇವಲ ಮುಲ್ಕಿ[1] ಪರೀಕ್ಷೆ ಪಾಸಾದವರು. ಮುಲ್ಕಿ ಪರೀಕ್ಷೆ ಪಾಸಾದವರಿಗೆ ಆಗ ತಿಂಗಳಿಗೆ ಏಳು ರೂಪಾಯಿ ಸಂಬಳ ದೊರೆಯುತ್ತಿತ್ತು. ಪಾಪ ! ಏಳು ರೂಪಾಯಿಗಳಲ್ಲಿಯೇ ಈ ಐದು ಜನರ ಕುಟುಂಬವು ಸಾಗಬೇಕಾಗಿತ್ತು. ಎಂತಲೇ ಮನೆಯಲ್ಲಿ ನೀರು ತುಂಬಿಡಲು ಮಣ್ಣಿನ ಹರವೆಗಳು.[2] ನೀರು ಕಾಯಿಸುವುದಕ್ಕೆ ಸೀಮೆ–ಎಣ್ಣೆ[3] ಬಾಯ ತಗಡನ್ನು ತೆಗೆದ ಒಂದು ಡಬ್ಬಿ. ಅಡಿಗೆಯ ಪಾತ್ರೆಗಳೂ ಅಷ್ಟಕ್ಕಷ್ಟೆ. ಅವರ ಮನೆಯಲ್ಲಿ ಸಂಪತ್ತಿನ ಬಡತನವೆಂದಷ್ಟೇ ಅಲ್ಲ,

1. ಸರ್ಕಾರದಿಂದ ನಡೆಯುವ ಸಾರ್ವಜನಿಕ ಪರೀಕ್ಷೆ ; ಈಗಿನ ಏಳನೇ ತರಗತಿ.
2. ನೀರು ತುಂಬುವ ಮಣ್ಣಿನ ದೊಡ್ಡ ಪಾತ್ರೆ 3. ಚಿಮಣಿ ಎಣ್ಣೆ

ಮನುಷ್ಯರಲ್ಲಿ ಬುದ್ಧಿಯು ಬಡತನವೂ ಸಾಕಷ್ಟು ಇದ್ದಿತು. ಇಂತಹ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡ ಮಾಸ್ತರರು ಶಾಲೆಯಲ್ಲಿ ಏನು ಕಲಿಸಬೇಕು ? ಹೇಗೆ ಕಲಿಸಬೇಕು ?

ಆಗ ನಮ್ಮ ತಾಲ್ಲೂಕಿನ ೧೨೦ ಹಳ್ಳಿಗಳಲ್ಲಿ ಸೇರಿ ೩೦ ಹಳ್ಳಿಗಳಲ್ಲಿ ಸರಕಾರಿ ಶಾಲೆಗಳಿದ್ದವು. ಎಲ್ಲ ಶಾಲೆಗಳಲ್ಲಿಯೂ ಕನ್ನಡ ಭಾಷೆಯನ್ನು ಕಲಿಸುತ್ತಿದ್ದರೂ ಅಂಕಿ–ಮೊಗ್ಗೆಯನ್ನು ಮರಾಠಿಯಲ್ಲಿಯೇ ಕಲಿಸಲಾಗುತ್ತಿತ್ತು. ಕನ್ನಡ ಮೊಗ್ಗಿಗಳನ್ನು ಹೇಳುವವರನ್ನು ನೋಡಿ ನಮಗೆ ಆಗ ಅಚ್ಚರಿಯೆನಿಸುತ್ತಿತ್ತು.

ಶಾಲೆಗೆ ನಾನು ಹೋಗಿ ಹೆಸರು ಹಚ್ಚುವವರೆಗೆ ಎರಡು ದಿನಗಳನ್ನು ಸುಮ್ಮನೆ ಕುಳಿತು ಕಳೆದೆ. ಮೂರನೆಯ ದಿನ ನನಗೆ ಮಾಸ್ತರರು "ಅ, ಆ, ಇ, ಈ, ಉ, ಊ" ಕನ್ನಡ ಅಕ್ಷರಗಳನ್ನು ಸ್ಲೇಟಿನ ಮೇಲೆ ಬರೆದುಕೊಟ್ಟರು. ಅವುಗಳನ್ನು ತೀಡು ಎಂದು ಹೇಳಿದರು. ನಾನು ಒಂದೆರಡು ಗಳಿಗೆ ತಡೆದು ಆ ಎಲ್ಲ ಅಕ್ಷರಗಳನ್ನೂ ಮಾಸ್ತರರೆದುರು ಬರೆದು ತೋರಿಸಿ ಓದಿ ಹೇಳಿದೆ. ನನ್ನ ಬುದ್ಧಿಮತ್ತೆಯನ್ನು ಕಂಡ ಅವರು ಮುಂದೆ 'ಎ'ದಿಂದ 'ಅಂ, ಅಃ'ವರೆಗೆ ಬರೆದು ತೀಡಲು ಕೊಟ್ಟರು. ಒಂದೆರಡು ಗಳಿಗೆಯಲ್ಲಿಯೇ ಆ ಅಕ್ಷರಗಳನ್ನು ತಪ್ಪದೆ ಬರೆದು ನಮ್ಮ ಮಾಸ್ತರರಿಗೆ ಓದಿ ತೋರಿಸಿದೆ. 'ಶಹಭಾಸ್' ಎಂದು ಅವರು 'ಕ'ಕಾರದಿಂದ 'ಜ್ಞ'ಕಾರದ ಎಲ್ಲ ವ್ಯಂಜನಾಕ್ಷರಗಳನ್ನು ಹಾಕಿಕೊಟ್ಟರು. ಅರ್ಧ ತಾಸಿನಲ್ಲಿಯೇ ಎಲ್ಲವನ್ನೂ ಬರೆದು ತೋರಿಸಲು ಮಾಸ್ತರರು ಮೆಚ್ಚಿನ ನಗೆಯಿಂದ 'ಕ, ಕಾ' ಬಳ್ಳಿಯನ್ನು ನನಗೆ ಬರೆದು ಕೊಟ್ಟು ಕಲಿಯಲು ಹೇಳಿದರು. ಬಳ್ಳಿಯ ವಿಶೇಷ ಮರ್ಮವನ್ನು ನನ್ನದು ನಾನೇ ಅರಿತುಕೊಂಡು 'ಕ'ಕಾರದಿಂದ 'ಜ್ಞ'ಕಾರದ ವರೆಗೆ ಎಲ್ಲ ಅಕ್ಷರಗಳ ಬಳ್ಳಿಯನ್ನು ಬರೆದು ಓದಿ ತೋರಿಸಲು ನಮ್ಮ ವೆಂಕಣ್ಣ ಮಾಸ್ತರರು ನನ್ನ ಬೆನ್ನಮೇಲೆ ಚಪ್ಪರಿಸಿ 'ಭಲೆ' ಎಂದು ಹೇಳಿದರು. ಒಂದೇ ದಿವಸದಲ್ಲಿ ನಾನು ಮೂಲಾಕ್ಷರ, ಗಣಿತಾಕ್ಷರಗಳನ್ನು ಕಲಿತುಕೊಂಡೆ,

ಮರುದಿನ ನನಗೆ ಅಂಕಿಗಳನ್ನು ಬರೆದುಕೊಟ್ಟರು. ಹತ್ತರವರೆಗಿನ ಅಂಕಿಗಳನ್ನು ಒಂದೇ ನಿಮಿಷದಲ್ಲಿ ಬರೆದು ತೋರಿಸಿ, ಎಲ್ಲವನ್ನೂ ನಮ್ಮ ಉಪಾಧ್ಯಾಯರಿಗೆ ಕ್ರಮವಾಗಿ ಓದಿ ತೋರಿಸಿದೆನು. ಮುಂದಿನ ಅಂಕಿಗಳನ್ನು ನೂರರವರೆಗೆ ಬರೆಯಲು ಬಂದಿತಾದರೂ ಓದಲು ಬರುತ್ತಿರಲಿಲ್ಲ. ನೂರರವರೆಗಿನ ಅಂಕಿಗಳನ್ನು ಮರಾಠಿಯಲ್ಲಿಯೇ ಓದತೊಡಗಿದೆ. ಆಗ ಮೊಗ್ಗಿಗಳನ್ನು ನಮ್ಮ ಮಾಸ್ತರರು ಬರೆದುಕೊಟ್ಟರು. ಬೆಳಗ್ಗಿನಲ್ಲಿ ಒಂದರಿಂದ ಹತ್ತರವರೆಗಿನ ಮೊಗ್ಗಿಗಳನ್ನು ಬರೆದು, ಓದಿ ತೋರಿಸಿದೆ. ಅಂದು ಮಧ್ಯಾಹ್ನದವರೆಗಿನ ಶಾಲೆಯಲ್ಲಿ ಹನ್ನೊಂದರಿಂದ

ಮೂವತ್ತರವರೆಗಿನ ಮೊಗ್ಗಿಗಳನ್ನು ಬರೆದುಬಿಟ್ಟೆ. ನನಗವು ಸರಿಯಾಗಿ ಓದಲು ಬರುತ್ತಿರಲಿಲ್ಲ. ಅವುಗಳನ್ನೇ ನಮ್ಮ ಮಾಸ್ತರರು ಒಂದೆರಡು ಸಲ ಹೇಳಿಕೊಟ್ಟರು. 30ರ ವರೆಗಿನ ಮೊಗ್ಗಿಗಳೆಲ್ಲವೂ ಮುಖಪಾಠವಾದವು.

ಆಗಿನ ಶಾಲೆಗಳಲ್ಲಿ 30ರ ಮೊಗ್ಗೆಯನ್ನು ಅಷ್ಟೇ ಕಲಿಸಿ ಬಿಡುತ್ತಿರಲಿಲ್ಲ. ಮುಂದೆ, ನನಗೆ ಪಾವು,[1] ಅರ್ಧ, ಪಾವಣೆ,[2] ಸೌವಾ,[3] ದೀಡೆ,[4] ಅಡಿಚ,[5] ಜೌಟ,[6] ಇವುಗಳನ್ನೆಲ್ಲ ಶಾಲೆಯಲ್ಲಿ ಹೇಳಿ ಕೊಟ್ಟರು. ಇವುಗಳನ್ನು ಕಲಿಯಲು ನನಗೆ ಒಂದು ವಾರಕ್ಕಿಂತ ಹೆಚ್ಚು ದಿನಗಳು ಬೇಕಾಗಲಿಲ್ಲ.

ಆಗ ಬಾಲಕರ ವರ್ಗದಲ್ಲಿ 'ಅ' ಮತ್ತು 'ಬ' ಎಂಬೆರಡು ಕ್ಲಾಸುಗಳಲ್ಲಿ ಎರಡು ವರ್ಷಗಳವರೆಗೆ ಕಲಿಸಿ, ಮೊದಲನೆಯ ಇಯತ್ತೆಗೆ ಹಾಕುತ್ತಿದ್ದರು. ಆದರೆ ನನಗೆ ಆ ಎರಡು ವರ್ಷದ ಅವಧಿ ಹೋಗಿ ಒಂದೇ ತಿಂಗಳಲ್ಲಿ 'ಬ' ಕ್ಲಾಸಿನಿಂದ 'ಅ' ಕ್ಲಾಸಿಗೆ ಹೋದೆನು. ಆಗ Macmillan ಕಂಪನಿಯು ಪ್ರಸಿದ್ಧಿಪಡಿಸಿದ, ಮುಂಬೈ ಸರಕಾರ ದವರು ಸಿದ್ಧಪಡಿಸಿದ 'ಬಾಲಬೋಧಿನಿ' ಎಂಬ ಪುಸ್ತಕವು ಅದೇ ತಾನೆ ಬಂದಿದ್ದಿತು. ಶಿಕ್ಷಕರ ಸಂಬಳದ ಸಿಪಾಯಿ[7] ನಮ್ಮೂರಿಗೆ ಬಂದಾಗ ಜೊತೆಯಲ್ಲಿ ತಂದ ಪುಸ್ತಕಗಳನ್ನು ಬೇಕಾದ ಹುಡುಗರಿಗೆಲ್ಲ ಮಾರಾಟ ಮಾಡುತ್ತಿದ್ದನು. ನಮ್ಮ ಮನೆಯವರು ಒಂದು ಪ್ರತಿಯನ್ನು ಕೊಂಡು ನನಗೆ ಒದಗಿಸಿದರು. ಆದರಲ್ಲಿಯ ಬಣ್ಣಬಣ್ಣದ ಚಿತ್ರಗಳೂ 'ರಠಈಕ' ಪದ್ಧತಿಯ ಅಕ್ಷರಪಟವೂ ನನ್ನ ಮನಸ್ಸನ್ನು ತುಂಬಾ ಸೆಳೆದವು. ಆ ಚಿತ್ರದ ಹೆಸರಿನಂತೆ ಬರೆದ 'ರಠಈಕ' ಮೊದಲಾದ ಅಕ್ಷರವನ್ನು ಕಲಿಸುವ ಚಿತ್ರ ಗಳನ್ನು ಹತ್ತಾರು ಸಲ ಹಾಳೆಗಳನ್ನು ಹೊರಳಿಸಿ, ಹೊರಳಿಸಿ ನೋಡಿದೆನು. 'ರಠ ಈಕ' ಪದ್ಧತಿಯ ಮರ್ಮವೇನೆಂಬುದು ನಮ್ಮ ಮಾಸ್ತರರಿಗೆ ಗೊತ್ತಿರಲಿಲ್ಲವಾದರೂ ನನಗೆ ಅದು ಗೊತ್ತಾಯಿತು. 'ಠಠಈಕ' ಪದ್ಧತಿಯಿಂದಲೂ ಅಕ್ಷರಗಳನ್ನು ಓದಲು, ಬರೆಯಲು ಪ್ರಾರಂಭ ಮಾಡಿದೆನು. ಆ 'ಬಾಲಬೋಧಿನಿ'ಯು, ಅದರೊಳಗಿನ ಚಿತ್ರಗಳು, ನನ್ನ ಮನಸ್ಸನ್ನು ಬಹಳೇ ಆಕರ್ಷಿಸಿದ್ದವು. ಎಂತಲೇ ಆ ಪುಸ್ತಕವನ್ನು ಕೈಬಿಟ್ಟು ಕೆಳಕ್ಕೆ ಇಡುತ್ತಿರಲಿಲ್ಲ. ತುಂಬ ಮೆಚ್ಚುಗೆಯಿಂದ ಅದನ್ನು ನೋಡಿ ಆನಂದಿಸುತ್ತಿದ್ದೆ. ಆ ಪುಸ್ತಕದಲ್ಲಿ ಬಂದ ಅನೇಕ ಕವಿತೆಗಳೂ ನನ್ನ ಮನಸ್ಸನ್ನು ರಂಜಿಸತೊಡಗಿದವು:

ಸುಣ್ಣವ ಕೊಡುವೆನು ಸುರಿಯಲೊ ಮಳೆಯೆ
ಬಣ್ಣವ ಕೊಡುವೆನು ಬಾರಲೆ ಮಳೆಯೆ

1. ಕಾಲು 2. ಒಂದು ದುಡ್ಡು 3. ಒಂದೂಕಾಲು 4. ಒಂದೂವರೆ
5. ಎರಡೂವರೆ 6. ಮೂರೂವರೆ 7. ಜವಾನ

ನುಣ್ಣಗೆ ನಮ್ಮೀ ಭೂಮಿಗೆ ನೀರನು ಉಣ್ಣಿಸಿ
ಬೆಳೆಯನು ಕೊಡುಕೊಡು ಮಳೆಯೆ

ಎಂಬ ಕವಿತೆಯು ಮತ್ತು

ಹಸಿರು ಬಣ್ಣದಿಂದೆಸೆಯುತ ಪಕ್ಕವ
ಪಸರಿಸಿ ಗಿಳಿ ಹಾರಾಡುವುದೈ
ಹಸುಳನೆ ನೋಡಿ ಕುಶಲತನದಿ ಜನ
ಉಸುರೆ ಮಾತು ಕಲಿಯುತ್ತಿಹುದೈ

ಇವೆರಡೂ ಕವಿತೆಗಳಂತೂ ನನಗೆ ಆಟದೊಡನೆ ಹೇಳುವ ಪದ್ಯಗಳಾದವು. ಬಲು ಬೇಗನೆ ಅವು ನನಗೆ ಪಾಠವಾಗಿದ್ದವು.

ಏಳಿರೇಳಿರಿ, ಸಾಲುಗೊಳ್ಳಿರಿ
ಕಾಲು ಜೋಡಿಸುತ್ತ ಕಂಬದಂತೆ ನಿಲ್ಲಿರಿ

ಎಂಬ ವ್ಯಾಯಾಮ[1] ಪದವು ನನ್ನ ಮನಸ್ಸಿಗೆ ತುಂಬ ಹಿಡಿಸಿತು. ಅದನ್ನು ಹಾಡುತ್ತಲೇ ನಾನು, ಅದರಲ್ಲಿ ಹೇಳಿದ ವ್ಯಾಯಾಮವನ್ನು ಮಾಡುತ್ತಿದ್ದೆ.

ವರ್ಷದ ಕೊನೆಯಲ್ಲಿ 'ಖಾನ್' ಎಂಬ ಹೆಸರಿನ ಅಸಿಸ್ಟೆಂಟ್ ಡೆಪ್ಯೂಟಿ ಎಜುಕೇಶನಲ್ ಇನ್‌ಸ್ಪೆಕ್ಟರರು ಶಾಲೆಯ ಪರೀಕ್ಷೆಗೆ ಬಂದರು. ನಾನು ಅವರು ಹೇಳಿದ ಶಬ್ದಗಳನ್ನು ಸರಿಯಾಗಿ ಬರೆದೆ. ಬಾಯಿಲೆಕ್ಕಗಳನ್ನು ತಪ್ಪದೇ ಮಾಡಿದೆ. 'ಬಾಲಬೋಧಿನಿ'ಯ ಪಾಠವನ್ನು ಚೆನ್ನಾಗಿ ಓದಿದೆ. ಆದುದರಿಂದ ನಾನು ಅವರ ಪರೀಕ್ಷೆಯಲ್ಲಿ ಪಾಸಾಗಿ ಮುಂದೆ ಮೊದಲನೆಯ ತರಗತಿಯಲ್ಲಿ ಕಾಲಿರಿಸಿದೆನು.

'ಬಾಲಬೋಧಿನಿ'ಯು ಮೊದಲನೇ ವರ್ಷ ಪ್ರಕಾಶವಾಗಿದ್ದರೂ ಒಂದರಿಂದ ಏಳರವರೆಗೆ ಕ್ರಮಿಕ-ಪುಸ್ತಕಗಳು[2] ಆ ವರ್ಷದ ಅಭ್ಯಾಸದಿಂದ ಪ್ರಚಾರದಲ್ಲಿ ಬಂದವು. ಶಾಲೆಯ ವಿದ್ಯಾರ್ಥಿಗಳೆಲ್ಲರೂ ಹೊಸ ಕ್ರಮಿಕ ಪುಸ್ತಕಗಳನ್ನೇ ಓದಿಕೊಳ್ಳಬೇಕಾಯಿತು. ಒಂದನೆಯ ಪುಸ್ತಕದಲ್ಲಿಯ ಪಾಠಗಳನ್ನು ಅದನ್ನು ಕೊಂಡ ದಿನವೇ ಸರಾಗವಾಗಿ ಓದಿ ಮುಗಿಸಿದ ನನಗೆ ತರಗತಿಯಲ್ಲಿ ಅವುಗಳ ವಿಷಯಗಳನ್ನು ಕುರಿತು ಹೇಳುವುದು ಕಷ್ಟವಾಗಲಿಲ್ಲ. ನಾನು ಓದುತ್ತಿರುವಾಗ ನಮ್ಮ ಹಳ್ಳಿಯ ಬಳಿಯ ನಿಂಗಾಪುರದಿಂದ ಅನೇಕ ಹುಡುಗರು ಶಾಲೆಗೆ ಬರುತ್ತಿದ್ದರು. ಆಗ ನನಗೆ ಪರಿಚಿತನಾದ ವೆಂಕಪ್ಪನು ಎರಡು ವರ್ಷಗಳಿಂದ ಈ ಶಾಲೆಗೆ ಬರುತ್ತಿದ್ದು ಇನ್ನೂ 'ಉ, ಊ' ಅಕ್ಷರವನ್ನು ಮುಗಿಸಿಯೇ ಇರಲಿಲ್ಲ. ಗೌಡರ ಬಸಪ್ಪ ಎಂಬುವನು

---

1 ಡ್ರಿಲ್ 2. ಪಠ್ಯಪುಸ್ತಕಗಳು

ಶಾಲೆಯಲ್ಲಿ ಎಲ್ಲ ಹುಡುಗರಿಗಿಂತ ಎತ್ತರನಾದ ಹುಡುಗ. ಅವನಿಗೆ 15 ವರ್ಷದ ಮೇಲೆ ವಯಸ್ಸಾಗಿದ್ದರೂ ಅವನು ಎರಡನೇ ತರಗತಿಯಲ್ಲಿ ಓದುತ್ತಿದ್ದ. ಹೀಗೆಯೇ ಶಾಲೆಯಿಲ್ಲದ ಅನೇಕ ಹಳ್ಳಿಗಳಿಂದ ನಮ್ಮೂರ ಶಾಲೆಗೆ ಕಲಿತು ಜಾಣರಾಗುವ ಅಪೇಕ್ಷೆಯಿಂದ ಅನೇಕ ಜನ ವಿದ್ಯಾರ್ಥಿಗಳು ಬರುತ್ತಿದ್ದರು. ಆ ಕಾಲದಲ್ಲಿಯೇ ನಮ್ಮ ಮೆಂಕಣ್ಣ ಮಾಸ್ತರರಿಗೆ ಏಳು ರೂಪಾಯಿಯಿಂದ ಒಂಭತ್ತು ರೂಪಾಯಿಗೆ ಸಂಬಳವು ಹೆಚ್ಚಿತು. ಅವರಿಗೆ ಸಂಭ್ರಮವೋ ಸಂಭ್ರಮ. ಸಂಬಳ ಹೆಚ್ಚಿದ ಕಾಗದವನ್ನು ಕೈಯಲ್ಲಿ ಹಿಡಿದುಕೊಂಡು, ನಮ್ಮೆಲ್ಲರ ಮನೆಗೂ ಅವರು ತೋರಿಸಿ, ತೋರಿಸಿ ಹೋದರು. ಆದರೆ ಒಂದು ಖೇದದ ಸಂಗತಿ, ಅವರಿಗೆ ಆ ಊರಿಂದ ವರ್ಗವಾಗಿ ಹತ್ತಿರದ ಹಳ್ಳಿಯಾದ ಮಮದಾಪುರಕ್ಕೆ ವರ್ಗವಾಗಿದ್ದಿತು. ನಮಗೆ ಕಲಿಸಲು ಇನ್ನೊಬ್ಬ ಮಾಸ್ತರರು ಬಂದರು. ಶೂರ್ಪಾಲಿಯ ಆಚಾರ್ಯರು ಅವರು. ಕನ್ನಡ ಮುಲ್ಕಿ ಪರೀಕ್ಷೆ ಪಾಸಾದವರು.

ಆವರು ಶಾಲೆಗೆ ಬಂದು ಎಲ್ಲ ಹುಡುಗರಿಗೂ ಕಲಿಸತೊಡಗಿದರು. ಕಲಿಸುವುದೆಂದರೇನು ? ಎಲ್ಲ ಹುಡುಗರನ್ನು ಕೈಗೆ ಬಂದಂತೆ ಹೊಡೆಯುವುದು. ನನಗಂತೂ ಹೊಡೆಯುವುದೆಂದರೆಯೇ ಕಲಿಸುವುದು ಎಂದೇನೋ ಎನಿಸಿತು. ಆದರೆ ನನ್ನ ಮೈಯನ್ನೇನೂ ಸ್ಪರ್ಶಿಸುವ ಪ್ರಸಂಗ ಅವರಿಗೆ ಬಂದಿರಲಿಲ್ಲ.

ಹುಡುಗರು ಬೀದಿಯಲ್ಲಿ ಆಡುವುದನ್ನು ಕಂಡರೆ ಮರುದಿನವೇ ಮಾಸ್ತರರ ಬಡಿಗೆಯ ಏಟಿನಿಂದ ಆ ಹುಡುಗನ ಮೈ ಊದಿಕೊಳ್ಳುವುದು. ಹನುಮಂತದೇವರ ಗುಡಿಯ ಸುತ್ತಮುತ್ತಲೂ ತಂಪಾದ ಅರಳೆಯ ಮರವು ಇದ್ದುದರಿಂದ ಅದರ ನೆರಳಲ್ಲಿ ಆಟವಾಡುವುದೆಂದರೆ ಹುಡುಗರಿಗೆಲ್ಲ ಹಿಗ್ಗು. ಹೀಗೆ ಆಟವಾಡುವ ಹುಡುಗರ ಅಂಗೈಯಲ್ಲಿ ಮರುದಿನ ಮಾಸ್ತರರ ಏಟಿನಿಂದ ನೋವಾಗುತ್ತಿತ್ತು. ಅವರು ಹೊಡೆಯುವುದನ್ನು ಕಂಡೋ ಅಥವಾ ರೂಪವನ್ನು ನೋಡಿಯೋ ನಮ್ಮೂರ ರಸಿಕ ಜನರು ಅವರನ್ನು 'ಲಮಾಣಿಗರ ಕೋಣ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಆಯಿತು. ನಾವೆಲ್ಲ ಅವರ ಕೈಯಲ್ಲಿ ಕಲಿತೆವು.

ಪರೀಕ್ಷೆ ಸಮಯ ಬಂದಿತು. ಪರೀಕ್ಷೆ ದಿನವೂ ಬಂದಿತು. ಧಾರವಾಡದ ವಿನಾಯಕ ಬಾಬಾಜಿ ಜೋಶಿ ಎಂಬವರು ತಮ್ಮ ಢಮಣಿ[1] ಗಾಡಿಯಲ್ಲಿ ಸಂಸಾರ ಸಮೇತ ಪರೀಕ್ಷೆಗಾಗಿ ನಮ್ಮ ಶಾಲೆಗೆ ದಯಮಾಡಿಸಿದರು. ಶಾಲೆಯ ಹುಡುಗರ ವಾರ್ಷಿಕ ಪರೀಕ್ಷೆಯು ನಡೆಯಿತು. ಆ ಪರೀಕ್ಷೆಯ ಪರಿಣಾಮದಲ್ಲಿ 'ಒಂದೂವರೆ'

1. ಸಾರೋಟು ಬಂಡಿ

ಹುಡುಗರು ಮಾತ್ರ ಪಾಸಾಗಿದ್ದರು, ಒಂದನೆಯ ಇಯತ್ತೆಯಲ್ಲಿ ಕಲಿಯುತ್ತಿರುವ ನಾನು ಪೂರ್ಣ ಪಾಸು. ಎರಡನೆಯ ಇಯತ್ತೆಯನ್ನು ಕಲಿಯುತ್ತಿರುವ ನಿಂಗಾಪುರದ ಬಸಪ್ಪನು ಅರ್ಧ ಪಾಸು. ಶಾಲೆಯ ಪರೀಕ್ಷೆಯೂ ಚೆನ್ನಾಯಿತು. ಅದರೊಂದಿಗೆ ಮುಂದೆ ಎರಡು ದಿನಗಳಲ್ಲಿಯೇ ಈ ಮಾಸ್ತರರಿಗೆ ಆ ಶಾಲೆಯಿಂದ ಬೇರೂರಿಗೆ[1] ವರ್ಗವಾಯಿತು. 'ಲಮಾಣಿಗರ ಕೋಣ'ವು ನಮ್ಮ ಊರನ್ನು ಬಿಟ್ಟುಹೋಯಿತು. ಆದರೆ ಮೊದಲಿನ ವೆಂಕಣ್ಣ ಮಾಸ್ತರರೇ ಅಲ್ಲಿ ಇಲ್ಲಿ ಪ್ರಯತ್ನಮಾಡಿ, ಯಾರ ಯಾರ ವಶೀಲಿ[2]ಯಿಂದಲೋ ಇಲ್ಲಿಗೆ ವರ್ಗ ಮಾಡಿಸಿಕೊಂಡರು. ಅವರ ಬಳಿಯಲ್ಲಿ ನಾನು ಎರಡನೆಯ ಇಯತ್ತೆಯನ್ನು ಕಲಿತೆ. ಮೂರನೆಯ ತರಗತಿಯಲ್ಲಿಯೂ ಪಾಸಾದೆ. ನಾಲ್ಕನೆಯ ತರಗತಿಗೆ ಬಂದಾಗ ನಮಗೊಂದು ಕಠಿಣ ಪ್ರಸಂಗವೇ ಬಂದಿತು, ವ್ಯವಹಾರಿ ಅಪೂರ್ಣಾಂಕಗಳನ್ನು, ಸಮ-ವಿಷಮ ತ್ರೈಮಾಸಿಕಗಳನ್ನೂ, ಪಂಚರಾಶಿಕ, ಸರಳಬಡ್ಡಿ ಲೆಕ್ಕಗಳನ್ನೂ ಕಲಿಸಲು ನಮ್ಮ ಮಾಸ್ತರಿಗೆ ಬರುತ್ತಲೇ ಇರಲಿಲ್ಲ. ನಾವು ಏನುಮಾಡಬೇಕೆಂಬುದು ತಿಳಿಯದೇ ಇದ್ದೆವು.

ನಮ್ಮ ಮನೆಗೆ ಬರುವ ಬ್ರಾಹ್ಮಣನೊಬ್ಬನು ಮುಲ್ಕಿ ಪರೀಕ್ಷೆಯ ಅಭ್ಯಾಸಿಯಾದುದರಿಂದ ಅವನ ಕಡೆಗೆ ಈ ಎಲ್ಲ ಲೆಕ್ಕಗಳ ರೀತಿಯನ್ನು ನಾನೇ ಅರಿತುಕೊಂಡು ಎಲ್ಲ ಹುಡುಗರೊಂದಿಗೆ ಗಣಿತ ಪುಸ್ತಕದ ಸಹಾಯದಿಂದ ಮಾಡತೊಡಗಿದೆ. ವೆಂಕಣ್ಣ ಮಾಸ್ತರರಿಗೆ ಈ ನಮ್ಮ ಲೆಕ್ಕ ಕಲಿಯುವ ರೀತಿಯನ್ನು ಕಂಡು ಬಹಳ ಸಂತೋಷವಾಯಿತು. "ನೋಡಿ, ವಿದ್ಯಾರ್ಥಿಗಳೆಂದರೆ ಹೀಗಿರಬೇಕು, ಎಲ್ಲ ಪಾಠಗಳಿಗೂ ಶಿಕ್ಷಕರ ಮೇಲೆಯೇ ಅವಲಂಬಿಸಿ ಕೂಡಬಾರದು" ಎಂಬ ಪ್ರಶಂಸಾಪತ್ರವನ್ನು ನಮಗೆ ಸಲ್ಲಿಸಿದರು. ನಾಲ್ಕನೆಯ ಇಯತ್ತೆಯಲ್ಲಿಯೂ ನಾನು ಪಾಸಾದೆ. ಅದೇನೋ ನಮ್ಮ ನಾಲ್ಕನೇ ಇಯತ್ತೆಯ ಲೆಕ್ಕ ಬರದ ಮಾಸ್ತರರು ಐದನೆಯ ತರಗತಿಯನ್ನು ಹೊಸದಾಗಿ ತೆರೆದರು.

ನಿಂಗಾಪುರದಿಂದ ಸಿದ್ದನಗೌಡನೆಂಬ ವಿದ್ಯಾರ್ಥಿಯೊಬ್ಬ ನಮ್ಮ ಶಾಲೆಗೆ ಬರುತ್ತಿದ್ದ. ಅವನ ಶಿಕ್ಷಣದ ರೀತಿಯನ್ನು ನೋಡಿದವರಿಗೆ ವರ್ಷವರ್ಷವೂ ಅವನು ಪಾಸಾಗಿ ಮೇಲಿನ ಇಯತ್ತೆಗೆ ಹೋಗುವುದು ಆಶ್ಚರ್ಯವೆನಿಸುವ ಮಾತಾಗಿತ್ತು. ಆದರೆ ಸಿದ್ದಪ್ಪನ ಮನೆಯಿಂದ ವರ್ಷ ವರ್ಷವೂ ತಮಗೆ ದೊರೆಯುತ್ತಿರುವ ಸಂಭಾವನೆಯ ಮೂಲಕ ಮಾಸ್ತರರು ಅವನನ್ನು ಮೇಲಿನ ಇಯತ್ತೆಗೆ ಕಳುಹಿಸುತ್ತಿದ್ದರು. ಎಂತಲೇ ಈಗಲೂ ಆ ಸಂಭಾವನೆಯ ಆಸೆಯಿಂದಲೇ ಆತನಿಗಾಗಿ ಐದನೆಯ ತರಗತಿಯನ್ನು ಹೊಸದಾಗಿ ಪ್ರಾರಂಭಿಸಿದ್ದರು. ನನಗೂ ಅದು ಅನುಕೂಲವಾಯಿತು. ಮುಂದೆ ಕಲಿಯಲು ಮಾರ್ಗವಿಲ್ಲದೆ ನಾಲ್ಕನೆಯ ಇಯತ್ತೆ ಕಲಿತು ಮನೆಯಲ್ಲಿಯೇ

1. ಬೇರೆಯ ಊರಿಗೆ 2. ಪ್ರಭಾವ

ಕುಳಿತಿದ್ದ ನಮ್ಮ ಅಣ್ಣನೊಬ್ಬನು ನಮ್ಮೊಡನೆ ಐದನೇ ತರಗತಿಗೆ ಹೆಸರು ಹಚ್ಚಿ ವೆಂಕಣ್ಣ ಮಾಸ್ತರರ ವಿದ್ಯಾರ್ಥಿಯಾದ.

ಸರಿ. ಐದನೇ ತರಗತಿಯ ವ್ಯಾಕರಣ ಜ್ಞಾನವನ್ನೂ, ಗಣಿತ ಜ್ಞಾನವನ್ನೂ, ಇತಿಹಾಸ, ಭೂಗೋಲಗಳ ಜ್ಞಾನವನ್ನೂ ನಮಗೆ ಕೊಡಲು ನಮ್ಮ ಈ ವೆಂಕಣ್ಣ ಮಾಸ್ತರರು ಸಮರ್ಥರಾಗಿರಲಿಲ್ಲ. ಆದುದರಿಂದ ಐದನೆಯ ತರಗತಿಯ ಅಭ್ಯಾಸ ವನ್ನು 'ನಮ್ಮದು ನಾವೇ' ಮಾಡಿದೆವು.

ಪರೀಕ್ಷೆಯಾಯಿತು. ನಾನು, ನಮ್ಮ ಅಣ್ಣ (ಬಲರಾಮ) ಇಬ್ಬರೂ ಪಾಸಾದೆವು. ಪರೀಕ್ಷೆಗೆ ಬಂದ ಗೋವಿಂದ ವೆಂಕಟೇಶ ದೇಶಪಾಂಡೆ ಎಂಬ ಶಿಕ್ಷಣಾಧಿಕಾರಿಗಳು ನಮ್ಮಿಬ್ಬರ ಓದಿಗಾಗಿ ತುಂಬಾ ಸಂತೋಷವನ್ನು ಪ್ರಕಟಿಸಿದರು. ನನಗೆ ಒಂದು ಪುಸ್ತಕವನ್ನು ಇನಾಮಾಗಿಯೂ ಕೊಟ್ಟರು. ಅಷ್ಟಕ್ಕೇ ಬಿಡಲಿಲ್ಲ ಅವರು. ನಮ್ಮ ತಂದೆಯವರನ್ನು ಕರೆಕಳಿಸಿ–"ನಿಮ್ಮ ಮಕ್ಕಳಿಬ್ಬರೂ ಬಹಳ ಬುದ್ಧಿವಂತರಿದ್ದಾರೆ. ಅವರನ್ನು ಈ ಕನ್ನಡದಲ್ಲಿಯೇ ಕೊಳೆಯಿಸಬೇಡಿರಿ. ಇಂಗ್ಲೀಷ್ ಕಲಿಸಲು ಇಬ್ಬರನ್ನೂ ಎಲ್ಲಿಗಾದರೂ ನೀವು ಕಳಿಸಲೇಬೇಕು" ಎಂದು ಒತ್ತಾಯದಿಂದ ಹೇಳಿದರು.

ಐದನೆಯ ತರಗತಿಯಲ್ಲಿ ಪಾಸಾದ ನಮಗೆ ಮುಂದೆ ಎಲ್ಲಿಗೆ ಹೋಗಬೇಕು ? ಎಂಬ ಪ್ರಶ್ನೆ ಮನಸ್ಸಿನಲ್ಲಿ ಎದ್ದು ನಿಂತಿತು. ಆಗ ಗೋಕಾಕದಂತಹ ಪಟ್ಟಣದಲ್ಲಿ ಕೂಡ ಒಂದು ಹೈಸ್ಕೂಲು ಇರಲಿಲ್ಲ. ಇಂಗ್ಲೀಷ್ ಕಲಿಯಲು ನಾವು ಬೆಳಗಾವಿಗೇ ಹೋಗಬೇಕಾಗಿತ್ತು. ಆದರೆ ಬೆಳಗಾವಿಯಲ್ಲಿ ಇಟ್ಟು ಕಲಿಸುವುದಕ್ಕೆ ತಕ್ಕಂತಹ ಆರ್ಥಿಕ ಪರಿಸ್ಥಿತಿಯು ನಮಗೆಲ್ಲಿಯದು ? ತಂದೆ ವೃದ್ಧರು, ವಿರಕ್ತ ಸ್ವಭಾವದವರು. ಹಿರಿ ಯಣ್ಣನಾದ ರಾಘಣ್ಣನು ಯಾವ ಚಿಂತೆಯನ್ನೂ ಮಾಡದವನು. ಮನೆಯ ಹಿರಿಯ ತನ ಮಾಡುತ್ತಿದ್ದ ಉಡುಪಣ್ಣನು ಉದಾಸೀನನಾಗಿದ್ದನು. ಹೀಗಿರುವಾಗ ಮುಂದಿನ ಶಿಕ್ಷಣದ ದಾರಿ ನಮಗೆಲ್ಲಿ ? ಎಂದು ಮನೆಯಲ್ಲಿಯೇ ಇದ್ದು ಬಿಟ್ಟೆವು.

ಆಗ ಸುಮ್ಮನೆ ಕೂಡುವುದೇಕೆಂದು ನಮ್ಮ ಮನೆಯಲ್ಲಿಯ ಹಿಂಡುವ ದನಗಳನ್ನು ಮೇಯಿಸಿಕೊಂಡು ಬರುತ್ತಿದ್ದೆವು. ಪತ್ರಾವಳಿಗೆ ಎಲೆ ಸಂಗ್ರಹಿಸಿ ತರುತ್ತಿದ್ದೆವು. ಆಗ ಮನೆಯಲ್ಲಿ ಯಾರೂ ತಟ್ಟೆಯಲ್ಲಿ ಊಟ ಮಾಡರು. ಬ್ರಾಹ್ಮಣರಾದವರು ಎಲೆ ಗಳಲ್ಲಿಯೇ ಊಟ ಮಾಡುತ್ತಿರಬೇಕೆಂಬುದು ನಮ್ಮ ಸಂಪ್ರದಾಯ. ಆಗ ನಾವು ಅದನ್ನು ಮೀರಿರಲಿಲ್ಲ. ಇವೆಲ್ಲ ಮನೆಗೆಲಸಗಳಲ್ಲಿ ಮುಂದೆ ನಾವೇನು ಮಾಡ ಬೇಕೆಂಬುದು ನಮಗೆ ಗೊತ್ತಿದ್ದರೂ ನಿರ್ವಾಹವಿಲ್ಲದೆ ಅದನ್ನು ಮರೆತು ಮನೆಗೆಲಸದಲ್ಲಿ ದಿನಗಳನ್ನು ನೂಕುತ್ತಿದ್ದೆವು. ನನ್ನ ಪ್ರಾಥಮಿಕ ಶಿಕ್ಷಣದ ಕಥೆಯಿದು. ಮುಂದಿನ ಭಾಗದ ಶಿಕ್ಷಣವನ್ನು ಕುರಿತು ಸಮಯ ಬಂದಾಗ ಮತ್ತೆ ಹೇಳುತ್ತೇನೆ. (ಸಶೇಷ)

ಹೊಸ ಓದು

ಅಗ್ನಿಸ್ತಂಭ (ಕವನ ಸಂಕಲನ)

ಲೇಖಕರು: **ಎಚ್. ಎಸ್. ವೆಂಕಟೇಶಮೂರ್ತಿ**

ಪ್ರಕಾಶಕರು: **ಕೃತಿ ಪ್ರಕಾಶನ, ಬೆಂಗಳೂರು–70**

ಪುಟಗಳು: 40+vii, ಬೆಲೆ: ರೂ. **15–00**

'ಅಗ್ನಿಸ್ತಂಭ' ಎಚ್. ಎಸ್, ವೆಂಕಟೇಶಮೂರ್ತಿಯವರ ಈಚಿನ ಕವನ ಸಂಕಲನ. ಕಾವ್ಯಕರ್ಮದ ಬಗ್ಗೆ ಧಾರ್ಮಿಕವೋ ಎನ್ನಬಹುದಾದಷ್ಟು ಶ್ರದ್ಧೆಯಿಟ್ಟು ಕೊಂಡಿರುವ ಈ ಕವಿ, ಕಾವ್ಯದಲ್ಲಿ ಹಲವಾರು ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. 'ಅಗ್ನಿಸ್ತಂಭ'ದಲ್ಲೂ ಸಹ ಬೇರೆ ಬೇರೆ ಕವಿತೆಗಳಲ್ಲಿ ವಿಭಿನ್ನ ಲಯ ಗಳನ್ನು ಬಳಸಿ ಪ್ರಯೋಗ ಮಾಡಿದ್ದರೂ ಅದರ ಜೊತೆಗೇ ದಂತಕಥೆಗೆ, ಪುರಾಣಕ್ಕೆ ಅರ್ಥದ ಹೊಸ ಹೊಸ ಆಯಾಮಗಳನ್ನು ಕೊಡುವ ಪ್ರಯತ್ನ ಹೆಚ್ಚು ಮುಖ್ಯ ವಾಗಿದೆ. 'ಅಗ್ನಿಸ್ತಂಭ', 'ಚಕ್ರವ್ಯೂಹ', 'ಪ್ರತೀಕ್ಷೆ', 'ಕಿಂದರಿಜೋಗಿ',–ಈ ಕವನ ಗಳಲ್ಲಿ ಇಂಥ ಪ್ರಯತ್ನವನ್ನು ಕಾಣಬಹುದು. ಇಂಥ ಗಂಭೀರ ಆಸಕ್ತಿಯ ಬಹು ಮುಖ ಅರ್ಥಗಳ ಆಯಾಮಗಳ ಕವನಗಳ ಜೊತೆಗೇ 'ಯುಗಾದಿ ಮತ್ತು ಮಗು', 'ಕಾರಂಜಕೆ ಕೊಕ್ಕರೆ', 'ದೀಪಾವಳಿ', 'ಗರಿ'ಗಳಂಥ ಮುದಕೊಡುವ ಸರಳ ಕವಿತೆಗಳು ಹೊಸ ಲವಲವಿಕೆಯೊಂದನ್ನು ತೋರುತ್ತವೆ.

'ಸಮಾಧಿ', 'ಬೆಳುಗೊಳದಲ್ಲಿ'–ಈ ಕವನಗಳಲ್ಲಿ ರೂಪ ಮತ್ತು ಅರ್ಥಗಳ ಸಮತೋಲನದ ಜೊತೆಗೆ ಆಧ್ಯಾತ್ಮಿಕವೆನ್ನಬಹುದಾದ ತುಡಿತವನ್ನು ಕಾಣಬಹುದು. ಅದರಲ್ಲೂ 'ಸಮಾಧಿ' ಮಾನವೀಯತೆಯ, ನೋವಿಗೆ ಸ್ಪಂದಿಸುವ ನೆಲೆಯಲ್ಲಿ ಬದುಕಿನ ಅಖಂಡತೆಯನ್ನು ಗುರ್ತಿಸಿಕೊಂಡು ದರ್ಶನವಾಗಿ ಬೆಳೆಯುತ್ತದೆ. ಇದರ ವಿಶಿಷ್ಟ ಲಯದಲ್ಲಿ ಮತ್ತೆ ಕವಿಯ ಶ್ರದ್ಧೆಯ ಕಾವ್ಯಕರ್ಮ ಕೆಲಸಮಾಡಿದೆ. 'ಪ್ರತೀಕ್ಷೆ' ಯಲ್ಲಿ ಒಂದು ಹೂತ ಪ್ರತಿಮೆಯನ್ನು ಮೇಲೆತ್ತಬಯಸುವ ಸಾಮಾನ್ಯ ಸಂದರ್ಭದ

ಜೊತೆಗೆ ಒಂದು ಕಾವ್ಯಸಂದರ್ಭ ಸಹ ಕವಿಯನ್ನು ಕಾಡಿದೆ. ಇಡಿಯ ಸಂಕಲನದಲ್ಲಿ ಆ ಕಾವ್ಯಸಂದರ್ಭಕ್ಕೆ ಕವಿ ಒಳಗಿನಿಂದ ಪ್ರತಿಕ್ರಿಯಿಸುತ್ತಾರೆ ಎನ್ನಿಸುತ್ತದೆ:

"ನೀರ ಮೇಲೊಂದು ಕೆಳಗೇಳು ಮಡಿಯುಲ್ಲ" (ಪ್ರತೀಕ್ಷೆ)
"ಮುಂದೆ ಚಂಡಪ್ರಚಂಡ ಚಂಡೆಯುಬ್ಬರ ಬಡಿತ" (ತಲಕಾವೇರಿಗೆ)

'ಚಕ್ರವ್ಯೂಹ' ಹೆಚ್ಚು ಮಹತ್ವಾಕಾಂಕ್ಷೆಯ ಕಾವ್ಯದ ಚಕ್ರವ್ಯೂಹವೂ ಆಗಿದೆ. ಇಲ್ಲಿನ ಬಿಗಿಬಂಧದ ಚಿತ್ರಗಳು ಪೌರಾಣಿಕ ಚಿತ್ರಗಳ ಮೂಲಕ ಸಮಕಾಲೀನ ಸತ್ಯಗಳನ್ನು ಹೇಳುತ್ತಿವೆ:

"ಸಾಲಭಂಜಿಕೆ ಮೈತ್ರೆಯ ಡೋಲಿಗೊರಗಿ
ಖಾದಿಯ ಡುಬ್ಬ"
"ಮೂಡುವ ಮುಳುಗುವ ಸೂರ್ಯ ತಿರುಬೋಕಿ,
ಪಕ್ಷಾಂತರಿಸುವ ಸೃಷ್ಟಿಯಲಿ....

'ಬೆಳುಗೊಳದಲ್ಲಿ' ಒಂದು ನೆಲೆಯಲ್ಲಿ ಸರಳ–ಮತ್ತೊಂದು ನೆಲೆಯಲ್ಲಿ ಗಹನವೂ ಹೌದು. ಮೂರ್ತಿಯವರು ಯಾವ ವಿಷಯ ಹೇಳುವಾಗಲೂ ಅಲ್ಲಿ ಹೇಗೋ ಕಾವ್ಯದ ವಿಷಯ ತಲೆಹಾಕಿ ಬಿಡುತ್ತದೆ:

"ಕಷ್ಟವಲ್ಲವೆ ಹೇಳಿ ಮೌನದನುಸಂಧಾನ
ಶಬ್ದಜೀವಿಗಳಾದ ಕವಿಗಣಕ್ಕೆ ?" (ಬೆಳುಗೊಳದಲ್ಲಿ)

'ಅಗ್ನಿಸ್ತಂಭ' ಪುರಾಣದ ನರಸಿಂಹನ ಹುಟ್ಟಿನ ಹಿನ್ನೆಲೆಯಲ್ಲಿ ಪ್ರಹ್ಲಾದನ ತಬ್ಬಲಿತನವನ್ನು, ಆಧುನಿಕತೆಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಾನವನ ತಬ್ಬಲಿತನವನ್ನು ಗ್ರಹಿಸಿ ಅವತಾರಕ್ಕೆ ಹೊಸ ಅರ್ಥದ ಆಯಾಮವನ್ನೊದಗಿಸುತ್ತದೆ. ಇಂಥ ಪ್ರಯತ್ನಗಳು 'ಕಾವ್ಯಪ್ರವೇಶ', 'ವಾಮನ'ಗಳ ಕ್ರಮದಲ್ಲೂ ಕಾಣುತ್ತವೆ.

ಈ ಸಂಕಲನದಲ್ಲಿ ಹಲವು ದೃಷ್ಟಿಗಳಿಂದ ವಿಶಿಷ್ಟವಾದ ಕವಿತೆ 'ಸಮಾಧಿ'. ಅಪಘಾತವನ್ನು ನೋಡಿ ದಿಗ್ಭ್ರಾಂತಿಗೊಂಡು, ತನ್ನವರು ಯಾರೂ ಅಲ್ಲಿಲ್ಲ ಎಂದು ಸಮಾಧಾನಗೊಂಡು, ಆಮೇಲೆ ಮನುಷ್ಯನ ನೋವಿಗೆ ಸ್ಪಂದಿಸುತ್ತಾ

"ನಿತ್ಯವೂ ಸುರಿಯುವುದು ಮರ್ತ್ಯಕ್ಕೆ ಮೇಲಿಂದ
ಬೆಳಕು ಬಿಸಿ ಜೀವಾಂಶ ಸ್ವಸ್ತಿ ಎಂದು
ಮಣ್ಣು ಅಕ್ಷಯ ಪಾತ್ರೆ, ಒಂದು ಕೊಟ್ಟರೆ ಸಹಸ್ರ
ಬೆಳಗಾಗ ಅರಳುವವದೆಷ್ಟು ಕಣ್ಣು"

ಎಂದು ದರ್ಶನವಾಗಿ ಬೆಳೆಯುತ್ತದೆ.

'ಬಾಗಿಲು ಬಡಿವ ಜನ'ದಲ್ಲಿ ಕುತೂಹಲ ಕೆರಳಿಸಿ 'ಕುಂಚಿಸ ತೇರಿ'ನಲ್ಲಿ ಆಸೆ ಹುಟ್ಟಿಸಿ, 'ಹರಿಗೋಲಿ'ನಲ್ಲಿ ಯಾಕೋ ದಿಕ್ಕು ತಪ್ಪಿ ತಟಸ್ಥವಾದಂತೆ ತೋರಿದ ಮೂರ್ತಿಯವರ ಕವಿತೆಗೆ ಈಗ ಬಂದಿರುವ "ಅಗ್ನಿಸ್ತಂಭ" ಕೆಲವು ಹೊಸ ಸಾಧ್ಯತೆಗಳನ್ನು ತೆರೆದಿದೆ. "ಮಾತುಗಳ ಹಂಗಿಲ್ಲ ಇಂಥ ಕೃತಿಗೆ" ಎಂಬ ಆಶಯ ಹೊತ್ತಿದೆ,

—ಸ. ಉಷಾ

ಕಲ್ಲು ಕರಗುವ ಸಮಯ (ಕತೆಗಳು)

ಲೇಖಕರು: **ಪಿ. ಲಂಕೇಶ್**

ಪ್ರಕಾಶಕರು: ಪತ್ರಿಕೆ ಪ್ರಕಾಶನ, ಬೆಂಗಳೂರು.

ಪುಟಗಳು 185, ಬೆಲೆ ರೂ. **25–00**

ಲಂಕೇಶರ ಪತ್ರಿಕಾ ವ್ಯವಸಾಯ ವೃತ್ತಿ ಅವರ 'ಕಲ್ಲು ಕರಗುವ ಸಮಯ' ಸಂಕಲನದ ಕಥೆಗಳ ಬಂಧದ ಮೇಲೆ ಗರಿಷ್ಠ ಪ್ರಭಾವವನ್ನು ಬೀರಿದೆ. ಈ ಸಂಕಲನದ ಕಥೆಗಳು ವರದಿಯ ಧಾಟಿಯಲ್ಲಿ ತೊಡಗುತ್ತ ಒಂದು ರೀತಿಯ ವಿಶಿಷ್ಟವಾದ ನಿರ್ಲಿಪ್ತತೆಯನ್ನು ಪಡೆದುಕೊಳ್ಳುತ್ತವೆ. ಆದರೆ ಈ ಕಥೆಗಳು ನಿರ್ಲಿಪ್ತತೆಯನ್ನು ಪಡೆದುಕೊಳ್ಳುತ್ತಿರುವಾಗಲೇ ಅವರ ಹಿಂದಿನ ಕಥೆಗಳಲ್ಲಿದ್ದ, ವೈಯುಕ್ತಿಕ ಕಳವಳದ ಮೂಲಕ ಬರುವ ಲಿರಿಕಲ್ ಗುಣವನ್ನು ಕಳೆದುಕೊಳ್ಳುತ್ತವೆನಿಸುತ್ತದೆ. ಮುನ್ನುಡಿಕಾರರೇನೋ ಅವರ ಹಿಂದಿನ ಕಥೆಗಳೊಂದಿಗೆ ಈ ಸಂಕಲನದ ಕಥೆಗಳನ್ನು ಹೋಲಿಸಬಾರದಾಗಿ ಹೇಳುತ್ತಾರೆ. ಆದರೆ ಇವರ ಹಿಂದಿನ ಸಂಕಲನದ ಒಳ್ಳೆಯ ಕಥೆಗಳು ನೆನಪುಗಳಾಗಿ ಕಾಡುತ್ತವಲ್ಲ! 'ಕಲ್ಲು ಕರಗುವ ಸಮಯ' ಸಂಕಲನದ ಕಥೆಗಳು ಈ ಹಿನ್ನೆಲೆಯಲ್ಲಿ ನಮ್ಮಲ್ಲಿ ಅತೃಪ್ತಿಯನ್ನು ಹುಟ್ಟಿಸುವುದು ನಿಜ.

ಈ ಸಂಕಲನದ ಕಥೆಗಳು ಮುಖ್ಯವಾಗಿ ಮನುಷ್ಯನ ನಿಜರೂಪ ದರ್ಶನದ ಉದ್ದೇಶದೊಂದಿಗೆ ತೊಡಗುತ್ತವೆ. ಇವುಗಳ ಹಿಂದೆ ಎಲ್ಲ ಸಾಮಾಜಿಕ ಮತ್ತು ಕೌಟುಂಬಿಕ ದುರಂತಗಳ ಕಾರಣಗಳು ವ್ಯಕ್ತಿತ್ವಗಳಲ್ಲಿ ಬೇರುಬಿಟ್ಟಿರುತ್ತವೆನ್ನುವ ನಂಬಿಕೆ ಇದ್ದಂತೆ ತೋರುತ್ತವೆ. ವೈಯುಕ್ತಿಕ ಜೀವನ–ಇತಿಹಾಸ ಮತ್ತು ಸಾಮಾಜಿಕ ಸಂದರ್ಭ ಈ ಮೂರೂ ಅಕ್ಷಗಳು ಪರಸ್ಪರ ಸಂಧಿಸುವಲ್ಲಿ ಮನುಷ್ಯನ ನಿಜರೂಪ ದರ್ಶನ ಸಾಧ್ಯವಾಗುತ್ತದೆನ್ನುವ ನಂಬಿಕೆಯಿಂದ ಈ ಕಥೆಗಳು ಹೊರಡುತ್ತವೆ. ಈ ಮೂರು ಕೋ–ಆರ್ಡಿನೇಟ್‌ಗಳ ನೆಲೆಯಿಂದ ತೊಡಗುವ ಲಂಕೇಶ್ ಅವರ ಮನುಷ್ಯರೂಪದ ಶೋಧನೆ ಮೂಲಭೂತವಾಗಿ ಒಬ್ಬ ಸಮಾಜಶಾಸ್ತ್ರಜ್ಞನ ರೀತಿಯದು.

ಸಂಕಲನದ 'ವೃಕ್ಷದ ವೃತ್ತಿ', 'ಒಂದು ಬಾಗಿಲು', 'ತೋಟದವನು'–ಈ ಕಥೆಗಳಲ್ಲಿ ಬರುವ ನಿರೂಪಣೆಯ ಶೈಲಿ ವಿಷಯವೊಂದರ ಶಾಸ್ತ್ರೀಯ ವಿವರಣೆಯ ಶೈಲಿಯ ಹಾಗೆಯೇ ತೋರುತ್ತದೆ. ಸಂಕಲನದ ಒರಟೆಂದು ತೋರಬಹುದಾದ 'ಸಹಪಾಠಿ' ಕೂಡ ಇಂಥ ಶಾಸ್ತ್ರಜ್ಞನೊಬ್ಬನ ಒಂದು ಪ್ರಯೋಗದಂತೆ ಮೂಡಿಬಂದಿದೆ. ಕಿರು ಮಲ್ಲಿಗೆಯ ಬಸವೇಗೌಡನ ಬಿಡುಗಡೆಗೆ ಪ್ರಯತ್ನಿಸುವ ಬರಹಗಾರ ಭಗವಾನ್ ಬಸವೇ ಗೌಡನ (ಸಮಸ್ಯೆಯನ್ನು ಅರಿಯಲು ಅವನ ವ್ಯಕ್ತಿತ್ವದ) ನಿಜವಾದ ಪರಿಚಯ ಪಡೆಯಲು ಅವನ ಜೀವನಕಥೆ–ಚರಿತ್ರೆ ಮತ್ತು ಕಿರುಮಲ್ಲಿಗೆಯ ಸಾಮಾಜಿಕ ಸಂದರ್ಭ ಗಳು–ಈ ಮೂರು ಅಕ್ಷಗಳನ್ನು ಹಿಡಿದು ಹೊರಡುತ್ತಾನೆ. ಕಿರುಮಲ್ಲಿಗೆಯ ಸಮಾಜ ಮತ್ತು ಅದರ ಹಿನ್ನೆಲೆಗಿರುವ ಚರಿತ್ರೆ, ಇವುಗಳಿಗೆ ಮುಖಾಮುಖಿಯಾಗುವ ಬಸವೇ ಗೌಡನ ವೈಯುಕ್ತಿಕ ಜೀವನ ಇವೆಲ್ಲ ಸೇರಿ ಸೃಷ್ಟಿಸಿರುವ ತಳಮಳದ ಸ್ಥಿತಿಯಲ್ಲಿರುವ ಬಸವೇಗೌಡನನ್ನು ಗುರುತಿಸುತ್ತಾರೆ. ಇಂಥ ತಳಮಳದ ಸ್ಥಿತಿಯಿಂದ ಬಸವೇಗೌಡ ನನ್ನು ಬಿಡುಗಡೆಗೊಳಿಸಲು ನಡೆಸುವ ಭಗವಾನನ ಪ್ರಯೋಗವು ಬಸವೇಗೌಡನ ಸಾವಿನಲ್ಲಿ ಪರ್ಯವಸಾನಗೊಳ್ಳುತ್ತದೆ. ಭಗವಾನನ ಪ್ರಯೋಗವು ಚರಿತ್ರೆ ಮತ್ತು ಸಮಾಜಗಳೆರಡನ್ನೇ ತನ್ನ ದೃಷ್ಟಿಯಲ್ಲಿಟ್ಟುಕೊಂಡಿರುವುದರಿಂದ, ಮನುಷ್ಯನ ಸಂದರ್ಭದ ಮೂರನೆಯ ಆಯಾಮವನ್ನು ಅದು ಗ್ರಹಿಸದೇ ಹೋಗುವುದರಿಂದ ಇದು ಬಸವೇಗೌಡನ ಸಾವಿನಲ್ಲಿ ಪರ್ಯವಸಾನಗೊಳ್ಳುತ್ತದೆಂದು ಭಾವಿಸಬಹುದು.

ಹೀಗೆ ಮನುಷ್ಯ ದರ್ಶನಕ್ಕೆ ಮೂರು ಅಕ್ಷಗಳನ್ನು ಹಿಡಿದು ಹೊರಡುವ ಈ ಸಂಕಲನದ ಬಹುತೇಕ ಕಥೆಗಳು ಮನುಷ್ಯನ ಸ್ಪಷ್ಟರೂಪದ ದರ್ಶನ ಪಡೆಯಲಾರದೇ ಒಂದು ರೀತಿಯ ಸಂದಿಗ್ಧದ ವಿಮಂಚನೆಯಲ್ಲಿ ನಿಲ್ಲುತ್ತವೆ. ಇಂಥಲ್ಲಿ ಮನುಷ್ಯನ ನಿಗೂಢ ಆಳದ ಅರಿವಿನಿಂದ ಹುಟ್ಟಿದ ಬೆರಗಿದೆ. 'ಕಲ್ಲು ಕರಗುವ ಸಮಯ'ದ ತಿಪ್ಪಣ್ಣ, ಶಾಮಲ ಮತ್ತು ಶಾಮಲಳ ತಂದೆ–ಇವರೆಲ್ಲರೂ ಅವರ ಜೀವನ ವೃತ್ತಾಂತ –ಚರಿತ್ರೆ ಮತ್ತು ಸಮಾಜರಚನೆ ಈ ಎಲ್ಲ ಹಿನ್ನೆಲೆಗಳನ್ನು ಮೀರಿ ನಮ್ಮ ಅರಿವಿ ನಾಚೆಯ ನಿಗೂಢಕ್ಕೆ ಸಲ್ಲುವ ಬಗೆಯನ್ನು ನೋಡಬಹುದು. 'ವೃಕ್ಷದ ವೃತ್ತಿ'ಯ ಪಾರ್ವತಿಯನ್ನು ನೋಡಿ. ಅವಳು ಮನುಷ್ಯ ಪ್ರಭೇದವನ್ನು ಮೀರಿ ನಿಗೂಢವಾದ ವೃಕ್ಷಗಳ ಮತ್ತು ಹಕ್ಕಿಗಳ ಪ್ರಪಂಚಕ್ಕೆ ಸೇರಿಹೋಗುತ್ತಾಳೆ. 'ತೋಟದವನು' ಕಥೆಯ ತಮ್ಮಣ್ಣ ಕೂಡ ವಸ್ತುಪ್ರಪಂಚದ ಕಕ್ಷೆಯಿಂದ 'ಕಣ್ಣಿಗೆ ಕಾಣದ ವಿಷಯದತ್ತ' ಜಿಗಿದು ನಿಗೂಢಕ್ಕೆ ಸಂದುವ ಪರಿಯನ್ನು ಸೂಚಿಸುತ್ತಾನೆ. ಇಂಥ ಸಂದಿಗ್ಧಕ್ಕೆ ಕಾರಣ ವಾಗುವುದು ಕೇವಲ ಈ ತರದ ಧನಾತ್ಮಕ ನಿಗೂಢತೆಯಷ್ಟೇ ಅಲ್ಲ. ಹಿಪಾಕ್ರಸಿ ಕೂಡ ಅವನ ತೊಳ್ಳೆ ಮೀನಿನ ವ್ಯಕ್ತಿತ್ವದ ಹಿಂದಿದೆ. 'ದಾಹ' ಕಥೆಯ ಬಸು ಇಂಥದೇ ವ್ಯಕ್ತಿ.

'ಸುಭದ್ರ'ದ ನಾಯಕಿ, 'ಕೃತಜ್ಞತೆ'ಯ ನಿರ್ಮಲಾ ಮತ್ತು ಪ್ರಕಾಶ ಮತ್ತು 'ಉರಿದ ಊರಿನ' ಚಲುವಿ ಮತ್ತು ಭೈರಪ್ಪ 'ಮುಟ್ಟಿಸಿಕೊಂಡವನು' ಕಥೆಯ ಬಸಲಿಂಗ ಇವರೆಲ್ಲ ಸಾಮಾಜಿಕ ಅಂಶದ ವಿಪರೀತ ಗ್ರಹಿಕೆಯಲ್ಲಿ ಆತ್ಮಕಥೆಯನ್ನು ಕಲೆಸಿಹಾಕಿಕೊಂಡು ಪಿಪಾಕ್ರಸಿಗೆ ಬಲಿಯಾದವರು. ಆ ಮೂಲಕ ಇವರೆಲ್ಲ ಅರಕೆಗೊಂಡು ಪೂರ್ಣಗ್ರಹಿಕೆಯ ದೃಷ್ಟಿಗೆ ಸಿಕ್ಕದೇ ಹೋಗುತ್ತಾರೆ. 'ಕಣ್ಮರೆ' ಕಥೆಯ ಸಾವಿತ್ರಿ ಮತ್ತು ಭ್ರಮರಾ ಇವರನ್ನು ನೋಡಿ. ಇವರಿಬ್ಬರದು ಎರಡು ವಿಭಿನ್ನ ದಿಕ್ಕಿನಲ್ಲಿಯ ಪ್ರಯೋಗಗಳು. ಭ್ರಮರಾ ತನ್ನ ವ್ಯಕ್ತಿತ್ವಕ್ಕಿಂತ ಸಮಾಜದ ನೆಲೆಗೆ ಹೆಚ್ಚು ಮಹತ್ವ ಕೊಟ್ಟು ತನ್ನನ್ನು ಅರ್ಪಿಸಿಕೊಂಡವಳು. ಸಾವಿತ್ರಿ ತನ್ನ ವ್ಯಕ್ತಿತ್ವಕ್ಕೆ ಹೆಚ್ಚು ಅರ್ಪಿತಳಾದವಳು. ಸಾಮಾಜಿಕ ನೆಲೆಯ ಬಗ್ಗೆ ಅವಳದು ಉಪೇಕ್ಷೆಯ ನಿಲುವು. ಆದರೆ ಈ ಎರಡೂ ವ್ಯಕ್ತಿತ್ವಗಳು ಅಸಫಲತೆಯತ್ತ, ದುರಂತದತ್ತ ಚಲಿಸುವಲ್ಲಿ, ಮನುಷ್ಯ ಮೂರು ಮುಖವಾದ ಎಳೆತಗಳ ನಡುವೆ ಸಿಕ್ಕುಹಾಕಿಕೊಂಡಿರುವುದರ ಅರಿವು ಮೂಡುತ್ತದೆ.

ಸಂಕಲನದ ಬೆನ್ನುಡಿಯನ್ನು ಬರೆಯುತ್ತ ಶ್ರೀ ಲಂಕೇಶ್ ಅವರು, 'ನನ್ನ ಹಿಂದಿನ ಕಥೆಗಳ ಗರ್ಭದಿಂದಲೇ ಈ ಕಥೆಗಳ ಹುಟ್ಟು ಆಗಿದೆ ಎಂದು ನನಗನ್ನಿಸಿದೆ. ಇಲ್ಲಿ ಮೊದಲ ಕಥೆಗಳಲ್ಲಿಲ್ಲದ ಸಾಮಾಜಿಕ ತಿಳುವಳಿಕೆಯ ಜೊತೆಗೇ ಮಾಂತ್ರಿಕತೆಯ ತೀವ್ರತೆಯನ್ನು ನಾನು ಗಮನಿಸಿದ್ದೇನೆ....' ಎನ್ನುತ್ತಾರೆ. ಈ ಸಾಮಾಜಿಕ ತಿಳುವಳಿಕೆಯ ಬಗೆಗೆ ನಾನು ವಿವರವಾಗಿ ಚರ್ಚಿಸಿದ್ದೇನೆ. ಅದು ಸಮಾಜಶಾಸ್ತ್ರಜ್ಞನ ರೀತಿಯ ಖಚಿತವಾದ ತಿಳುವಳಿಕೆ. ಇಂಥ ನಿರ್ದಿಷ್ಟತೆ ಕಥೆಗಳ ಸದ್ಯೋಜಾತ ನವನೀತದ ಗುಣಕ್ಕೆ ಹಾನಿಯುಂಟುಮಾಡುತ್ತದೆನಿಸುತ್ತದೆ. ಲಂಕೇಶ್ ಅವರ ಸಾಮಾಜಿಕ ತಿಳುವಳಿಕೆಯ ಧ್ವನಿಯು ಕಥೆಯ ವಿವರಗಳನ್ನು ನಿಯಂತ್ರಿಸುವ ರಿಂಗ್ ಮಾಸ್ಟರ್‌ನಂತೆ ಇಣುಕುತ್ತದೆನ್ನುವ ಭಾಸವಾಗುತ್ತದೆ. ಇನ್ನು ಮಾಂತ್ರಿಕತೆಯ ತೀವ್ರತೆಯ ವಿಷಯವಾಗಿ ಹೇಳುವುದಾದರೆ, 'ಕಲ್ಲು ಕರಗುವ ಸಮಯ', 'ವೃಕ್ಷದ ವೃತ್ತಿ' ಮತ್ತು 'ದೇವಿ' ಈ ಯಶಸ್ವೀ ಕಥೆಗಳ ಹಿನ್ನೆಲೆಯಲ್ಲಿ ಮಾತ್ರ ಈ ಮಾತು ನಿಜವೆನಿಸುತ್ತದೆ.

—ರಾಘವೇಂದ್ರ ಪಾಟೀಲ

ಸೆಪ್ಟೆಂಬರ್–ಅಕ್ಟೋಬರ್ ೧೯೮೦/೮೧

ತಲೆದಂಡ (ನಾಟಕ)

ಲೇಖಕರು: **ಗಿರೀಶ್ ಕಾರ್ನಾಡ**

ಪ್ರಕಾಶಕರು: ಮನೋಹರ ಗ್ರಂಥಮಾಲೆ, ಧಾರವಾಡ-11

ಪುಟಗಳು: 128+x. ಬೆಲೆ: ರೂ. 25-00

ಗಿರೀಶ್ ಕಾರ್ನಾಡರ ಈ ಆರನೇ ನಾಟಕ ಹನ್ನೆರಡನೇ ಶತಮಾನದ ಕಲ್ಯಾಣ ಕ್ರಾಂತಿಯನ್ನು ಕುರಿತದ್ದು. ಬಸವಣ್ಣ ಮಾಡಹೊರಟ ಸಾಮಾಜಿಕ ಕ್ರಾಂತಿ ಕಲ್ಯಾಣದ ರಕ್ತಕ್ರಾಂತಿಯಾಗಿ ಮಾರ್ಪಟ್ಟ ದುರಂತದ ಬಗ್ಗೆ ವಚನಗಳು, ಶಾಸನಗಳು ಹಾಗೂ ಕಾವ್ಯವಲ್ಲದೆ ಜಾನಪದ ಪ್ರಸಂಗಗಳಿಂದ ಹೆಕ್ಕಿ ತೆಗೆದು ರೂಪಿಸಲ್ಪಟ್ಟ ಅನೇಕ ಕಥಾನಕಗಳು ಪ್ರಚಲಿತದಲ್ಲಿವೆ. ತಾವು ಕೂಡ ಇಂತಹ ಅನೇಕ ಆಧಾರಗಳ ಅಧ್ಯಯನ ಮಾಡಿಯೇ ಈ ನಾಟಕ ಬರೆದಿರುವುದಾಗಿ ಕಾರ್ನಾಡರು 'ಕೃತಜ್ಞತೆ'ಗಳಲ್ಲಿ ಹೇಳಿರುವರಾದರೂ, ಹಲವು ನಿರ್ಣಾಯಕ ಘಟ್ಟಗಳಲ್ಲಿ ನಾಟಕ ಈ ಕಥಾನಕಗಳಿಂದ ಭಿನ್ನವಾಗುತ್ತಾ ಹೋಗುತ್ತದೆ. ಮುಖ್ಯವಾಗಿ ಈ ಭಿನ್ನತೆ ಎದ್ದು ಕಾಣುವುದು ಬಿಜ್ಜಳನ ಪಾತ್ರನಿರ್ಮಿತಿಯಲ್ಲಿ. ಈ ನಾಟಕದಲ್ಲಿ ಬಿಜ್ಜಳ ತನ್ನ ಕೊಲೆಯಾಗುವ ಕ್ಷಣದವರೆಗೂ ಬಸವಣ್ಣನನ್ನೇ 'ವ್ಯಸನ' ಮಾಡಿಕೊಂಡಿರುತ್ತಾನೆ. ಹರಳಯ್ಯ-ಮಧುವರಸರ ಮಕ್ಕಳ ನಡುವಣ 'ವಿಷಮ ವಿವಾಹ' ಉಂಟುಮಾಡುವ ಅನಾಹುತದ ಅರಿವಿದ್ದೂ ಈ 'ವ್ಯಸನ'ದಿಂದಾಗಿ ಆ ವಿವಾಹಕ್ಕೆ ರಕ್ಷಣೆ ಕೊಡುತ್ತಾನೆ.

ಇತಿಹಾಸ ಪುರಾಣಗಳೆರಡೂ ಕಲೆತ ಇಂತಹ ಕಥೆಗಳಲ್ಲಿ ಈ ರೀತಿಯ ಬದಲಾವಣೆ ಎಷ್ಟರಮಟ್ಟಿಗೆ ಸಮರ್ಥನೀಯ ಎಂಬುದು ವಿಚಾರಾರ್ಹವಾದರೂ, ಈ ಬದಲಾವಣೆ ನಾಟಕಕಾರರಿಗೆ ಬಿಜ್ಜಳನನ್ನು 'ತುಘಲಕ್' ಎರಕದಲ್ಲಿ ಪುನರ್ರೂಪಿಸುವಲ್ಲಿ ನೆರವಾಗಿದೆ ಎಂಬುದಂತೂ ಇಡೀ ನಾಟಕದುದ್ದಕ್ಕೂ ನಿಚ್ಚಳವಾಗುತ್ತಾ ಹೋಗುತ್ತದೆ. ಒಂದು ಕಡೆ ಜಾತಿಗ್ರಸ್ತ ಊಳಿಗಮಾನ್ಯ ಸಮಾಜವನ್ನು ಸಮಾಧಾನದಲ್ಲಿರಿಸಿಕೊಂಡು ನಡೆಸಿಕೊಂಡು ಹೋಗಬೇಕಾದ ರಾಜ್ಯಭಾರ, ಮತ್ತೊಂದೆಡೆ ಬಸವಣ್ಣನ ಜಾತಿವಿನಾಶದ, ಸರ್ವಸಮಾನತೆಯ ಆದರ್ಶಗಳ ಆಕರ್ಷಣೆ-ಇವೆರಡರ ನಡುವೆ ಬಿಜ್ಜಳನ ವ್ಯಕ್ತಿತ್ವ ಅಲ್ಲೋಲಕಲ್ಲೋಲವಾಗುವುದರಲ್ಲಿ ಹುಟ್ಟುವ ವಿಷಾದ 'ತುಘಲಕ್'ನ ದುರಂತದಲ್ಲಿ ಹುಟ್ಟುವ ವಿಷಾದವೇ ಆಗಿದೆ. ಇಡೀ ನಾಟಕದ ಮುಖ್ಯಧ್ವನಿ ಈ ವಿಷಾದವೇ ಆಗಿದೆ ಎಂಬರ್ಥದಲ್ಲಿ ಬಿಜ್ಜಳನೇ ಈ ನಾಟಕದ (ದುರಂತ) ನಾಯಕ; ನಾಟಕ ತನ್ನೆಲ್ಲ ಅರ್ಥಗಳನ್ನೂ ಹೊಮ್ಮಿಸುತ್ತಾ ಹೋಗುವುದೂ ಬಿಜ್ಜಳನ ಪಾತ್ರವಿನ್ಯಾಸದ ಮೂಲಕವೇ.

'ತಲೆದಂಡ' ಮುಖ್ಯವಾಗಿ ಜಾತಿಪದ್ಧತಿಯಲ್ಲಿ ಅಡಗಿರುವ ದುರಂತವನ್ನು, ದೊರೆಯಾದರೂ ಜಾತಿ ಅವಮಾನದಿಂದ ಒಳಗೊಳಗೇ ಸುಲಿಯುವ ಬಿಜ್ಜಳನ ("....ನನ್ನ ರಾಜ್ಯದಾಗ ಸಣ್ಣಾತಿಸಣ್ಣ ಕೂಸಿಗೆ ಕೇಳಿದರೂ ಅದು ತಟ್ಟಂತ ಹೇಳತೈತಿ: ಕಳಚೂರ್ಯ ಪೆರ್ಮಾಡಿಯ ಮಗ ಬಿಜ್ಜಳನ ಜಾತಿ ಯಾವುದು ? ಕ್ಷೌರಿಕನದು.... ಜಾತಿ ಅಂದರ ಮೈ ತೊಗಲಿದ್ಧಾಂಗ. ಅದನ್ನು ಸುಲಿದು ಕಿತ್ತು ತಕ್ಕೊಟ್ಟರೂ, ಹೊಸ ತೊಗಲು ಬಂದ ಗಳಿಗ್ಗೆ ಎಲ್ಲರ ಕಣ್ಣಿಗೆ ಬೀಳೋದ ಅದ್ರ- ಅದೇ ಹಳೇ ಜಾತಿ. ನನ್ನ ಈ ಅರವತ್ತೆರಡು ವರ್ಷದ ಆಯುಸ್ಸಿನಾಗ ಜಾತಿಯ ಹಂಗಿಲ್ಲದ ನನ್ನನ್ನು ಕಣ್ಣಾಗ ಕಣ್ಣಿಟ್ಟು ನೋಡಿದವ ಅಂದರ ಬಸವಣ್ಣ, ಅವ–ಅವನ ಶರಣರು. ತಾಯಾಣೆ ಹೇಳತೀನಿ ಅವರು ಮಾತಾಡಿದರ ನಾನೂ ಒಬ್ಬಮನಶ್ಯಾ ಅನಸತೈತಿ....") ದುರಂತದ ಮೂಲಕ ಧ್ವನಿಸುವ ಪ್ರಯತ್ನ ಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ ಶರಣ ಚಳುವಳಿಯ–ಹಾಗೆಯೇ ಸದ್ಯದ ಜಾತಿ ವಿರೋಧಿ ಚಳುವಳಿಗಳ–ಶಕ್ತಿ, ದೌರ್ಬಲ್ಯ ಗಳೆರಡನ್ನೂ ಮೌಲ್ಯಮಾಪನ ಮಾಡುವ ಪ್ರಯತ್ನವೂ ಸೇರಿಕೊಂಡು ನಾಟಕಕ್ಕೆ ಒಂದು ನೆಲೆಯಲ್ಲಿ ಸಮಕಾಲೀನತೆಯ ಚೌಕಟ್ಟು ಪ್ರಾಪ್ತವಾಗುತ್ತದೆ.

ಜಾತಿ ವ್ಯವಸ್ಥೆ ವಿರುದ್ಧ ಸಮರ ಸಾರಿರುವ ಬಸವಣ್ಣ; 'ನೀ ಇಲ್ಲೀ ಮಟ ಏಸು ಪವಾಡಮಾಡೀ ಹೇಳಬಾರದ ಬಸವಣ್ಣ?' ಎಂದು ಬಸವಣ್ಣನನ್ನು ಪವಾಡಪುರುಷ ನನ್ನಾಗಿ ಕಾಣಬಯಸುವ ಜನಸಮೂಹ; 'ವೈಷಮ್ಯ ನಿಸರ್ಗದೊಳಗ ಅದ; ಸ್ಪರ್ಧೆ, ಘರ್ಷಣೆ, ಹಿಂಸೆ ಎಲ್ಲಾ ಪ್ರಕೃತಿಜನ್ಯ ಗುಣ. ಅದರೆ ಜಾತಿ ವ್ಯವಸ್ಥೆ ಅವನ್ನ ನಿಯಂ ತ್ರಣದಾಗಿಡತದ ... ಯಾರಿಗೂ ಬಗಿಹರಿಯದಂಥ ಸಮತೆಗಿಂತ ಎಲ್ಲರಿಗೂ ತಕ್ಕಮಟ್ಟಿ ಗಾದರೂ ಒಗ್ಗೋ ವೈಷಮ್ಯ ಲೇಸು....' ಎಂದು ವಿಶ್ಲೇಷಿಸುತ್ತಾ, ಮೊದ್ದನೂ, ಹೇಡಿಯೂ ಆದ ಯುವರಾಜ ಸೋವಿದೇವನನ್ನು ರಾಜಕೀಯ ದಾಳವಾಗಿ ಬಳಸಲು ದ್ಯುಕ್ತವಾಗುವ ಪುರೋಹಿತಶಾಹಿ; ತಮ್ಮ ಮಕ್ಕಳ ವಿವಾಹ ನೆರವೇರಿಸುವ ಮೂಲಕ ಬಸವಣ್ಣನ ಕ್ರಾಂತಿಕಿರೀಟವನ್ನು ಸಿಂಗರಿಸಬಯಸುವ ಹರಳಯ್ಯ–ಮಧುವರಸರು; 'ನಾನು ಜನಿವಾರನೂ ಕಳಕೊಂಡೆ. ಇಷ್ಟಲಿಂಗನೂ ಕಳಕೊಂಡೆ. ಇದಕ್ಕೆ ತಕ್ಕ ಪ್ರಾಯಶ್ಚಿತ್ತ ಯಾವುದು?' ಎಂದು ಒರಲುತ್ತಾ ರಕ್ತಪಿಶಾಚಿಯಂತಾಗುವ ಜಗದೇವ –ಇವರೆಲ್ಲ ಸೃಷ್ಟಿಸುವ ಅಸಂಗತ ನಾಟಕಕ್ಕೆ ತನ್ನ ರಾಜಕೀಯ ಚಾಣಾಕ್ಷತೆಯ ಮೂಲಕ ಒಂದು ಅರ್ಥ ಸಾಂಗತ್ಯವನ್ನು ತರಲು ಹೆಣಗುವ ಬಿಜ್ಜಳ ಕೊನೆಗೆ "ಹುಟ್ಟಾ ಪವಾಡಕ್ಕಾಗಿ ಹಂಬಲಿಸಿ ಕೂತವಗ ಮಾತ್ರ ಪವಾಡ ಕಂಡ ಗಳಿಗ್ಗೆ ಅದರ ಗುರ್ತು ಹತ್ತತೈತಿ, ಉಳಿದವರಿಗೆ ಹೇಳಿದ್ದಲ್ಲದು" ಎಂದು 'ವಿಷಮ ವಿವಾಹ'ವನ್ನು ಪವಾಡ ವೆಂದು ಅರ್ಥೈಸುವ ಆಳಕ್ಕಿಳಿದು ವಾಸ್ತವ ರಾಜಕಾರಣ ಹಾಗೂ ಸಾಮಾಜಿಕ ನ್ಯಾಯಗಳ ನಡುವಣ ಗೊಂದಲದಲ್ಲಿ ಬಂಧಿಯಾಗುತ್ತಾನೆ.

ಸೆಪ್ಟೆಂಬರ್–ಅಕ್ಟೋಬರ್ ೧೯೯೦/೭೩

ನಾಟಕವಾಗಿ ಈ ಇಡೀ ದುರಂತ ಅರ್ಥಪೂರ್ಣವೂ, ಪರಿಣಾಮಕಾರಿಯೂ ಆಗಿ ಮೂಡಿಬಂದಿದೆಯಾದರೂ, ಈ ಮೊದಲೇ ಪ್ರಸ್ತಾಪಿಸಿದಂತೆ, ಇತಿಹಾಸವನ್ನು ಕಲಾವಿದ ಪುನರ್ಸೃಷ್ಟಿಸುವಾಗ ಆತನ ಸೃಜನಶೀಲ ಸ್ವಾತಂತ್ರ್ಯ ಯಾವ ಮಿತಿಗಳ ವರೆಗೆ ಕೆಲಸ ಮಾಡಬಹುದು ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ. ಏಕೆಂದರೆ ಈ ನಾಟಕದ ನಿರ್ಣಾಯಕ ಘಟ್ಟಗಳು ನಿಂತಿರುವುದೇ ಇತಿಹಾಸದ ದೃಷ್ಟಿಯಿಂದ ಬಹುಶಃ ಒಪ್ಪಿತವಾಗದ ಸಂಗತಿಗಳ ಮೇಲೆ. ಉದಾಹರಣೆಗೆ ಹರಳಯ್ಯ ಮಧುವರಸರು ತಮ್ಮ ಮಕ್ಕಳ ವಿವಾಹವನ್ನು ಬಲವಂತವಾಗಿ ನಿರ್ಧರಿಸಿ ಬಸವಣ್ಣನ ಮೇಲೆ ಹೇರುವುದು; ಬಸವಣ್ಣ ಅರ್ಧ ಮನಸ್ಸಿನಿಂದಲೇ ಅದನ್ನೊಪ್ಪಿ ಮಾನ್ಯ ಮಾಡುವುದು; ಈ ಹಿನ್ನೆಲೆಯಲ್ಲಿ ಶರಣ ಸಮೂಹ ಬಸವಣ್ಣನನ್ನೇ ಅನುಮಾನದಿಂದ ನೋಡುವುದು; ತಮ್ಮನ್ನು ಬೆಳೆಸಿ ಒಂದು ಶಕ್ತಿಯನ್ನಾಗಿ ಮಾರ್ಪಡಿಸಿದ ಬಸವಣ್ಣ ಬಿಜ್ಜಳನನ್ನು ಬಂಧನದಿಂದ ಬಿಡಿಸಲು ಮುಂದಾದಾಗ ಶರಣ ಸಮೂಹ ಬಸವಣ್ಣನಿಗೇ ಮಾತು ತಿರುಗಿಸಿ ಹಿಂಜರಿಯುವುದು; ತನಗೆ ಸದಾ ಬೆಂಬಲವಾಗಿ ನಿಂತ ಬಿಜ್ಜಳನ ಜೀವ ನ್ಮರಣ ಘಳಿಗೆಯಲ್ಲಿ ಬಸವಣ್ಣ ಭೋಳೆ ಪ್ರಜಾತಂತ್ರವಾದಿಯಂತೆ ವರ್ತಿಸಿ, ಕೊನೆಗೆ "ಯಾರ ಹೆಸರು ? ಯಾರ ರೂಪ ? ಯಾರ ಗಾಯ ? ಯಾರ ನೆತ್ತರು ? ಈ ಹೆಣ ನನ್ನದು. ಬಿಜ್ಜಳನ ಹಂತಕನೂ ನಾನ್ಯ. ಪ್ರಭುದೇವರು ನಡೆಸಿದ ಮೆರವಣಿಗೆಯೊಳಗ ಇದ್ದ ಕೊನೀ ಪ್ರಸಂಗ. ವೇಷ ಮುಗಿದವು, ಉತ್ಸವ ಮುಗೀತು, ಇರುಳು ಕಳೀತು, ಈಗ ಬೀದಿಯೆಲ್ಲ ಬರಿದು. ಶಬ್ದ ಮುಗ್ಧ. ಕೂಡಲ ಸಂಗಮದೇವ ಇನ್ನು ಈ ಗರ್ಭ ಗುಡಿಯನ್ನು ನಿನ್ನ ಜ್ಯೋತಿಯ ಕುಡಿಯಲ್ಲಿ ಹೀರಿಕೊಂಡು ಬಿಡು ತಂದೆ. ಬೆಳಕು, ಬೆಳಗಿನೊಳಗೆ ಬೆಳಗು, ಮಹಾ ಬೆಳಗು" ಎಂದು ಭಾಷಣ ಬಿಗಿದು ಎಲ್ಲವನ್ನೂ ಪೂರ್ವ ಸಿದ್ಧತೆ ಮಾಡಿಕೊಂಡಂತೆ ಕೂಡಲ ಸಂಗಮದಲ್ಲಿ ನಿವೃತ್ತನಾಗುವುದು–ಇವೆಲ್ಲವೂ ಶರಣ ಚಳುವಳಿ, ಕೇವಲ ಹುಂಬರ, ಭೋಳೆ ಜನರ ಚಳುವಳಿ ಎಂಬ ನಿರ್ಣಯಕ್ಕೆ ನಮ್ಮನ್ನು ದೂಡುತ್ತದೆ. ಆದರೆ ಈ ಚಳುವಳಿ ನಮಗೆ ಬಿಟ್ಟು ಹೋಗಿರುವ ಸಾಹಿತ್ಯ, ಈ ಚಳುವಳಿ ಪಡೆದುಕೊಂಡಿರಬಹುದಾದ ಅಗಲ ಮತ್ತು ಮುಟ್ಟಿರಬಹು ದಾದ ಎತ್ತರಗಳ ಬೇರೆ ಚಿತ್ರವನ್ನೇ ನಮಗೆ ಕೊಡುತ್ತದೆ. ಈ ದೃಷ್ಟಿಯಿಂದ ಇತಿಹಾಸದ loose endಗಳನ್ನು ಜೋಡಿಸಲು ಕಾರ್ನಾಡರು ಆರಿಸಿಕೊಂಡಿರುವ ಮಾರ್ಗ ಅನುಮಾನಾಸ್ಪದವೆನ್ನಿಸುತ್ತದೆ.

ಇಷ್ಟಾದರೂ, ಓದಲು (ಬಹುಶಃ ನೋಡಲು ಕೂಡಾ) ಖುಷಿ ಕೊಡುವ ಮತ್ತು–ಮಂಡಲ್‌ಗೆ ರಾಮಬಾಣ ನೆಟ್ಟ ಇಂದಿನ ಸಾಮಾಜಿಕ ಸಂದರ್ಭದಲ್ಲಿ–ವಿಚಾರಕ್ಕೆ ಹಚ್ಚುವ ನಾಟಕ ಇದು.

—ಡಿ. ಎಸ್. ನಾಗಭೂಷಣ

ಮೊದಲ ನೋಟ

ಪ್ರಾಪ್ತಿ (ಕಥೆಗಳು)

ಲೇಖಕರು: **ಸಿ. ಎನ್. ರಾಮಚಂದ್ರ**

'ಪ್ರಾಪ್ತಿ' ಸಂಕಲನದ ಕಥೆಗಳು ವಿಫಲತೆಯನ್ನು ಧ್ಯಾನಿಸುತ್ತವೆ. ಸಂಬಂಧಗಳು, ನೆನಪುಗಳು, ಬದುಕು ಇವೆಲ್ಲ ವಿಫಲತೆಯ ದಾಳಿಗೆ ಸಿಕ್ಕು, ಉಧ್ವಸ್ತಗೊಂಡ ಚಿತ್ರಗಳನ್ನು ಕಟ್ಟಿಕೊಡಲು ಈ ಕಥೆಗಳು ಪ್ರಯತ್ನಿಸುತ್ತವೆ. ಆದರೆ ಈ ಕಥೆಗಳು ಸಹಜವಲ್ಲದ ಗಾಂಭೀರ್ಯ ಮತ್ತು ಬೌದ್ಧಿಕ ಪರಿಸರದಲ್ಲಿ ಮೊಳೆತಂತೆ ತೋರುತ್ತವೆ. ಕಥೆಗಳು ಉದ್ದೇಶಪೂರ್ವಕವಾದ (deliberate) ಪ್ರಯತ್ನಗಳಂತೆ ತೋರುತ್ತವೆ. ಕಥೆಗಳಲ್ಲಿ ನಿರೂಪಿತವಾಗುವ ದೃಷ್ಟಿಕೋನ ಪಾಸಿಟಿವ್ ಆಗುವುದಿಲ್ಲ. ಕಥೆಗಳಲ್ಲಿ ನಿರೂಪಿತವಾಗುವ ನಿಲುವು ಧನಾತ್ಮಕವಾದದ್ದೇ ಆಗಬೇಕೆನ್ನುವುದು ಇದರ ಅಭಿಪ್ರಾಯವಲ್ಲ. ಆದರೆ ಪಾಸಿಟಿವ್ ಅಲ್ಲದ ನಿಲುವನ್ನು ಅಭಿಜಾತ ರೀತಿಯಲ್ಲಿ, ಶೋಧನೆಯ ರೀತಿಯಲ್ಲಿ ತಲುಪಿದಾಗ ಕಥೆಗಳು ಸಫಲವಾಗುತ್ತವೆ. ಈ ಸಂಕಲನದ ಕಥೆಗಳ ರೀತಿ ಅಂಥದಲ್ಲ.

ಕಾಲ (ಕಥೆಗಳು)

ಲೇಖಕರು: **ಜಯಪ್ರಕಾಶ ಮಾವಿನಕುಳಿ**

ಇಲ್ಲಿನ ಬಹುತೇಕ ಕಥೆಗಳು ಹೆಣ್ಣು–ಗಂಡಿನ ಸಂಬಂಧವನ್ನು ಕೇಂದ್ರವಾಗಿಟ್ಟುಕೊಂಡಿದ್ದು ನವ್ಯ ಫಾರ್ಮುಲಾದ ವಾಸನೆ ಬೀರುತ್ತವೆ. ಈ ಕಥೆಗಳ ಮುಖ್ಯ ತೊಂದರೆ ಎಂದರೆ ಕಥೆಗಳ ವಸ್ತು ಮತ್ತು ಬಂಧ (ಶೈಲಿ) ಜೊತೆ ಜೊತೆಯಾಗಿ ಸಾಗುವುದಿಲ್ಲ. ಶೈಲಿಯ ಗಾಂಭೀರ್ಯ ಮತ್ತು ವಸ್ತುವಿನ ಗಾಂಭೀರ್ಯವಲ್ಲದ ಗ್ರಹಿಕೆ ಒಂದಕ್ಕೊಂದು ತಳಕು ಹಾಕಿಕೊಂಡು ಅತೃಪ್ತಿಯನ್ನು ಹುಟ್ಟಿಸುತ್ತವೆ.

ಮತ್ತೆ ಸೂರ್ಯ ಬರುತ್ತಾನೆ (ಕವನ)

ಲೇಖಕರು: **ಲೋಕೇಶ ಅಗಸನಕಟ್ಟೆ**

ಈ ಸಂಕಲನದಲ್ಲಿರುವ ಸುಮಾರು ಇಪ್ಪತ್ತೈದು ಕವಿತೆಗಳಲ್ಲಿ ವೈವಿಧ್ಯಮಯವಾದ ಸಮಕಾಲೀನ ಆಸಕ್ತಿಗಳು ಹರಡಿಕೊಂಡಿವೆ. ಪ್ರಬಲ ಶಕ್ತಿಯುತ ಸಾಲುಗಳು, ಲಯದ ಮೇಲೆ ಹತೋಟಿ, ಕಹಿಯಿಲ್ಲದೆ ಕೆಲವು ನಿಷ್ಠುರ ಸತ್ಯಗಳನ್ನು ಹೇಳುತ್ತ, ಮೂಲಭೂತ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತ, ವೈರುಧ್ಯಗಳನ್ನು ಮುಖಾಮುಖಿಯಾಗಿಸುವ ರೀತಿ ಇವರ ವೈಶಿಷ್ಟ್ಯವೆಂಬಂತಿದೆ.

'ಸೃಷ್ಟಿ'ಯ ನಾಟಕೀಯವಾದ ಗೇಲಿ, 'ಮತ್ತೆ ಸೂರ್ಯ ಬರುತ್ತಾನೆ'ಯಲ್ಲಿ ವಾಸ್ತವದ ಅರಿವನ್ನು ಕಳೆದುಕೊಳ್ಳದ ಅದಮ್ಯ ಆಶಾವಾದ, 'ನಾಗಲಿಂಗ'ದಲ್ಲಿ ತತ್ವಗಳೆಲ್ಲ ವಾಸ್ತವದಲ್ಲಿ ವ್ಯವಸ್ಥೆಯಾಗುವುದರ ಬಗ್ಗೆ ಆಳವಾದ ನೋವು, ಆರ್ತತೆ ಗಳು ಗಮನ ಸೆಳೆಯುವಂತಿದೆ. 'ವರ್ತಮಾನ' ಯಾವ ಪುರಾಣ ಪ್ರತಿಮೆಯ ಹಂಗಿಲ್ಲದೆ ಇದೇ ವಿಷಯವನ್ನು ಸಮಕಾಲೀನತೆಯಲ್ಲಿ ಹಿಡಿದುಕೊಟ್ಟಿದೆ.

ಕವನದುದ್ದಕ್ಕೂ ಸಂಯಮದ ನಿರೂಪಣೆ, ಕವನದ ಕೊನೆಯಲ್ಲಿ ಹೊಸತಿರುವು ಕೊಡುವ ಅಭಿವ್ಯಕ್ತಿಯ ಚುರುಕು ಇವರ ಕಾವ್ಯದ ಗಮನ ಸೆಳೆವ ಅಂಶಗಳು. ಈ ಕವಿ ಎದುರಿಸಿ ಬೆಳೆಯಬೇಕಾದ ಒಂದು ಮುಖ್ಯ ಸವಾಲೆಂದರೆ ಲಯದ ಮೇಲಿನ ಹತೋಟಿಯಿಂದ ಹುಟ್ಟುವ ಪ್ರಬಲ ಶಕ್ತಿಯುತ ಸಾಲುಗಳ, ಪದ್ಯಲಯದ ಮೋಹಿನಿಯ ಮೋಡಿಯನ್ನು ಮೀರಿ ತಾನು ಹೇಳಲೇಬೇಕಾದುದನ್ನು ಹೇಳುವುದು.

ಆಷಾಢಭೂತಿಗಳು (ಕವನ)

ಲೇಖಕರು: ವಿ. ಎಸ್. ವಾಲಿ

ವಿ. ಎಸ್. ವಾಲಿಯವರ ಈ ಪ್ರಥಮ ಕವನ ಸಂಕಲನದಲ್ಲಿ ಹನಿಗವಿತೆಗಳೂ ಸೇರಿ ಸುಮಾರು ಮೂವತ್ತು ಕವಿತೆಗಳಿವೆ. ಇಲ್ಲಿಯ ಕವಿತೆಗಳು ಪದ್ಯತ್ವಕ್ಕಿಂತಲೂ ಗದ್ಯತ್ವದ ಕಡೆಗೆ ಒಲಿಯುವುದೇ ಹೆಚ್ಚು. 'ಅಂತರ', 'ಇವ ನಮ್ಮವ', 'ಕಲಿ ಯುಗೇಶ್ವರ' ವಚನಗಳು, ಪದ್ಯಲಯದಲ್ಲಿ ಮೂಡಿವೆ. ಈ ಕವಿ ಪದದ ಅನೇಕಾರ್ಥ ಗಳನ್ನು ಜಾಣ್ಮೆಯಿಂದ ದುಡಿಸಿಕೊಳ್ಳಬಲ್ಲರು. ಅಭಿವ್ಯಕ್ತಿಯ ಚುರುಕನ್ನು ತರ ಬಲ್ಲರು. ವಿಡಂಬನೆಯು ಬೈಗುಳದಂಚಿಗೆ ಹೋಗದ ಹಾಗೆ, ಅಭಿವ್ಯಕ್ತಿಯು ಅತಿ ವಾಚಾಲವಾಗಿ ಜಾಳಾಗದ ಹಾಗೆ ಈ ಕವಿ ಎಚ್ಚರದಿಂದಿರಬೇಕಾಗಿದೆ.

ಜಾನು ಸುರಿದ ಮಾತು (ಕವನ)

ಲೇಖಕರು: ಸಿದ್ಧರಾಮ ಹಿರೇಮಠ

ಇದು ಸಿದ್ಧರಾಮ ಹಿರೇಮಠರ ಮೊದಲ ಕವನ ಸಂಕಲನ, ರೂಪಕದ ಬಳಕೆ ಇವರ ಕಾವ್ಯಕ್ಕೆ ಒಂದು ವಿಶಿಷ್ಟತೆಯ ಮುದ್ರೆಯನ್ನು ಕೊಟ್ಟಿದೆ. 'ಕನಸುಗಳೆ', 'ಸೃಷ್ಟಿ', 'ರೂಪಾ ಕನ್ವರ್'. 'ಸ್ವಾಮೀ ಪರಸಂಗ' ಈ ಕವಿತೆಗಳಲ್ಲಿ ಭಾವುಕತೆ, ಕಲ್ಪನೆ, ತುಂಟತನ, ವಾಸ್ತವದ ಅರಿವುಗಳು ಬೆಳೆಯುತ್ತಾ ಹೋಗಿದೆ. ಪ್ರೇಮಪತ್ರ ಬರೆಯುವಂಥ ಖಾಸಗಿ ಆತ್ಮೀಯ ವಿಚಾರ ಸಹ ಸಮಕಾಲೀನ ಸಮಾಜದ ನಿಯಂ ತ್ರಣಕ್ಕೆ ಒಳಪಡುವುದನ್ನು 'ಅಪ್ತ ವಾರ್ತೆ'ಯಲ್ಲಿ ಸಂಯಮದಿಂದ ಲೇವಡಿ ಮಾಡುವ ಈ ಕವಿಯ ಕಾವ್ಯ 'ಸಾವಿರದ ಆಸೆಗಳ ಸೇತುವೆ' ಕಟ್ಟದಿದ್ದರೂ ಆಶೆಯನ್ನಂತೂ ಹುಟ್ಟಿಸುತ್ತದೆ.

ಹೊಸ ಗಾಳಿ (ಕವಿತೆಗಳು)
ಲೇಖಕರು: **ಡಾ॥ ನಿಂಗಣ್ಣ ಸಣ್ಣಕ್ಕಿ**

ಜಾನಪದ ವಿದ್ವಾಂಸ ಹಾಗೂ ಆದರ್ಶ ಶಿಕ್ಷಕರೆಂದು ಹೆಸರಾಗಿರುವ ಡಾ॥ ನಿಂಗಣ್ಣ ಸಣ್ಣಕ್ಕಿ ಅವರ ಈ ಕವನ ಸಂಕಲನದಲ್ಲಿ ಎದ್ದು ಕಾಣುವುದು ಅವರ ಶಿಕ್ಷಕ ತನದ ಆದರ್ಶಗಳು ಮಾತ್ರ. ಆದರ್ಶಗಳನ್ನು ಕುರಿತ ಉದ್ಘೋಷಣೆಗಳು ಹಾಗೂ ಹಳಹಳಿಕೆಗಳು ಇಲ್ಲಿಯ ಕವನಗಳಲ್ಲಿ ಆವೇಶದ ಭಾಷೆಯಲ್ಲಿ ಬುರುಗುಗಟ್ಟಿವೆಯಷ್ಟೆ. ಡಾ॥ ಸಣ್ಣಕ್ಕಿ ಅವರಿಗೆ, ಕಾವ್ಯ ರಚಿಸುವಲ್ಲಿ ಅವರ ಜಾನಪವ ಅಧ್ಯಯನವೂ ನೆರ ವಾಗದಿರುವುದು ಸೋಜಿಗ ಉಂಟುಮಾಡುತ್ತದೆ.

ನಾಕೊಂದ್ಲ ನಾಕು (ಕವಿತೆಗಳು)
ಪ್ರ.ಸಂ.: **ಕಬ್ಬಿನಾಲೆ ವಸಂತ ಭಾರದ್ವಾಜ್**

ಬ್ಯಾಂಕ್ ಉದ್ಯೋಗಿಗಳು ರಚಿಸಿರುವ ಕವನಗಳ ಸಂಗ್ರಹವಿದು. ಇದರಲ್ಲಿ, ಈಗಾಗಲೇ ಸಾಕಷ್ಟು ಹೆಸರು ಮಾಡಿರುವ ಎಂ. ಎನ್. ವ್ಯಾಸರಾವ್, ಎಚ್. ಡುಂಡಿ ರಾಜ್ ಹಾಗೂ ಮಹಾಬಲಮೂರ್ತಿ ಕೊಡ್ಲೆಕೆರೆ ಅವರಲ್ಲದೆ ಇನ್ನೂ ಸುಮಾರು ನಲವತ್ತು ಬ್ಯಾಂಕ್ ಉದ್ಯೋಗಿಗಳು ರಚಿಸಿರುವ ಕವನಗಳಿವೆ. ಇವುಗಳಲ್ಲಿ ಬಹಳಷ್ಟು ನವೋದಯ ಕಾಲದ ಸ್ಫೂರ್ತಿಯೊಡನೆ ಬರೆಯಲ್ಪಟ್ಟವಾದರೂ, ಆಧುನಿಕ ಕನ್ನಡ ಕಾವ್ಯದ ಇತ್ತೀಚಿನ ಒಲವು–ಪ್ರಯೋಗಗಳನ್ನು ಗಮನಿಸಿರುವುದಕ್ಕೆ ಪುರಾವೆ ಯಂತಿರುವ ಕವನಗಳೂ ನಾಲ್ಕಾರಿವೆ. ಹೀಗಾಗಿ ಲೆಕ್ಕ ಪ್ರಪಂಚದಲ್ಲಿ ಕಾವ್ಯ ಕುಸುಮ ಅರಳಿಸಿಸುವ ಒಂದು ಪ್ರಯತ್ನವೆಂದು ಈ ಸಂಕಲನವನ್ನು ಸ್ವಾಗತಿಸಬಹುದಾದರೂ, ಇಲ್ಲಿರುವ ಹೆಚ್ಚಿನ ರಚನೆಗಳು ಚಟ ಅಥವಾ ಹಠದಿಂದ ಬರೆದಂತೆ ತೋರುತ್ತವೆ ಎಂಬ ಎಚ್ಚರಿಕೆಯ ಮಾತನ್ನೂ ಹೇಳಬೇಕಾಗುತ್ತದೆ. 'ನೀವು ನಿಲಿಸಿದ್ದೇಕೆ ಹೇಳಿ ಹಾಡು ವುದನ್ನು ?', 'ಅಂದು–ಇಂದು', 'ನೀ ಮೌನಿಯಾಗು', 'ನೆನಪು', 'ನಿನ್ನಾಗಮನದ ಸುದ್ದಿ', 'ಮಗು ಮತ್ತು ಚಂದ್ರ' ಹಾಗೂ 'ಭೂಮಿ ಕಂಪಿಸಿದಾಗ'–ಇವು ಇಲ್ಲಿನ ಕಾವ್ಯ ಬರೆಯುವ ಗಂಭೀರ ಪ್ರಯತ್ನಗಳು.

ಜಾನಪದ ಸ್ಪಂದನ (ಪ್ರಬಂಧ ಸಂಕಲನ)
ಲೇಖಕರು: **ಸಿ. ಕೆ. ನಾವಲಗಿ**

ಶ್ರೀ ಸಿ. ಕೆ. ನಾವಲಗಿ ಅವರ ಎಂಟು ಲೇಖನಗಳ ಸಂಕಲನ 'ಜಾನಪದ ಸ್ಪಂದನ', ಇವರೊಬ್ಬ ಒಳ್ಳೆಯ ವಿದ್ಯಾರ್ಥಿ ಎಂದು ಗುರುಗಳಾದ ಡಾ॥ ವೀರಣ್ಣ ರಾಜೂರರಿಂದ ತಿಳಿದು ಬರುತ್ತದೆ. ಗಾಳಿ, ತ್ರಿಪದಿಗಳು ಮತ್ತು ಪ್ರೇಮಗೀತಗಳ

ಬಗೆಗಿನ ಲೇಖನಗಳನ್ನು ಶುದ್ಧ ಜಾನಪದವೆನ್ನಬಹುದು. ಬದುಕಿನ ವಿಸ್ತಾರದ ವ್ಯಾಜದಿಂದ 'ಕುಲಕಸುಬುಗಳು', 'ಕಣವಿಯವರ ಕಾವ್ಯದಲ್ಲಿ ಜನಪದ' ಹಾಗೂ 'ಕೊಣ್ಣೂರಿನ ಜೈನ ಐತಿಹ್ಯ' ಈ ಲೇಖನಗಳಿವೆ. 'ಬಸವ ಸ್ಟಡೀಸ್'ನ ಬಲದೀದ 'ಜಾನಪದ ದೇವತೆಗಳು ಮತ್ತು ಬಸವಣ್ಣನವರು' ಲೇಖನ ಯೋಗ್ಯವೆನಿಸುವುದು. ಪ್ರತಿಯೊಂದು ಲೇಖನದ ಜೊತೆಗೆ ಅಡಿ ಟಿಪ್ಪಣಿಗಳು ಮತ್ತು ಆಧಾರ ಗ್ರಂಥಗಳ ಪಟ್ಟಿ ಕೊಡಲಾಗಿದೆ. ಅಧ್ಯಯನದ ಚೌಕಟ್ಟಿನಲ್ಲಿದ್ದುಕೊಂಡು ಬರೆಯಲಾಗಿರುವ ಈ ಲೇಖನಗಳು ಒಳ್ಳೆಯ ಪ್ರಯತ್ನ ಹಾಗೂ ದಾಖಲೆ.

ಪುಸ್ತಕ ಸ್ವೀಕಾರ:

೧. ಈ ನೆಲದ ಹಾಡು (ಕವನ ಸಂಕಲನ) ಲೇ: ಸ. ಉಷಾ
ಪ್ರ: ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ–577 631, ಚಿತ್ರದುರ್ಗ ಜಿಲ್ಲೆ
ಪು: viii + 50, ಬೆಲೆ: ರೂ. 15–00

೨. ಒಡಲು (ಕವನ ಸಂಕಲನ) ಲೇ: ಟಿ. ಜಿ. ಭಟ್ಟ ಹಾಸಣಗಿ
ಪ್ರ: ಆದಿತ್ಯ ಪ್ರಕಾಶನ, ಹಾಸಣಗಿ, ತಾ॥ ಯಲ್ಲಾಪುರ (ಉ.ಕ.)
ಪು: viii + 100, ಬೆಲೆ: ರೂ. 20–00

3. ರಾಜಧಾನಿಯಲ್ಲಿ ಶ್ರೀಮತಿಯರು (ಕಾದಂಬರಿ) ಲೇ: ಕೆ. ಸತ್ಯನಾರಾಯಣ
ಪ್ರ: ನೇತ್ರಾ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು–18
ಪು: viii + 92, ಬೆಲೆ: ರೂ. 12–00

೪. ನ್ಯಾಯ (ಕಥೆಗಳು) ಲೇ: ಕೋರಗಲ್ ವಿರೂಪಾಕ್ಷಪ್ಪ
ಪ್ರ: ಸಂಕ್ರಮಣ ಪ್ರಕಾಶನ, ಧಾರವಾಡ–8. ಪು: 106, ಬೆಲೆ: ರೂ. 15-00

೫. ಪ್ರವೇಶ (ಕಥೆಗಳು) ಲೇ: ವೈ. ಮಂಜುಳಾ/ಕೆ. ವೆಂಕಟೇಶ್/ಮಮತಾ ಜಿ. ಸಾಗರ
ಪ್ರ: ಪ್ರತಿಭಾ ಯುವ ವೇದಿಕೆ, ಗಾಯತ್ರಿ ನಗರ, ಬೆಂಗಳೂರು.
ಪು: 40, ಬೆಲೆ: ರೂ. 6–00

೬. ನಿಲುವು (ವಿಮರ್ಶೆ) ಲೇ: ಎಚ್. ಎಸ್. ರಾಘವೇಂದ್ರರಾವ್
ಪ್ರ: ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು–29
ಪು: viii + 320, ಬೆಲೆ: ರೂ. 60–00

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗ,

ಸಂವಾದದ ಹದಿನೇಳನೆ ಸಂಚಿಕೆಯನ್ನು ನಿಮ್ಮ ಕೈಯಲ್ಲಿಡುತ್ತಿದ್ದೇವೆ. ಸಂವಾದ ಈಗ ನಿಯಮಿತವಾಗಿ ಮಾತ್ರವಲ್ಲದೆ ತುಂಬಾ ಮೌಲಿಕವಾಗಿ ಕೂಡಾ ಬರುತ್ತಿರುವುದರ ಬಗ್ಗೆ ಅನೇಕ ಓದುಗರು ಮೆಚ್ಚುಗೆಯ ಪತ್ರಗಳನ್ನು ಬರೆದಿದ್ದಾರೆ. ಅವರೆಲ್ಲರಿಗೂ ನಮ್ಮ ಕೃತಜ್ಞತೆಗಳು. ಇದರ ಜೊತೆಯಲ್ಲಿಯೇ ನಾವು ಇನ್ನೊಂದು ವಿಷಯವನ್ನೂ ನಿಮಗೆ ತಿಳಿಸಬೇಕಾಗಿದೆ. ಪತ್ರಿಕೆ ನಿಯಮಿತವಾಗಿ ಬರುತ್ತಿದೆ ಎಂದ ಮಾತ್ರಕ್ಕೆ ಪತ್ರಿಕೆಯ ಆರ್ಥಿಕ ಸ್ಥಿತಿ ಸುಧಾರಿಸಿದೆ ಎಂದು ನಮ್ಮ ಅನೇಕರು ಭಾವಿಸಿ ದಂತಿದೆ. ಹಾಗೆಂದೇ ನಮ್ಮ ಅನೇಕ ಓದುಗರು ಇನ್ನೂ ಚಂದಾ ಬಾಕಿ ಕಳುಹಿಸುವ ಮನಸ್ಸು ಮಾಡಿಲ್ಲವೆಂದು ತೋರುತ್ತದೆ. ಇವರೆಲ್ಲರಲ್ಲಿ ನಮ್ಮ ನಮ್ರ ವಿನಂತಿ ಏನೆಂದರೆ ನಿಮ್ಮ ಭಾವನೆ ತಪ್ಪಾಗಿದ್ದು, ನಿಮ್ಮ ಚಂದಾ ಬಾಕಿ ಬರದೆ ಪತ್ರಿಕೆ ಸದೃಢ ವಾಗಲು ಸಾಧ್ಯವಿಲ್ಲವಾದ ಕಾರಣ ದಯವಿಟ್ಟು ಕೂಡಲೇ ಚಂದಾ ಕಳುಹಿಸಿ ಸಂವಾದ ಇನ್ನಷ್ಟು ಆರೋಗ್ಯಪೂರ್ಣವಾಗಿ ಬರಲು ಸಹಕರಿಸಿ.

ಈ ವಿನಂತಿಯ ಜೊತೆಗೇ ನಾವು ನಿಮಗೊಂದು ಸಂತೋಷದ ಸುದ್ದಿ ಕೂಡಾ ತಿಳಿಸಲು ಇಚ್ಛಿಸುತ್ತೇವೆ. ಈ ವರ್ಷದ ಕೊನೆಯ ಸಂಚಿಕೆ–ಅಂದರೆ ನಮ್ಮ ಮುಂದಿನ ಸಂಚಿಕೆ–ವಿಶೇಷ ಸಂಚಿಕೆಯಾಗಿ ಹೊರಬರಲಿದ್ದು, ಇದು ಕನ್ನಡದ ಪ್ರತಿಭಾವಂತ ಬರಹಗಾರರಲ್ಲೊಬ್ಬರಾದ ದಿವಂಗತ ಶ್ರೀ ಕೃಷ್ಣ ಆಲನಹಳ್ಳಿ ಅವರ ಸಾಹಿತ್ಯ ವಿಮರ್ಶೆಗೆ ಮೀಸಲಾಗಿರುತ್ತದೆ. ಈ ಸಂಚಿಕೆಗಾಗಿ ವಿಶೇಷ ಲೇಖನಗಳನ್ನು ಬರೆಯಲು ಕನ್ನಡದ ಹೆಸರಾಂತ ವಿಮರ್ಶಕರು ಈಗಾಗಲೇ ತಮ್ಮ ಒಪ್ಪಿಗೆಯನ್ನು ಸೂಚಿಸಿದ್ದಾರೆ. ಈ ಸಂಚಿಕೆಯನ್ನೇ ಇನ್ನಷ್ಟು ವಿಸ್ತರಿಸಿ ಆತನ ವ್ಯಕ್ತಿತ್ವ ದರ್ಶನದ ಬರೆಹಗಳನ್ನು ಸೇರಿಸಿ ಒಂದು ಸುಂದರ ಅಭಿನಂದನ ಗ್ರಂಥವನ್ನು ಮರಣೋತ್ತರವಾಗಿ ಈ ಪ್ರತಿಭಾವಂತ ಸಾಹಿತಿಗೆ ಅರ್ಪಿಸುವ ಆಶಯವೂ ಇದೆ. ನಮ್ಮ ಈ ಆಶಯ ನಮಗೆ ದೊರಕುವ ಆರ್ಥಿಕ ಸೌಕರ್ಯವನ್ನು ಅವಲಂಬಿಸಿದೆ ಎಂಬುದನ್ನೂ ಇಲ್ಲಿ ಸೂಚಿಸಬಯಸುತ್ತೇವೆ. ಇಲ್ಲಿ ನಾವು ಪ್ರಸ್ತಾಪಿಸಬಯಸುವ ಮತ್ತೊಂದು ವಿಷಯವೆಂದರೆ, ನೇರವಾಗಿ

ಸಾಹಿತ್ಯದೊಂದಿಗೆ ಅಲ್ಲದಿದ್ದರೂ ನಮ್ಮ ಸಾಂಸ್ಕೃತಿಕ ಲೋಕದೊಂದಿಗೆ ಸಂಬಂಧ ಪಡೆದ ನಮ್ಮ ಬುದ್ಧಿಜೀವಿ ವರ್ಗ ದೇಶದ ಇತ್ತೀಚಿನ ಅಲ್ಲೋಲಕಲ್ಲೋಲ ದಿನಗಳಲ್ಲಿ ವರ್ತಿಸಿದ ರೀತಿ. ಇದು ಮಂಡಲ್ ವರದಿ ವಿರೋಧಿ ಚಳುವಳಿಯಾಗಿರಬಹುದು ಅಥವಾ ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದದ ಕೋಮು ದಳ್ಳುರಿ ಯಾಗಿರಬಹುದು. ಕ್ಷೇಮಂಕರ ದಿನಗಳಲ್ಲಿ ಜಾತ್ಯಾತೀತರೂ, ಧರ್ಮನಿರಪೇಕ್ಷರೂ ಆಗಿ ಕಾಣುವ, ನಮ್ಮ ಪ್ರಮುಖ ಲೇಖಕರನ್ನೂ, ಪತ್ರಕರ್ತರನ್ನೂ ಒಳಗೊಂಡ ಈ ಬುದ್ಧಿಜೀವಿ ವರ್ಗ ವಾತಾವರಣ ಒಮ್ಮೆ ಕಾವೇರಿತೆಂದರೆ ಹೇಗೆ ತಮ್ಮ ನಿಜರೂಪ ಗಳಲ್ಲಿ ತಾಂಡವ ನೃತ್ಯ ಮಾಡತೊಡಗುತ್ತಾರೆ ಎಂಬುದನ್ನು ಕಂಡು ದಿಗಿಲುಂಟಾಗಿದೆ. ಅಶಾಂತರನ್ನು ಶಾಂತಗೊಳಿಸಬೇಕಾದ ಸಮಾಜದ ಈ ಗೌರವಾನ್ವಿತ ವರ್ಗ ತನ್ನ ಬಾಹ್ಯ ಸಾಂಸ್ಕೃತಿಕ ಬೆಡಗು ಬಿನ್ನಾಣಗಳ ಮರೆಯಲ್ಲಿ ಅಡಗಿಸಿಕೊಂಡಿದ್ದುದು ತನ್ನ ಜಾತೀಯ ಹಾಗೂ ಮತೀಯ ರೂಕ್ಷತೆಯನ್ನೇ ಎಂಬುದು ಈಗ ಬಯಲಾಗಿದೆ.

ಏಕೆ ಹೀಗೆ ? ನಮ್ಮ ಬಹುತೇಕ ಬುದ್ಧಿಜೀವಿ ವರ್ಗದ ಈ ಆತ್ಮವಂಚನೆಯ ವರ್ತನೆಗೆ ಕಾರಣವೇನಿರಬಹುದು ? ನಮ್ಮ ಸಾಹಿತ್ಯ ಹಾಗೂ ಸಾಂಸ್ಕೃತಿಕ ಆಂದೋ ಗಳ ಈ ಉತ್ಪನ್ನಗಳೇಕೆ ಹೀಗೆ ಖೋಟಾ ಆಗಿವೆ ? ಅಥವಾ ನಮ್ಮ ಸಾಹಿತ್ಯ ಹಾಗೂ ಸಾಂಸ್ಕೃತಿಕ ಆಂದೋಲನಗಳು ನಿಂತಿರುವುದೇ ಖೋಟಾ ಮೌಲ್ಯಗಳ ಮೇಲೆಯೋ ? ಇಂತಹ ಅನೇಕಾನೇಕ ಪ್ರಶ್ನೆಗಳನ್ನು ಈ ದಿನಗಳು ಹುಟ್ಟಿ ಹಾಕಿವೆ. ಈ ಪ್ರಶ್ನೆಗಳನ್ನು ನಮ್ಮ ಸಾಹಿತಿ ಮಿತ್ರರು ಚರ್ಚಿಸಬೇಕಿದೆ. ಏಕೆಂದರೆ ನಮ್ಮ ಸಂಸ್ಕೃತಿಯ ಸಾರಸರ್ವಸ್ವವನ್ನು ಹಿಡಿದುಕೊಡುವ ಶಕ್ತಿ ಹೊಂದಿರುವ ಸಾಹಿತ್ಯ, ಜನರ ಪ್ರಜ್ಞೆ ರೂಪುಗೊಳ್ಳುವಲ್ಲಿ ಒದಗಿಬರುವ ಮೂಲಧಾತು. ಆದರೆ ಸಾಮಾಜಿಕ ಆರೋಗ್ಯವನ್ನು ಸಂರಕ್ಷಿಸುವಲ್ಲಿ ಇಂತಹ ನಿರ್ಣಾಯಕ ಪಾತ್ರ ವಹಿಸಬಲ್ಲ ಸಾಹಿತ್ಯದ ಮುಂದೆ ಇಂದು ಇರುವ ಮೌಲ್ಯಗಳಾವುವು ? ಅವು ಮನುಷ್ಯನನ್ನು ನಿಜವಾಗಿಯೂ ಜಾತಿ-ಮತಗಳು ಕ್ಷುಲ್ಲಕವೆನಿಸುವಷ್ಟು ಎತ್ತರಕ್ಕೆ ಕೊಂಡೊಯ್ಯಬಲ್ಲ ಉದಾತ್ತತೆ ಯನ್ನೂ, ಪಾರದರ್ಶಕತೆಯನ್ನೂ ಪಡೆದಿವೆಯೆ ? ನಾವು ಈ 30–40 ವರ್ಷಗಳಲ್ಲಿ ನಡೆದು ಬಂದಿರುವ ದಾರಿಯನ್ನು ಈ ಹಿನ್ನೆಲೆಯಲ್ಲಿ ಪುನರ್ವಿಮರ್ಶಿಸಬೇಕಾದ ಕಾಲ ವೀಗ ಒದಗಿ ಬಂದಿದೆ. ಇದು ಬಹುಶಃ, ಇನ್ನೂ ನಮ್ಮ ಆದರ್ಶಗಳಾಗಿ ಸಂಪೂರ್ಣ ವಾಗಿ ಮಾಸಿ ಹೋಗದಿರುವ ಕುವೆಂಪು–ಮಾಸ್ತಿ–ಕಾರಂತ–ಬೇಂದ್ರೆಗಳ ಪುನರ್ ಶೋಧನೆಯೂ ಆಗಬಹುದು. ●

ಸಂವಾದ ಪ್ರಕಾಶನ

ಪ್ರಿಯರೇ,

ಸಂವಾದ ಪುಸ್ತಕ ಪ್ರಕಾಶನ ಈ ವರ್ಷ ಒಟ್ಟು ಸುಮಾರು ಮೂರು ನೂರು ಪುಟಗಳ ಮೂರು ಪುಸ್ತಕಗಳನ್ನು ತನ್ನ ವಾರ್ಷಿಕ ಚಂದಾದಾರರಿಗೆ ನೀಡಲಿದ್ದು ಈಗಾಗಲೇ ಮೊದಲ ಪುಸ್ತಕವನ್ನು ಬಿಡುಗಡೆ ಮಾಡಿದೆ:

ಸ. ಉಷಾ ಅವರ ಕವನ ಸಂಕಲನ

ಈ ನೆಲದ ಹಾಡು

ಪುಟಗಳು: 60 | **ಬೆಲೆ: ರೂ. 15–00**

ಎರಡನೇ ಪುಸ್ತಕ ಅಚ್ಚಿನಲ್ಲಿದೆ:

ಬಾನುಮುಷ್ತಾಕ್ ಅವರ ಕಥಾ ಸಂಕಲನ

ಹೆಜ್ಜೆ ಮೂಡಿದ ಹಾದಿ

ಪುಟಗಳು: 120 | **ಬೆಲೆ: ರೂ. 21–00**

ಮೂರನೇ ಪುಸ್ತಕ ಡಿ. ಎಸ್. ನಾಗಭೂಷಣ ಅವರ ವಿಚಾರ ವಿಮರ್ಶಾ ಲೇಖನಗಳ ಸಂಗ್ರಹ ಈ ವರ್ಷದ ಕೊನೆಯ ಹೊತ್ತಿಗೆ ಬಿಡುಗೊಳ್ಳಲಿದೆ.

ವಾರ್ಷಿಕ ಚಂದಾ **ಮುವತ್ತು ರೂಪಾಯಿಗಳನ್ನು** ನೀಡಿ ಈ ಮೂರೂ ಪುಸ್ತಕಗಳನ್ನು ಸಹೃದಯರು ಪಡೆಯಬಹುದಾಗಿದೆ.

ಮಂಜಪ್ಪ ವೈ.
ಜಿ. ಎಲ್. ರಾಮಪ್ಪ
ಸಂವಾದ ಪ್ರಕಾಶನ (ಪುಸ್ತಕ ಪ್ರಕಟಣ ವಿಭಾಗ) ಪರವಾಗಿ

ಸಂಪರ್ಕ ವಿಳಾಸ :
ಜಿ. ಎಲ್. ರಾಮಪ್ಪ
ಸಂವಾದ ಪ್ರಕಾಶನ
ಮಲ್ಲಾಡಿಹಳ್ಳಿ – 577 531 (ಚಿತ್ರದುರ್ಗ ಜಿಲ್ಲೆ)

ಈ ಸಂಕಲನದಲ್ಲಿ –